ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ
ಸಂಪುಟ 3 ಸಂಚಿಕೆ 32
ಆಗಸ್ಟ್ 09, 2009
ಕನ್ನಡ ವಾರಪತ್ರಿಕೆ
5/-





ಬೆಲೆ ಏರಿಕೆಯ ಅಘಾತ

ಮುಖ್ಯಮಂತ್ರಿ - ವಿದ್ಯುತ್ ಮಂತ್ರಿ ಜಗಳದಲ್ಲಿ ರಾಜ್ಯ ಕಂಗಾಲು



ವಿಧಾನಸಭಾ ಅಧಿವೇಶನ : ಕಾರ್ಮಿಕ-ಜನಸಾಮಾನ್ಯರ ಹಕ್ಕಿನ ಮೇಲೆ ದಾಳಿ

ಹಗರಣಗಳ ಸಾಲುಸಾಲು



ಕ್ಯೂಬಾ ಉತ್ಸವ : ಸಾಂಸ್ಕೃತಿಕ ಕಲರವ

ಕೈಗಾರಿಕಾ ಮರುಭೂಮಿಯಾಗುತ್ತಿರುವ ಕರಾವಳಿ

ಏನು ನಡೆದಿದೆ ಯುಪಿಎ ಸರ್ಕಾರದ ಅಂದಾ ದರ್ಬಾರ್ ನಲ್ಲಿ

ಯುಪಿಎ ದರ್ಬಾರ್



'ಬೆಲೆ ಏರಿಕೆ ಸಮಸ್ಯೆಯಲ್ಲ'

ಉತ್ಪಾದನೆ ಮತ್ತು ಸರಬರಾಜಿನಲ್ಲಿ ಕೊರತೆ ಉಂಟಾಗಿರುವುದರಿಂದ ಬೇಳೆ ಕಾಳುಗಳ ಬೆಲೆ ಗಗನಕ್ಕೇರಿದೆ ಇದೊಂದು ದೊಡ್ಡ ಸಮಸ್ಯೆ ಅಲ್ಲ'

ಶರದ್ ಪವಾರ್,
ದೇಶದ ಕೃಷಿ ಮಂತ್ರಿ

ರೈತರು, ಮೀನುಗಾರರಿಗೆ ಮಾರಕವಾಗುವ ಮುಕ್ತ ವ್ಯಾಪಾರ ಒಪ್ಪಂದ

ಆಗ್ನೇಯ ಏಷ್ಯಾಗಳಿಂದ ಆಮದು ಮಾಡಿಕೊಳ್ಳುವ ತಾಳೆ ಎಣ್ಣೆ ಕೇಂದ್ರಸರ್ಕಾರ ಅಬಕಾರಿ ಸುಂಕವನ್ನು ಕಡಿತ ಮಾಡಿದೆ. ಅದೇ ರೀತಿಯಲ್ಲಿ ಆಲಿವ್ ಎಣ್ಣೆ, ಆಮದಿನ ಮೇಲೆ ಸುಂಕವನ್ನೇ ವಿಧಿಸುತ್ತಿಲ್ಲ. ಆದರೆ ದೇಶೀಯವಾಗಿ ಉತ್ಪಾದನೆ ಯಾಗುವ ಕೊಬ್ಬರಿ ಎಣ್ಣೆಗೆ ಸುಂಕ ವಿನಾಯಿತಿಯೂ ಇಲ್ಲ. ರಿಯಾಯಿತಿಯೂ ಇಲ್ಲ. ಬದಲಿಗೆ ಅಬಕಾರಿ ಸುಂಕವನ್ನು ಹೊರಿಸಿದೆ ಕೇಂದ್ರ ಸರ್ಕಾರ.

ಇದಲ್ಲದೇ ಕೇಂದ್ರ ಸಂಪುಟ ಜುಲೈ23ರಂದು ಆಗ್ನೇಯ ಏಶ್ಯಾ ದೇಶಗಳ ಸಂಘ(ಆಸಿಯಾನ್)ದ ಜತೆ ಸಮುದ್ರ ಆಹಾರ ಮತ್ತು ಮಸಾಲೆ ಸಾಮಗ್ರಿಗಳ ಆಮದು ಕುರಿತಂತೆ ಮುಕ್ತ ವ್ಯಾಪಾರ ಒಪ್ಪಂದ ಮಾಡಿಕೊಳ್ಳಲು ನಿರ್ಧರಿಸಿದೆ. ಇದು ಕೇರಳ, ಕರ್ನಾಟಕ ಸೇರಿದಂತೆ ಕರಾವಳಿ ರಾಜ್ಯಗಳ ಮೀನುಗಾರರ ಮತ್ತು ಚಹಾ, ಮೆಣಸು, ತಾಳೆ ಮುಂತಾದ ಹಣದ ಬೆಳೆಗಳ ರೈತರ ಜೀವನಾಧಾರಕ್ಕೆ ಏಟು ನೀಡುತ್ತದೆ ಎಂದು ಸಂಪುಟದಲ್ಲಿಯೇ ಕೇರಳದ ಮತ್ತು ಕರ್ನಾಟಕದ ಮಂತ್ರಿಗಳು ಹೇಳಿದರೂ ಪ್ರಧಾನಿಗಳ ಮಧ್ಯಪ್ರವೇಶದಿಂದ ಈ ನಿರ್ಧಾರ ಮಾಡಲಾಗಿದೆಯಂತೆ. ಲೋಕಸಭೆಯಲ್ಲಿ ಇದನ್ನು ವಿರೋಧಿಸುವಲ್ಲಿ ಎಡಪಕ್ಷಗಳ ಸದಸ್ಯರೊಂದಿಗೆ ಕಾಂಗ್ರೆಸ್ ಸದಸ್ಯರೂ, ವಿಶೇಷವಾಗಿ ಕೇರಳದವರು ಸೇರಿಕೊಂಡರು.

ಈ ಒಪ್ಪಂದದ ವಿವರಗಳನ್ನು ಇದುವರೆಗೂ ಏಕೆ ಬಹಿರಂಗಗೊಳಿಸಿಲ್ಲ. ಕೋಟ್ಯಂತರ ಜನಗಳ ಬದುಕನ್ನು ತಟ್ಟುವ ಈ ಒಪ್ಪಂದದ ಬಗ್ಗೆ ಆಮೂಲಾಗ್ರ ಚರ್ಚೆ ನಡೆಯಬೇಕು ಎಂದು ಕೇರಳದ ಹಣಕಾಸು ಮಂತ್ರಿಗಳು ಆಗ್ರಹಿಸಿದ್ದಾರೆ.

★

ತೃಣಮೂಲಿಗಳಿಗೂ ಸಿಟ್ಟು

ಅದೇ ದಿನ ಕೇಂದ್ರ ಸಂಪುಟ ಭೂ ಸ್ವಾಧೀನ (ತಿದ್ದುಪಡಿ) ಮಸೂದೆ ಮತ್ತು ಪುನರ್ವಸತಿ ಮಸೂದೆಗಳನ್ನು ಲೋಕಸಭೆಯಲ್ಲಿ ಮತ್ತೆ ತರಲು ನಿರ್ಧರಿಸಿತು. ಪಶ್ಚಿಮ ಬಂಗಾಳದ ಸಿಂಗೂರಿನಲ್ಲಿ ಈ ವಿಷಯದಲ್ಲಿಯೆ ಭಾರೀ ಗದ್ದಲ ಎಬ್ಬಿಸಿ ಅದರ ಚುನಾವಣಾ ಲಾಭವನ್ನೂ ಪಡೆದ ಮಮತಾ ಬ್ಯಾನರ್ಜಿ ಇದನ್ನು ವಿರೋಧಿಸಲೇಬೇಕಾಗಿ ಬಂದಿತ್ತು. ಒಂದು ಹಂತದಲ್ಲಿ ಅವರು ಸಭಾತ್ಯಾಗ ಮಾಡುವ ಬೆದರಿಕೆಯನ್ನೂ ಹಾಕಿದರಂತೆ. ಆದರೆ ಹಾಗೇನೂ ಮಾಡಲಿಲ್ಲ. ಅವರ ಭಿನ್ನಮತದೊಂದಿಗೆ ಸಂಪುಟ ನಿರ್ಧಾರಕ್ಕೆ ಬಂತು. ಇದನ್ನು ಲೋಕಸಭೆಯಲ್ಲಿ ಮಂಡಿಸಿದಾಗ ತೃಣಮೂಲ ಕಾಂಗ್ರೆಸಿನ ಸದಸ್ಯರು ವಿರೋಧಿಸುವುದಾಗಿ ಪ್ರಕಟಿಸಿದ್ದಾರೆ. ಮಮತಾ ಮರುದಿನವಿಡೀ ತಮ್ಮ ಕಚೇರಿಗೇ ಬರಲಿಲ್ಲ, ಸಂಸತ್ತಿಗೂ ಬರಲಿಲ್ಲ ಎಂದು ವರದಿಯಾಗಿದೆ.

★

ಸಮಾಜವಾದಿ ಪಕ್ಷಕ್ಕೂ

ಅನಿಲ್ ಅಂಬಾನಿ ಮತ್ತು ಮುಕೇಶ್ ಅಂಬಾನಿಯ ಅನಿಲ ಕಂಪನಿಗಳ ನಡುವಿನ ಕೋರ್ಟ್ ಸಮರ ಸಂಸತ್ತಿನಲ್ಲೂ ಪ್ರತಿಧ್ವನಿಸಿತು; ಮೂರು ಬಾರಿ ಲೋಕಸಭೆಯ ಕಲಾಪಗಳಿಗೆ ಅಡ್ಡಿ ಬಂತು. ಮುಂಬೈ ಹೈಕೋರ್ಟ್ ಮೂರು ಬಾರಿ ಆ ಕಂಪನಿಗಳ ನಡುವಿನ ಕಾಂಟ್ರಾಕ್ಟನ್ನು ಎತ್ತಿ ಹಿಡಿದಿದ್ದರೂ ಸಮಸೆ ಇತ್ಯರ್ಥವಾಗಿಲ್ಲ, ಪೆಟ್ರೋಲಿಯಂ ಮಂತ್ರಿಗಳು ಮುಖೇಶ್ ಪಕ್ಷ ವಹಿಸಿದ್ದಾರೆ ಎಂಬುದು ಈಗ ಕೇಳಬರುತ್ತಿರುವ ಆರೋಪ. ಮುರಲಿ ದೇವ್ರ ರಾಜೀನಾಮೆ ಕೊಡಬೇಕೆಂದು ಸಮಾಜವಾದಿ ಪಕ್ಷದ ಸದಸ್ಯರು ಆಗ್ರಹಿಸಿದ್ದಾರೆ. ಅತ್ತ ಯುಪಿಎ ಸರಕಾರದ ಕಾನೂನು ಇಲಾಖೆ ಮತ್ತು ಪೆಟ್ರೋಲಿಯಂ ಇಲಾಖೆಯ ನಡುವೆಯೂ ಈ ಬಗ್ಗೆ ಜಟಾಪಟಿ ನಡೆದಿದೆಯಂತೆ. ಕೇಂದ್ರ ಸರಕಾರ ಯಾವುದೇ ಕಾನೂನು ವಿಷಯದಲ್ಲಿ ಒಳಗೊಂಡಿದ್ದರೆ ಅದನ್ನು ಕಾನೂನು ಇಲಾಖೆ ಮೂಲಕ ನಿರ್ವಹಿಸಬೇಕು. ಆದರೆ ಇಲ್ಲಿ ಪೆಟ್ರೋಲಿಯಂ ಇಲಾಖೆ ತಾನೇ ಅದನ್ನು ಮಾಡುವುದಾಗಿ ಹೇಳಿದೆಯಂತೆ. ಇದು ಮೊಯಿಲಿಯವರಿಗೆ ಮುಜುಗರ ತಂದಿದೆ. ಆದರೆ ಈಗ ಪೆಟ್ರೋಲಿಯಂ ಇಲಾಖೆಯ ಬದಲು ಭಾರತ ಸರಕಾರವೇ ಮುಖ್ಯ ಅರ್ಜಿದಾರನಾಗುವಂತೆ ಅರ್ಜಿಯನ್ನು ತಿದ್ದುಪಡಿ ಮಾಡಲಾಗುತ್ತಿದೆ ಎಂದು ವರದಿಯಾಗಿದೆ.



ಈ ನಡುವೆ ಉತ್ತರ ಪ್ರದೇಶದಲ್ಲಿನ ಬೆಳವಣಿಗೆಗಳಿಂದಾಗಿಯೂ ಸಮಾಜವಾದಿ ಪಕ್ಷ ಯುಪಿಎ ಸರಕಾರಕ್ಕೆ ನೀಡಿರುವ ಬೆಂಬಲವನ್ನು ಹಿಂತೆಗೆದುಕೊಳ್ಳುವ ಬಗ್ಗೆ ಯೋಚಿಸುತ್ತಿದೆಯಂತೆ.

★

ಲೋಕಸಭೆಯಲ್ಲಿ ಬೆಲೆಯೇರಿಕೆ ಪ್ರಶ್ನೆ

ಜುಲೈ 28ರಂದು ಲೋಕಸಭೆಯಲ್ಲಿ ಬೆಲೆಯೇರಿಕೆಯ ಪ್ರಶ್ನೆಯನ್ನು ಚರ್ಚಿಸಬೇಕು ಎಂದು ಎಡಪಕ್ಷಗಳು, ತೆಲುಗು ದೇಶಂ ಪಕ್ಷ, ಬಿಜು ಜನತಾ ದಳದ ಹಾಗೂ ಎಐಎಡಿಎಂಕೆ ಸದಸ್ಯರು ಆಗ್ರಹ ಪಡಿಸಿದರು. ಸರಕಾರಕ್ಕೆ ಬೆಂಬಲ ಸೂಚಿಸಿರುವ ಲಾಲೂ ಪ್ರಸಾದ್ ಯಾದವ್‌ರವರ ಆರ್‌ಜೆಡಿ' ಪಕ್ಷ ಕೂಡಾ ಇದರಲ್ಲಿ ಸೇರಿಕೊಂಡಿತು. ಸರಕಾರ ಅದಕ್ಕೆ ಸ್ಪಂದಿಸಲಿಲ್ಲ. ಕಾಂಗ್ರೆಸ್ ಮತ್ತು ಪ್ರತಿಪಕ್ಷಗಳ ಸದಸ್ಯರ ನಡುವೆ ಬಿಸಿಬಿಸಿ ವಾಗ್ವಾದ ನಡೆಯಿತು. ಸದನದ ಕಲಾಪಗಳು ಅರ್ಧ ಗಂಟೆ ಮುಂದೂಡಲ್ಪಟ್ಟವು. ಇದಕ್ಕೆ ಮೊದಲು ಈ ಪಕ್ಷಗಳ ಸದಸ್ಯರು ಸಂಸತ್ ಭವನದ ಮುಖ್ಯ ದ್ವಾರದಲ್ಲಿ ನಾಗಾಲೋಟ ಹೂಡಿರುವ ಬೆಲೆಯೇರಿಕೆಯನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿ ಧರಣಿ ನಡೆಸಿದರು.

ಆಳುವ ಕೂಟವನ್ನು ಬೆಂಬಲಿಸುತ್ತಿರುವ ನೀವು ಇಲ್ಲೇಕೆ ಪ್ರತಿಭಟನೆ ಮಾಡುತ್ತಿದ್ದೀರಿ ಎಂದು ಪತ್ರಕರ್ತರು ಕೇಳಿದಾಗ ಲಾಲೂ "ಇದು ಜನತೆಯ ಪ್ರಶ್ನೆ, ನಾವೆಲ್ಲಾ ಒಟ್ಟು ಸೇರಿದ್ದೇವೆ" ಎಂದರು. ನಾವೆಲ್ಲಾ ಲಾಲೂರವರ ನೇತೃತ್ವದಲ್ಲಿ ಪ್ರತಿಭಟಿಸುತ್ತಿದ್ದೇವೆ, ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಬೇಕು ಎಂಬುದು ನಮ್ಮ ಪ್ರಮುಖ ಬೇಡಿಕೆ, ಇದನ್ನು ಸಂಸತ್ತಿನಲ್ಲಿ ಎತ್ತುತ್ತೇವೆ, ಎರಡೂ ಸದನಗಳಲ್ಲಿ ಈ ಬಗ್ಗೆ ಚರ್ಚೆಯಾಗಬೇಕು ಎಂದು ಸೀತಾರಾಂ ಯೆಚುರಿಯವರು ಹೇಳಿದರು.

★

ಮತ್ತೆ ದೂರಸಂಪರ್ಕ ಹಗರಣದ ಚರ್ಚೆ

ಸಂಸತ್ತಿನಲ್ಲಿ 2ಜಿ ಪಟಲ(ಸ್ಪೆಕ್ಟ್ರಂ)ನ್ನು ಖಾಸಗಿಯವರಿಗೆ ಹಂಚುವಲ್ಲಿ ಆಗಿರುವ ಹಗರಣದ ಬಗ್ಗೆ ಮತ್ತೆ ಸಂಸತ್ತಿನಲ್ಲಿ ದೀರ್ಘ ಚರ್ಚೆ ನಡೆಯಿತು. ಹರಾಜಿನಲ್ಲಿ ಅವನ್ನು ಕೊಡದೆ ಮೊದಲು ಬಂದವರಿಗೆ ಮೊದಲು ಎಂಬ ರೀತಿಯಲ್ಲಿ ಹಂಚಿದ್ದರಿಂದ ಸರಕಾರದ ಬೊಕ್ಕಸಕ್ಕೆ 1ಲಕ್ಷ ಕೋಟಿ ರೂ.ಗಳ ನಷ್ಟವಾಗಿದೆ ಎಂಬ ಆಪಾದನೆಯನ್ನು ಎದುರಿಸುತ್ತಿರುವ ದೂರಸಂಪರ್ಕ ಮಂತ್ರಿ ರಾಜಾ ಅವರ ಸಹಾಯಕ್ಕೆ ಆಳುವ ಕೂಟದಿಂದ ಯಾರೂ ಬರಲಿಲ್ಲ. ಸ್ವತಃ ಮಂತ್ರಿಗಳೂ ಅದನ್ನು ನಿರಾಕರಿಸದೆ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರದತ್ತ ಕೈತೋರಿಸಲು ಪ್ರಯತ್ನಿಸಿದರು. "ನಿಜ, ಮೊದಲ ಬಾರಿಗೆ ಹಲವಾರು ಮುಖಂಡರು ಒಬ್ಬ ಮಂತ್ರಿಯ ಮೇಲೆಯೇ ದಾಳಿ ನಡೆಸಿದ್ದಾರೆ. ಆದರೆ ನಾನು ಈ ಇಲಾಖೆಯಲ್ಲಿ ಹಲವು ಕ್ರಾಂತಿಕಾರಿ ಬದಲಾವಣೆ ಗಳನ್ನೂ ತಂದಿದ್ದೇನೆ, ಅದರಿಂದ ಗ್ರಾಹಕರಿಗೆ ಪ್ರಯೋಜನವಾಗಿದೆ" ಎಂದು ಮಂತ್ರಿವರ್ಯ[...] ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದರು.

★

ಭಾರತ-ಪಾಕಿಸ್ತಾನ ಜಂಟಿ ಹೇಳಿಕೆಗೆ ವಾರವಾದರೂ ಕಾಂಗ್ರೆಸ್ ಸ್ವಾಗತವಿಲ್ಲ

ಇಜಿಪ್ಟಿನ ಶರ್ಮ್-ಎಲ್-ಶೈಕ್‌ನಲ್ಲಿ ಕಳೆದ ವಾ[...] ಭಾರತ-ಪಾಕಿಸ್ತಾನ ಜಂಟಿ ಹೇಳಿಕೆ ನೀಡಿದ ಮೇ[...] ಕಾಂಗ್ರೆಸ್ ಪಕ್ಷದೊಳಗೇ ಈ ಬಗ್ಗೆ ತೀವ್ರ ಚ[...] ನಡೆದಿದೆ ಎನ್ನಲಾಗಿದೆ. ಆದ್ದರಿಂದಲೇ ಯುಪಿ[...] ಸರಕಾರದ ನೇತೃತ್ವ ವಹಿಸಿರುವ ಕಾಂಗ್ರೆಸ್ [...] ಅಧಿಕೃತವಾಗಿ ಅದನ್ನು ಸ್ವಾಗತಿಸುವ ಹೇ[...] ನೀಡಿಲ್ಲವಂತೆ. ಪ್ರಧಾನ ಮಂತ್ರಿಗಳು ಈ ಬಗ್ಗೆ ಜು[...] 29ರಂದು ಸಂಸತ್ತಿನ ಎರಡೂ ಸದನಗಳಲ್ಲಿ ಹೇ[...] ನೀಡಿದ್ದಾರೆ. ನಂತರವೂ ಏನು[...] ಸ್ಪಷ್ಟೀಕರಣವಿರದಿರಲು ಕಾರಣ- ಕೆಲವು ಕಾಂ[...] ಮುಖಂಡರಲ್ಲಿ ಈಗಲೂ ಈ ಬ[...] ಭಿನ್ನಾಭಿಪ್ರಾಯವಿದೆಯಂತೆ. ಈ ಬಾರಿ ಲೋಕ[...] ಚುನಾವಣೆ ಗೆದ್ದದ್ದು ಕಾಂಗ್ರೆಸ್ ಭಯೋತ್ಪಾದನೆ[...] ಬಗ್ಗೆ ಮುಂಬೈ ದುಷ್ಕೃತ್ಯಗಳ ನಂತರ ಕಠಿಣ ನಿಲು[...] ತಳೆದಿದೆ ಎಂಬ ಕಾರಣದಿಂದಾಗಿ, ಈ ಹೇ[...] ಅದನ್ನು ದುರ್ಬಲಗೊಳಿಸಿದೆ ಎಂದು ಅವ[...] ಅಭಿಪ್ರಾಯವಂತೆ.

ವಾಸ್ತವವಾಗಿ ಅಮೆರಿಕಾ ಮತ್ತು ಇತ[...] ಪಾಶ್ಚಿಮಾತ್ಯ ದೇಶಗಳ ತೀವ್ರ ಒತ್ತಡದಿಂದಾಗಿ [...] ಹೇಳಿಕೆ ಬಂದಿರುವುದಾಗಿ ಪ್ರಧಾನಿಗಳ ನಿಕಟವ[...] ಮಂತ್ರಿಗಳೊಬ್ಬರು ತಿಳಿಸಿರುವುದಾಗಿ ಕೆಲವು ಪತ್ರಿಕೆಗ[...] ವರದಿ ಮಾಡಿವೆ.

★

ಭಾರತ ಒಂದು ಬೆದರಿಕೆ(!) ಎಂದ[...] ಅಮೆರಿಕಾ ಸೆನೆಟರ್ ಕ್ಷಮಾಯಾಚನೆ!

"ನಾವು ಕೇವಲ ಅಫಘಾನಿಸ್ತಾನ, ಇರಾಕ್‌ನ[...] ಮಾತ್ರ ನಮ್ಮ ರಾಷ್ಟ್ರೀಯ ಭದ್ರತೆಗಾ[...] ಹೋರಾಡುತ್ತಿಲ್ಲ...... ಅದಕ್ಕಿಂತ ಹೆ[...] ಗಂಭೀರವಾದ ಬೆದರಿಕೆಗಳೂ [...] ಉದಯಗೊಳ್ಳುತ್ತಿರುವ ಭಾರತದಿಂದ, ಅವ[...] ಹೆಚ್ಚೆಚ್ಚಾಗಿ ತಮ್ಮ ಮಿಲಿಟರಿ ಶಕ್ತಿಯನ[...] ಚಲಾಯಿಸುತ್ತಿರುವುದರಿಂದ; ರಶ್ಯಾ, ಇರಾನ[...] ಪರಮಾಣು ಶಸ್ತ್ರಾಸ್ತ್ರ ತಯಾರಿಸುತ್ತಿದೆ.; ಉತ್ತ[...] ಕೊರಿಯಾ ಖಂಡಾಂತರ ಕ್ಷಿಪಣಿ ಹಾ[...] ಸುತ್ತಿದೆ......." ಇದು ಅಮೆರಿಕಾದ ಸೆನೆಟರ್ ಜಾ[...] ಕೋರ್ನಿನ್ ಉವಾಚ. ಈತ ಭಾರತ-ಪರ ಸೆನೆಟ[...] ಎಂದು ಹೆಸರಾದವನಂತೆ! ಭಾರತ-ಪರಮಾ[...] ವ್ಯವಹಾರ ಕುದುರಿಸುವಲ್ಲಿ ಮಹತ್ವದ ಪಾ[...] ವಹಿಸಿದಾತನಂತೆ!

ಆದರೆ ಈಗ ಈ ಮಾತಿಗೆ ಆತ ಕ್ಷಮೆ ಯಾಚ[...] ದ್ದಾರಂತೆ- ಚೀನ ಎನ್ನುವ ಬದಲು ಭಾರತ ಎಂ[...] ತಪ್ಪಾಗಿ ಹೇಳಿದೆ ಎಂದಿದ್ದಾರಂತೆ! ಕಾಂಗ್ರೆ[...] ಗರಲ್ಲಿಯೂ ಎಲ್ಲರೂ ಇದನ್ನು ನಂಬಿದ್ದಾರೆಯೋ [...] ಗೊತ್ತಿಲ್ಲ.

ವಿಧಾನಸಭೆಯ ಬಜೆಟ್ ಅಧಿವೇಶನ

ಹಗರಣಗಳ ಮೇಲೆ ಹಗರಣಗಳು ಖಜಾನೆಯ ನಿತ್ಯ ಲೂಟಿ

ಬಜೆಟ್ ಅಧಿವೇಶನ ನಡೆದದ್ದು 15 ದಿನ ಮಾತ್ರ. 15ಕ್ಕೂ ಹೆಚ್ಚು ಹಗರಣಗಳು ಬಯಲಾದವು. ದಿನಕ್ಕೆ ಒಂದಕ್ಕಿಂತ ಹೆಚ್ಚು ಹಗರಣಗಳು. ಇದರಲ್ಲಿ ಮಾಜಿ ವಸತಿ ಸಚಿವ ಕೃಷ್ಣಯ್ಯಶೆಟ್ಟಿ ಗೃಹಮಂಡಳಿ ಅಧ್ಯಕ್ಷ ಜಿ.ಟಿ.ದೇವೇಗೌಡ ಮುಖ್ಯ ಮಂತ್ರಿಯವರ ಆಶೀರ್ವಾದದೊಂದಿಗೆ ಕೈಗೊಂಡ ಭೂ ಹಗರಣ ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟದಿಂದ ಆರಂಭವಾದರೂ ಮೈಸೂರು ನಗರ ಮೊದಲಾದಲ್ಲೆಲ್ಲಾ ಅನಾವರಣಗೊಳ್ಳುತ್ತಿದೆ. ಜನರ ಹಣದ ಲೂಟಿಯ ದೊಡ್ಡ ಒಳಸಂಚೀ ನಡೆದಿದೆ ಎನ್ನುವುದು ಮೇಲ್ನೋಟಕ್ಕೆ ಸಾಬೀತಾಗುವಂತಿದೆ.

ಭೂಮಿಯೇ ಕೇಂದ್ರ

ಭೂಮಿ ಆಧಾರಿತ ಹಲವು ಪ್ರಕರಣಗಳು, ಹಗರಣಗಳು ಚರ್ಚೆಗೆ ಬಂದಿವೆ ಎಂಬುದು ಮತ್ತೆ ಭೂ ಪ್ರಶ್ನೆಯ ಪ್ರಾಮುಖ್ಯತೆಯನ್ನು ಸಾಬೀತು ಪಡಿಸುತ್ತಿವೆ. ... ಕಂಪನಿಯ ಭೂ ಕಬಳಿಕೆ ಬೆಂಗಳೂರಿನಲ್ಲಿ ಸರ್ಕಾರಿ ಭೂಮಿಗಳ ವ್ಯಾಪಕ ಆಕ್ರಮಣ, ಗಣಿ ಮಾಫಿಯಾದಿಂದ ಅರಣ್ಯ ಭೂಮಿಯ ಆಕ್ರಮಣ, ಕರ್ನಾಟಕ ...ದ್ರ, ಗಡಿ ಒತ್ತುವರಿ ಪ್ರಶ್ನೆ ಬೆಂಗಳೂರಿನಲ್ಲಿ ಅಕ್ರಮ ಭೂ ನಿವೇಶನ, ಲೇಔಟ್‌ಗಳ ಸಕ್ರಮದ ಪ್ರಶ್ನೆ, ಭೂ ವ್ಯವಹಾರಗಳ ನೋಂದಣಿ ಶುಲ್ಕದ ಪ್ರಶ್ನೆ. ಹೀಗೆ ಬಜೆಟ್ ಅಧಿವೇಶನದಲ್ಲಿ ಬಜೆಟ್ ಬಗೆಗಿನ ಚರ್ಚೆ, ವಿವಿಧ ಇಲಾಖೆಗಳ ಕೆಲಸದ ರೀತಿ, ಬಜೆಟ್ ವಿನಿಯೋಗ ಇವು ಕೇಂದ್ರ ಪ್ರಶ್ನೆಯಾಗದೆ ಭೂಮಿಯೇ ಕೇಂದ್ರ ಪ್ರಶ್ನೆಯಾಗಿದೆ. ಸರ್ಕಾರದ ಮೇಲೆ ಭೂ ಮಾಫಿಯಾದ ಹಿಡಿತ ಎಷ್ಟು ಪ್ರಬಲವಾಗಿದೆ ಎಂಬುದು ಮತ್ತೆ ಮತ್ತೆ ಪ್ರಕಟವಾಗಿದೆ.

ಈ ಜನ ಹಿತದ ಹೆಸರಿನಲ್ಲಿಯೇ ಈ ಎಲ್ಲಾ ಭೂ ದುರುಪಯೋಗದ ಪ್ರಶ್ನೆಗಳನ್ನು ಮುಚ್ಚಿ ಹಾಕುವ ಅಥವಾ ಭೂ ದುರುಪಯೋಗಕ್ಕೆ ಅವಕಾಶ ಮಾಡಿಕೊಡುವ ಕ್ರಮಗಳಿಗೆ ರಾಜ್ಯ ಸರ್ಕಾರ ಕೈ ಹಾಕಿದೆ.

ಭೂಮಿಯ ನಂತರ ಆಹಾರ

ಇವುಗಳ ಜೊತೆಗೆ ಆಹಾರದ ಪ್ರಶ್ನೆಗೆ ಸಂಬಂಧಿಸಿದ ಹಗರಣ ಪ್ರಕರಣಗಳು ಕೆಲವು ಒಂದು ಕಡೆ ಇಸ್ಕಾನ್ -ಅಕ್ಷಯಪಾತ್ರದ ಬಿಸಿಯೂಟ ಹಗರಣ ಮತ್ತೊಂದು ಕಡೆ ಅಂಗನವಾಡಿಗಳಿಗೆ ಆಹಾರ ಒದಗಿಸುವುದನ್ನು ...ಕೋರ್ಟ್ ತೀರ್ಮಾನದಂತೆ ಸ್ತ್ರೀ ಶಕ್ತಿ ಸಂಘಗಳ ಒಕ್ಕೂಟಕ್ಕೆ ನೀಡುವುದಕ್ಕೆ ಬದಲಾಗಿ ತಮಿಳುನಾಡಿನ ಕಂಪನಿಗೆ ನೀಡಿದ ಹಗರಣ. ಈ ಹಗರಣಗಳ ಜೊತೆಗೆ ರಾಜ್ಯದ ಹಲವೆಡೆಗಳಲ್ಲಿ ತೊಗರಿಬೇಳೆ, ಅಕ್ಕಿ ಕಾಳ ದಾಸ್ತಾನುಗಳು. ರಾಜ್ಯದ ಅಂಗನವಾಡಿಗಳು ಹಸುಗೂಸುಗಳ ಆಹಾರ, ಶಾಲೆಯ ಮಕ್ಕಳ ...ಾರ ಮೂಲಕ ರಾಜ್ಯದ ಜನತೆಯ ಹಣ ದುರುಪಯೋಗ ಒಂದು ಕಡೆ. ಬೆಲೆ ಏರಿಕೆಯ ಮೂಲಕ ಜನ ಸಾಮಾನ್ಯರ ದುಡಿಮೆಯ ಹಣದ ದರೋಡೆ ಮತ್ತೊಂದು ಕಡೆ, ಅಕ್ಕಿ, ಬೇಳೆ,ತರಕಾರಿ, ಹೂ ಹಣ್ಣು, ಸಕ್ಕರೆ, ಎಣ್ಣೆ ಹೀಗೆ ಹಬ್ಬಗಳ ಸಂಕೋಲೆಯ ಮುಂದಿನ ದಿನಗಳಲ್ಲಿ ರಾಜ್ಯದ ಜನತೆ ಹಬ್ಬವನ್ನು ಮೊಟಕುಗೊಳಸಬೇಕು ಅಥವಾ ದುಡಿದ ಹಣವನ್ನು ದೋಚುವವರ ಕೈಗೆ ಹಾಕಬೇಕು.

ಇಂತಹ ಕೊರತೆಯ ಪರಿಸ್ಥಿತಿಯನ್ನು ದುರುಪಯೋಗ ಮಾಡಿಕೊಳ್ಳುವ ಕಾಳಸಂತೆ ಕೋರರು. ಕಾಳಸಂತೆ ಕೋರರಿಗಂತೂ ಬಿಜೆಪಿ ತಮ್ಮದೇ ಸರ್ಕಾರ. ಆದ್ದರಿಂದ ಈ ಮೂಲ ತನಕ ದೋಚುವ ಹಣದ ಒಂದು ಪಾಲು ಆಳುವ ಪಕ್ಷದ ರಾಜಕಾರಣಿಗಳ ಕೈಗೆ. ರಾಜ್ಯದ 6 ಕೋಟಿ ಜನತೆಯ ಜೀವನವನ್ನು ಒಳಗೊಳ್ಳುವುದರಿಂದ ಇದು ಎಲ್ಲಕ್ಕಿಂತ ದೊಡ್ಡ ಹಗರಣ. ಹೀಗೆ ಸರ್ಕಾರದ ಹಣದ ಲೂಟಿ ಒಂದು ಕಡೆ ಜನರ ಬದುಕಿನ ಲೂಟಿ ಮತ್ತೊಂದು ಕಡೆ.

ಇವುಗಳ ಜೊತೆಗೆ ವಾಹನಗಳ ನೋಂದಣಿ ಫಲಕಗಳಿಗೆ ಸಂಬಂಧಿಸಿದ ಸಾರಿಗೆ ಇಲಾಖೆಯ ಹಗರಣ ಇತ್ಯಾದಿ ಹಲವು ಹಗರಣಗಳು ಚರ್ಚೆ ಬಂದಿವೆ. ಇನ್ನೂ ಬೆಳಕಿಗೆ ಬಾರದ ಹಗರಣಗಳು ಮತ್ತೆಷ್ಟೋ!

ಈ ಹಗರಣಗಳ ಚರ್ಚೆಗೆ 15 ದಿನಗಳು ಸಾಲದು ಎಂಬ ಸ್ಥಿತಿಯಲ್ಲಿ ಹಗರಣಗಳ ಚರ್ಚೆಗೆಂದೇ ಎರಡು ದಿನ ಮೀಸಲಿಟ್ಟು ಸೆಪ್ಟೆಂಬರ್‌ನಲ್ಲಿ ಅಧಿವೇಶನವಂತೆ. ಇಂತಹ ನಾಟಕಗಳು ಬಿಜೆಪಿ ಸರ್ಕಾರಕ್ಕೆ ಹಗರಣಗಳ ರಾಜ ಎಂಬ ಕೀರ್ತಿಗೆ ಮತ್ತಷ್ಟು ಮೆರುಗು ನೀಡಲಿವೆ. ❑

ವಿದ್ಯುತ್ ಕಡಿತ

ಮುಖ್ಯಮಂತ್ರಿ - ವಿದ್ಯುತ್ ಮಂತ್ರಿ ಜಗಳದಲ್ಲಿ ರಾಜ್ಯ ಕಂಗಾಲು


ಈ ವಾರ

ಜಿ.ಎನ್.ನಾಗರಾಜ್

ಮತ್ತೆ ವಿದ್ಯುತ್ ಸಚಿವರಿಂದ ವಿದ್ಯುತ್ ಕಡಿತ ಘೋಷಣೆ. ಬೆಂಗಳೂರಿನಲ್ಲಿ 2 ಗಂಟೆ ಕಡಿತ. ಹಳ್ಳಿಗಾಡಿನಲ್ಲಿ ಕೇವಲ 10 ಗಂಟೆ ಮಾತ್ರ ವಿದ್ಯುತ್ ಅದರಲ್ಲಿಯೂ 5 ಗಂಟೆ ಮಾತ್ರ ಮೂರು ಫೇಸ್, 5 ಗಂಟೆ ಒಂದೇ ಫೇಸ್. ಅಂದರೆ 14 ಗಂಟೆಗಳ ಕಾಲದ ಪೂರ್ಣ ಕಡಿತ. ಮತ್ತೆ 5 ಗಂಟೆಗಳ ಕಾಲ ಅಂಶಿಕ ಕಡಿತ ಒಟ್ಟು 19 ಗಂಟೆಗಳ ಕಾಲದ ಕಡಿತ.

ಅದೇ ದಿನ ಮುಖ್ಯಮಂತ್ರಿ ಯಡಿಯೂರಪ್ಪನವರಿಂದ ಅದಕ್ಕೆ ವಿರುದ್ಧ ಹೇಳಿಕೆ. ರಾಜ್ಯದಲ್ಲಿ ವಿದ್ಯುತ್ ಕಡಿತದ ಅವಶ್ಯಕತೆ ಇಲ್ಲ. ಜಲಾಶಯಗಳು ಭರ್ತಿಯಾಗಿ ವಿದ್ಯುತ್ ಉತ್ಪಾದನೆ ಯಥೇಚ್ಛವಾಗಿ ಆಗಲಿದೆ. ಕೆಲವು ಕಾಲ ಹಳ್ಳಿಗಾಡಿನಲ್ಲಿ ಕೇವಲ 2-3 ಗಂಟೆ ವಿದ್ಯುತ್ ಕಡಿತ ಇರಬಹುದು.

ವಿದ್ಯುತ್ ಸಚಿವರು ಮುಖ್ಯಮಂತ್ರಿಗಳು ಪರಸ್ಪರ ವಿರುದ್ಧ ಹೇಳಿಕೆ ನೀಡುತ್ತಿರುವುದು ಇದೇನು ಮೊದಲ ಸಲವಲ್ಲ. ಈ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ಆರಂಭವಾದ ಈ ಯಕ್ಷಗಾನ ಇಂದೂ ಮುಂದುವರೆದಿದೆ. ಮುಖ್ಯಮಂತ್ರಿ ಮತ್ತು ವಿದ್ಯುತ್ ಮಂತ್ರಿಗಳ ನಡುವಣ ಮುಸುಕಿನ ಗುದ್ದಾಟ ಒಳಜಗಳದ ಬಹಿರಂಗ ರೂಪ ಇದು. ಈ ಭಿನ್ನಮತ ವಿದ್ಯುತ್ ಇಲಾಖೆಯ ಕಡತಗಳ ಮೂಲಕವೂ ನಡೆಯುತ್ತಿರುವುದು ಇದರಿಂದ ಸ್ಪಷ್ಟವಾಗಿದೆ.



ಈ ಹಿಂದೆ ಜನಶಕ್ತಿ (ದಿನಾಂಕ: ಜುಲೈ 12, 2009) ರಲ್ಲಿ ವಿವರಿಸಿರುವಂತೆ ಲೋಕಸಭಾ ಚುನಾವಣೆಗೆ ಮೊದಲು ವಿದ್ಯುತ್ ಕಡಿತ ಇಲ್ಲದಂತೆ ನೋಡಿಕೊಳ್ಳಲು ಕೊಳ್ಳಲಾದ ದುಬಾರಿ ಖಾಸಗಿ ಕಂಪನಿಗಳ ವಿದ್ಯುತ್ ಮತ್ತು ಅದಕ್ಕೆ ಭರಿಸಬೇಕಾದ ವೆಚ್ಚವೇ ಈ ತಿಕ್ಕಾಟದ ಮೂಲ. ಈ ದುಬಾರಿ ವೆಚ್ಚದ ಭಾರವನ್ನು ವಿದ್ಯುತ್ ಕಂಪನಿಗಳ ಆಂತರಿಕ ಮೂಲಗಳಿಂದಲೇ ಭರಿಸಬೇಕೋ ಅಥವಾ ರಾಜ್ಯ ಬಜೆಟ್‌ನಿಂದ ಅದಕ್ಕಾಗಿ ಹಣ ನೀಡಬೇಕೋ ಇದೇ ಪ್ರಶ್ನೆ.

ವಿದ್ಯುತ್

ಈಶ್ವರಪ್ಪನವರನ್ನು ಇಕ್ಕಟ್ಟಿನಲ್ಲಿ ಸಿಲುಕಿಸಬೇಕೆಂಬ ಯಡಿಯೂರಪ್ಪ ನವರ ತವಕ ಯಡಿಯೂರಪ್ಪನವರನ್ನು ಜನರ ಮುಂದೆ ಅಗ್ಗ ಮಾಡಬೇಕೆಂಬ ಈಶ್ವರಪ್ಪನವರ ಕಾತರ ಈ ರಾಜಕೀಯ ಮೇಲಾಟದಲ್ಲಿ ರಾಜ್ಯದ ಜನತೆ ಬಡವಾಗಿದೆ.

ತಮ್ಮತಮ್ಮೊಳಗಿನ ಅಂತಃಕಲಹದಿಂದ ರಾಜ್ಯದ ಜನರನ್ನು ಸಂಕಟಕ್ಕೆ ಸಿಲುಕಿಸುತ್ತಿರುವ ಬಿಜೆಪಿ ಸರ್ಕಾರಕ್ಕೆ ಛೀಮಾರಿ ಹಾಕಿ ನಿರಾತಂಕವಾಗಿ ವಿದ್ಯುತ್ ಒದಗಿಸುವ ಜವಾಬ್ದಾರಿಯನ್ನು ಸರ್ಕಾರ ನಿರ್ವಹಿಸುವಂತೆ ಮಾಡುವ ಹೊಣೆ ಜನತೆಯ ಮೇಲೆಯೇ ಇದೆ.

ಶಾಸಕರ ಸಂಬಳದ ಏರಿಕೆಯ ಈ ಪರಿ

ರಾಜ್ಯ ಆರ್ಥಿಕ ಬಿಕ್ಕಟ್ಟಿನಿಂದ ನಲುಗುತ್ತಿದೆ. ಆದ್ದರಿಂದ ರಾಜ್ಯದ ಆದಾಯ ಕಡಿಮೆಯಾಗಿದೆ. 8000 ಕೋಟಿಗಳಿಗಿಂತ ಹೆಚ್ಚು ಸಾಲ ಮಾಡಬೇಕಾಗಿ ಬಂದಿದೆ ಎಂದು ಮುಖ್ಯಮಂತ್ರಿ ಶಾಸನ ಸಭೆಯ ಹೊರಗೂ ಒಳಗೂ ಹಲವು ಬಾರಿ ಹೇಳಿದ್ದಾರೆ. ಇಂತಹ ಸಂದರ್ಭದಲ್ಲಿ ವಿಧಾನಸಭೆಯ ಅಧಿವೇಶನದ ಕೊನೆಯದಿನ ಶಾಸಕರ ಸಂಬಳ ಸಾರಿಗೆಗಳನ್ನು ಏರಿಸಲಾಗಿದೆ. ಆ ಏರಿಕೆಯ ಪರಿ ನೋಡಿ.

	ಸಂಬಳದ ಏರಿಕೆ	ಈಗಿನ ವೇತನ	ಏರಿಸಿದ ವೇತನ
ಸಂಬಳದ ಏರಿಕೆ	8,000	10,000	2,000
ಟೆಲಿಫೋನ್ ಭತ್ಯೆ	7,500	10,000	2,500
ಕ್ಷೇತ್ರ ಭೇಟಿ ಭತ್ಯೆ	3,500,	15,000	11,500
ಅಂಚೆ ಭತ್ಯೆ	1,000	4,000	3,000
	20,000	39,000	19,000

ಜನರ ಕಣ್ಣಿಗೆ ಮಣ್ಣೆರಚುವ ಈ ಕುತಂತ್ರಗಳನ್ನು ಬಿಜೆಪಿ ಸರ್ಕಾರದಿಂದಲೇ ಕಲಿಯಬೇಕು. ಶಾಸಕರ ಸಂಬಳದ ಏರಿಕೆ 2,000 ಆದರೆ ಸಾರಿಗೆಗಳ ಏರಿಕೆ ಕೇವಲ 19,000 ರೂ. ಮಾತ್ರ

ಇದು ನಿಮಗೆ ಗೊತ್ತೆ?

ಇಡೀ ದೇಶದ ಜನ ಸ್ತಮುದಾಯದ ಜೀವನವನ್ನು ದೇಶದ ಅಭಿವೃದ್ಧಿಯ ಯೋಜನೆಗಳನ್ನು ನಿರೂಪಿಸುವ ಕೇಂದ್ರ ಸರ್ಕಾರದ ಬಜೆಟ್ ಬಗ್ಗೆ ಚರ್ಚೆಯೇ ಇಲ್ಲದೆ, ಅಥವಾ ಕೇವಲ ಕೆಲವೇ ಗಂಟೆಗಳ ಚರ್ಚೆಯ ಮೂಲಕ ಲೋಕಸಭೆ ಅಂಗೀಕರಿಸುವ ಬಗ್ಗೆ ಬಹಳಷ್ಟು ಟೀಕೆಗಳು ಬಂದಿವೆ.

1985ರಲ್ಲಿ 134ಗಂಟೆಗಳ ಚರ್ಚೆ ನಡೆಸಿ ಕೂಲಂಕುಶವಾಗಿ ಪರಿಶೀಲಿಸಿ ಬಜೆಟ್ ಅನ್ನು ಅಂಗೀಕರಿಸಲಾಗಿತ್ತು. 2004ರಲ್ಲಿ ಕೇವಲ 7 ಗಂಟೆಗಳ ಚರ್ಚೆಯ ನಂತರ ಕೇಂದ್ರ ಬಜೆಟ್ ಅನ್ನು ಅಂಗೀಕರಿಸಲಾಗಿತ್ತು. 2009ರಲ್ಲಿಯೂ ಕೆಲವೇ ಗಂಟೆಗಳ ಚರ್ಚೆಯ ಮೂಲಕ ಬಜೆಟ್ ಅಂಗೀಕರಿಸಲಾಗಿದೆ.

ನಮ್ಮ ದೇಶದ ಪ್ರಭುತ್ವಗಳ -ಸರ್ಕಾರಗಳ ಪ್ರಜಾನಿಷ್ಠೆ ನಾಗಾಲೋಟದ ಪ್ರಗತಿ ಸಾಧಿಸುತ್ತಿದೆ.

ಕಾರ್ಮಿಕರ, ಅಲ್ಪಸಂಖ್ಯಾತರ, ಜನಸಾಮಾನ್ಯರ ಹಕ್ಕುಗಳ ಮೇಲೆ ಸರ್ವಸಮ್ಮತಿಯ ದಾಳಿ

ವಿಧಾನಸಭೆ ಅಧಿವೇಶನದ ಕೊನೆಯ ದಿನ

ಜಿ.ಎನ್. ನಾಗರಾಜ್

ಹದಿನೈದು ದಿನಗಳ ಕಾಲ ನಡೆದ ವಿಧಾನಸಭೆಯ ಬಜೆಟ್ ಅಧಿವೇಶನದ ಕೊನೆ ದಿನ. ಒಂದಾದರಮೇಲೆ ಮತ್ತೊಂದರಂತೆ ಕಾಯಿದೆಗಳ ಅಂಗೀಕಾರ. ಜೊತೆಗೆ ಅದೇ ದಿನವೇ 64,421 ಕೋಟಿ ರೂ.ಗಳ ಬಜೆಟ್‌ಅನ್ನು ಕೂಡ ಸರಿಸುಮಾರು ಚರ್ಚೆಯೇ ಇಲ್ಲದೆ, ಮುಖ್ಯಮಂತ್ರಿಯ ಉತ್ತರವನ್ನು ಪೂರ್ಣಗೊಳಿಸಲು ಅವಕಾಶವಿಲ್ಲದೆ ಅಂಗೀಕರಿಸಿದೆ. ಎಲ್ಲಕ್ಕಿಂತ ಮಿಗಿಲಾಗಿ ಶಾಸಕರ ಸಂಬಳ, ಭತ್ಯೆಗಳನ್ನು ದಿಡೀರನೆ ಎರಡು ಪಟ್ಟಾಗುವಂತೆ ಏರಿಸಲಾಗಿದೆ. (ಬಾಕ್ಸ್ ನೋಡಿ-ಪುಟ 3) ಹೀಗೆ ಅವಸರ ಅವಸರವಾಗಿ ಇಷ್ಟೆಲ್ಲಾ ಕಾಯಿದೆಗಳು ಮತ್ತು ಇತರ ಆರ್ಥಿಕ ಅಂಗೀಕಾರಗಳನ್ನು ಬಿಜೆಪಿ ಸರ್ಕಾರ ಪಡೆದಿದ್ದರ ಫಲವಾಗಿ ಜನಸಾಮಾನ್ಯರ ಜೀವನದ ಮೇಲೆ ಆಗುವ ಪರಿಣಾಮವೇನು ಎಂಬುದು ಎಲ್ಲರೂ ಚಿಂತಿಸಬೇಕಾದ, ಚರ್ಚಿಸಬೇಕಾದ ವಿಷಯ.

ವಿಧಾನಸಭೆಯ ಅಧಿವೇಶನದಲ್ಲಿ 21 ಮಸೂದೆಗಳು ಮಂಡಿತವಾಗಿದೆ. ಅವುಗಳಲ್ಲಿ 20 ಕಾಯಿದೆಯಾಗಿ ಅಂಗೀಕಾರ ಪಡೆದಿವೆ. ಇವುಗಳಲ್ಲಿ ಕೊನೆಯ ದಿನ ಅಂಗೀಕಾರವಾದ ಕಾಯಿದೆಗಳು 11. ಇವುಗಳಲ್ಲಿ ಅನೇಕವು ಬಹಳ ಮಹತ್ವದ ಲಕ್ಷಾಂತರ, ಕೋಟ್ಯಾಂತರ ಜನರ ಜೀವನಕ್ಕೆ ಬಾಧಕವಾಗುವಂತಹವು. ಆದರೂ ಕಾಯಿದೆಗಳ ಕರಡು ಪ್ರತಿಗಳನ್ನು ಕೇವಲ ಹಿಂದಿನ ದಿನ ಮಾತ್ರ ಒದಗಿಸಲಾಗಿತ್ತು ಎಂದು ವಿರೋಧ ಪಕ್ಷಗಳ ಆರೋಪ. ಜೊತೆಗೆ ಚರ್ಚೆಯೇ ಇಲ್ಲದೆ ಇಂತಹ ಮಹತ್ವದ ಕಾಯಿದೆಗಳನ್ನು ಅಂಗೀಕರಿಸಲಾಗಿದೆ. ಈ ಕಾಯಿದೆಗಳಲ್ಲಿ ಅತ್ಯಂತ ಮಹತ್ವದ ಕಾಯಿದೆಗಳು ಎರಡು ಕೋಕಾ ಮತ್ತು ಎಸ್ಮಾ.

ಕೋಕಾ ಕಾಯಿದೆ:

ಕರ್ನಾಟಕ ಸಂಘಟಿತ ಅಪರಾಧಗಳ ಕಾಯಿದೆ ಎಂಬ ಈ ಕಾಯಿದೆಯನ್ನು ರಾಜ್ಯದಲ್ಲಿ ಜಾರಿಗೊಳಿಸಲು ಹಾಗೂ ತೀವ್ರಗೊಳಿಸಲು ಬಿಜೆಪಿ ಸರ್ಕಾರ ಉದ್ದೇಶಿಸಿದೆ. ಅದಕ್ಕೆ ಸಂಬಂಧಿಸಿ ಮೂರು ತಿದ್ದುಪಡಿಗಳನ್ನು ತರಲಾಗಿದೆ. ಈ ಕೋಕಾ ಎಂಬ ಕಾಯ್ದೆ ಹುಟ್ಟಿದ್ದು, ವಾಜಪೇಯಿ ಸರ್ಕಾರದಲ್ಲಿ, ಅಡ್ವಾಣಿ ಗೃಹಮಂತ್ರಿತ್ವದಲ್ಲಿ. ಅಮೇರಿಕಾದ ನಿರ್ದೇಶನದ ಮೇರೆಗೆ ನ್ಯೂಯಾರ್ಕ್‌ನ ಕಟ್ಟಡಗಳ ಧ್ವಂಸ ಎಂಬ 9/11 ಭಯೋತ್ಪಾದನೆಗೆ ವಿಶ್ವದೆಲ್ಲೆಡೆ ಜನರ ವಿರೋಧ ರೂಪುಗೊಂಡಿದ್ದನ್ನು ದುರುಪಯೋಗಪಡಿಸಿಕೊಂಡು ಪ್ರಜಾಪ್ರಭುತ್ವ ಹಕ್ಕುಗಳನ್ನು, ಸಂಘಟನೆ ಹಾಗು ಚಳುವಳಿಗಳನ್ನು ದಮನ ಮಾಡಲು ಅಮೇರಿಕಾ ಸರಸರನೆ ಹಲವು ಕಾಯಿದೆಗಳನ್ನು ಜಾರಿಗೆ ತಂದಿತು ಹಾಗೂ ಜಗತ್ತಿನೆಲ್ಲಾ ದೇಶಗಳಿಗೂ ಇಂತಹುದೇ ಕಾನೂನುಗಳನ್ನು ತರಲು ನಿರ್ದೇಶಿಸಿತು. ಯುರೋಪಿನ ಅನೇಕ 'ಪ್ರಜಾಪ್ರಭುತ್ವ' ದೇಶಗಳು ಅದನ್ನು ಅನುಸರಿಸಿದವು. ಆಗ ಅಧಿಕಾರದಲ್ಲಿದ್ದ ಬಿಜೆಪಿ ನೇತೃತ್ವದ ಸರ್ಕಾರ ಕಾಯಿದೆಯ ಒಂದು ಮಾದರಿಯನ್ನು ಸಿದ್ದ ಮಾಡಿ ದೇಶದ ಎಲ್ಲಾ ರಾಜ್ಯಸರ್ಕಾರಗಳಿಗೆ ಅಂತಹ ಕಾಯಿದೆಯನ್ನು ಅಂಗೀಕರಿಸಲು ಆದೇಶಿಸಿತು. ಆಗ ರಾಜ್ಯದಲ್ಲಿದ್ದ ಕೃಷ್ಣ ನೇತೃತ್ವದ ಕಾಂಗ್ರೆಸ್ ಸರ್ಕಾರವೂ ಅದಕ್ಕೆ ಹೂಗುಟ್ಟಿ ಕೋಕಾ ಕಾಯಿದೆಯನ್ನು ಜಾರಿಗೆ ತಂದಿತು.

ಈ ಕಾಯಿದೆಯಲ್ಲಿ ಸಂಘಟಿತ ಅಪರಾಧಗಳ ಹೆಸರಿನಲ್ಲಿ ಪ್ರಜಾಸತ್ತಾತ್ಮಕ ಸಂಘಟನೆ, ಚಳುವಳಿಗಳನ್ನು ದಮನ ಮಾಡುವ ಅನೇಕ ಅವಕಾಶಗಳನ್ನು ಕಲ್ಪಿಸಲಾಗಿದೆ. ಈ ಬಗ್ಗೆ ಹಿಂದೆಯೇ ನಮ್ಮ ಪತ್ರಿಕೆಯಲ್ಲಿ ವಿವರವಾದ ಲೇಖನವೊಂದನ್ನು ಪ್ರಕಟಿಸಲಾಗಿದೆ. ಆದರೆ ಜನರ ಪ್ರತಿರೋಧದ ಕಾರಣ ಈ ಕಾಯಿದೆಯನ್ನು ಜಾರಿಗೆ ತರುವ ಪ್ರಯತ್ನಗಳನ್ನು ಮುಂದಿನ ಸರ್ಕಾರಗಳು ಮಾಡಿರಲಿಲ್ಲ. ಆದರೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ತಮ್ಮ ಸಂಘ ಪರಿವಾರದ ಫ್ಯಾಸಿಸ್ಟ್ ದಬ್ಬಾಳಿಕೆಯ ಆಡಳಿತಕ್ಕೆ ಅನುಕೂಲ ವಾಗಲೆಂದೇ ಅಡ್ವಾಣಿ ರಚಿಸಿದ ಈ ಕಾನೂನನ್ನು ಜಾರಿಗೆ ತರಲು ಆತುರದಿಂದಿದೆ. ಈ ಭಯೋತ್ಪಾದನೆಗೆ ಸಂಬಂಧಿಸಿ ಕೆಲವು ತಿದ್ದುಪಡಿಗಳನ್ನು ಸೇರಿಸಿ ಅವುಗಳನ್ನು ಜಾರಿಗೆ ತರಲು ಕಾಯಿದೆಯಾಗಿ ಅಂಗೀಕರಿಸಲಾಗಿದೆ.

ಭಯೋತ್ಪಾದಕರು ಮತ್ತು ಅವರಿಗೆ ನೆರವಾದರು ಎಂದು ಸಂಶಯಿಸಿ ಆರೋಪಗೊಳಿಸಲಾದವರನ್ನು ಒಂದು ವರ್ಷದ ಕಾಲ ಅಪರಾಧ ಪಟ್ಟಿ ಸಲ್ಲಿಸದೆ ಬಂಧನದಲ್ಲಿ ಮುಂದುವರೆಸಲು ಅವರ ಆಸ್ತಿಪಾಸ್ತಿ ಮುಟ್ಟುಗೋಲು ಹಾಕಿಕೊಳ್ಳಲು ಈ ಕಾಯಿದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ಭಯೋತ್ಪಾದನೆಯನ್ನು ತೊಲಗಿಸಲು ಬೇಕಾದದ್ದು ಕಾನೂನುಗಳಲ್ಲ. ಬಿಗಿಯಾದ ದೃಢವಾದ, ನಿರಂತವಾದ ಎಚ್ಚರ ಮತ್ತು ಭದ್ರತಾ ಕ್ರಮಗಳು ಎಂದು ಸಿಪಿಐ(ಎಂ) ಸಾರುತ್ತಾ ಬಂದಿದೆ. ಭಯೋತ್ಪಾದನೆ ಅಥವಾ ಸಂಘಟಿತ ಅಪರಾಧಗಳ ಕಾಯಿದೆಗಳನ್ನು ಮುಗ್ಧ ಸಾಮಾನ್ಯ ನಾಗರೀಕರನ್ನು ಅದರಲ್ಲಿಯೂ ಮುಸ್ಲಿಮರನ್ನು ಬಂಧಿಸಲು ಬಳಸಲಾಗಿದೆ ಎಂಬ ಹಲವು ಉದಾಹರಣೆಗಳಿವೆ.

ಈ ಕಾನೂನು ತಿದ್ದುಪಡಿಗಳನ್ನು ಯಾವುದೇ ಮುಸ್ಲಿಮನನ್ನು ಬೆದರಿಸಲು ಬಳಸಬಹುದಾಗಿದೆ. ಇಂತಹುದೇ ಕೆಲವು ತಿದ್ದುಪಡಿಗಳನ್ನು ಗುಜರಾತ್ ಸರ್ಕಾರ ತಂದಿದ್ದನ್ನೂ ಕೇಂದ್ರ ಸರ್ಕಾರ ವಿರೋಧಿಸಿದೆ. ಆದರೆ ಬಿಜೆಪಿ, ಸಂಘ ಪರಿವಾರದ ಈ ಹುನ್ನಾರಕ್ಕೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವೂ ಕೂಡ ತಲೆಯಾಡಿಸಿ ಉತ್ಸಾಹದ ಸ್ವಾಗತ ಕೋರಿರುವುದು ಜೆಡಿ(ಎಸ್) ಕೂಡ ಈ ಕಾನೂನು ಅಂಗೀಕಾರಕ್ಕೆ ಸಮ್ಮತಿಸಿರುವುದು ಕರ್ನಾಟಕದ ಜನತೆಯ ಅದರಲ್ಲಿಯೂ ಅಲ್ಪ ಸಂಖ್ಯಾತರ ದುರಂತವಾಗಿದೆ.

ಎಸ್ಮಾ:


ಎಸ್ಮಾ ಎಂಬ ಅಗತ್ಯ ಸೇವೆಗಳ ಕಾಯಿದೆ ಕಾರ್ಮಿಕ ಚಳುವಳಿಕಾರರಿಗೆ ಚಿರಪರಿಚಿತ. 2004ರಲ್ಲಿ ಈ ಕರಾಳ ಕಾಯಿದೆಯ ಅವಧಿ ಮುಗಿದುಹೋಗಿತ್ತು. ಹೀಗಾಗಿ 2004-2009ರ ನಡುವೆ ಈ ಕಾಯಿದೆ ಜಾರಿಯಲ್ಲಿರಲಿಲ್ಲ. ಕಾರ್ಮಿಕರ ಚಳುವಳಿಗಳನ್ನು ಬಗ್ಗು ಬಡಿಯುವ ಹಾಗೂ ಅವರು ತಮ್ಮ ಕೆಲಸದ ಪರಿಸ್ಥಿ ಹಾಗೂ ವೇತನಗಳ ಉಸಿರೆತ್ತದೆ ಗುಲಾಮರಂತೆ ದುಡಿಯುವ ಒತ್ತಾಯವನ್ನು ತರುವ ಈ ಕಾಯಿದೆಯನ್ನು ಮರಳಿ ಅಂಗೀಕರಿಸಲಾಗಿದೆ. ಕುಡಿಯುವನೀರು, ವಿದ್ಯುತ್, ಸಾರಿಗೆ, ಆರೋಗ್ಯ, ಹಾಲು ಇಂತಹ ಸೇವಾ ಕ್ಷೇತ್ರಗಳ ಹೆಸರು ಹೇಳುತ್ತಾ ರಾಜ್ಯ ಸರ್ಕಾರ ಶಾಸನ ಮಾಡಲು ಅಧಿಕಾರವಿರುವ ಎಲ್ಲಾ ಕ್ಷೇತ್ರಗಳಿಗೂ ಅದನ್ನು ವಿಸ್ತರಿಸುವ ಅವಕಾಶ ಕಲ್ಪಿಸಿಕೊಳ್ಳಲಾಗಿದೆ. ಆ ಮೂಲಕ ಕರ್ನಾಟಕ ಯಾವುದೇ ಕಾರ್ಮಿಕ ಚಳುವಳಿಗಾಗಿ ಸಂಘಟನೆಯನ್ನು ದಮನ ಮಾಡಲು ಅವಕಾಶ ಕಲ್ಪಿಸಿಕೊಳ್ಳಲಾಗಿದೆ.

ಇಂತಹ ಕರಾಳ ಕಾಯಿದೆ ಕಾಂಗ್ರೆಸ್‌ನಿಂದ ಬೆಂಬಲ ಪಡೆಯುವುದು ಆಶ್ಚರ್ಯದ ಮಾತೇನಲ್ಲ. ಏಕೆಂದರೆ ದೇಶವನ್ನು ಹಲವು ರಾಜ್ಯಗಳನ್ನು ವರ್ಷಕ್ಕೂ ಹೆಚ್ಚು ಆಳಿದ ಕಾಂಗ್ರೆಸ್‌ಪಕ್ಷದ ಕೂಸೇ ಅದು. ಆದರೆ ಅದಕ್ಕೆ ಜನತಾದಳವೂ ಸಮ್ಮತಿ ನೀಡಿದೆ.

ಹೀಗೆ ರಾಜ್ಯದ ಜನತೆಯನ್ನೂ, ಅವರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ದಮನ ಮಾಡು ಕಾಯಿದೆಗಳ ಬಗ್ಗೆ ಬಿಜೆಪಿ, ಕಾಂಗ್ರೆಸ್, ಜೆಡಿ(ಎಸ್) ಎಂಬ ಬೇಧವಿಲ್ಲದೆ ಒಂದೇ ನಿಲುವು - ಜನರನ್ನು ತುಳಿಯುವುದರಲ್ಲಿ ಈ ಎಲ್ಲರೂ ಒಂದೇ - ಈ ಪಕ್ಷಗಳ ವರ್ಗ ಸ್ವರೂಪ ಒಂದೇ ಎಂಬುದು ಮತ್ತೆ ಸಾಬೀತಾಗಿದೆ.

ಈ ಸಮ್ಮತಿ ಸಿದ್ದರಾಮಯ್ಯ ಎಂಬ 'ಪ್ರಗತಿಪರ'ರು ಪ್ರಗತಿಪರತೆಯ ಅಳತೆ ಗೋಲಾಗಿಯೂ ಪರಿಣಮಿಸಿದೆ. ವ್ಯಕ್ತಿಗಳನ್ನು ನೋಡಿ ಮತ ನೀಡಿ ಎನ್ನುವವರ ಮುಖಕ್ಕೆ ಎತ್ತಿದ ಮಂಗಳಾರತಿಯೂ ಆಗಿದೆ. ರಾಜ್ಯ ವಿಧಾನ ಸಭೆಯಲ್ಲಿ ದುಡಿಯುವ ವರ್ಗದ ಒಬ್ಬ ಪ್ರತಿನಿಧಿಯೂ ಇಲ್ಲದ್ದರ ಪರಿಣಾಮ ಈ ಕಾಯಿದೆಗಳ ಬಗ್ಗೆ ಒಂದು ವಿರೋಧದ ಧ್ವನಿಯೂ ವಿಧಾನಸಭೆಯಲ್ಲಿ ಬರಲಿಲ್ಲ. ವಿಧಾನಸಭೆಯಲ್ಲಿ ಮೂಡದ ಈ ವಿರೋಧ ರಾಜ್ಯದ ಎಲ್ಲೆಡೆಯಿಂದ ಮೂಡಿ ಬೆಳೆಯಬೇಕಾಗಿದೆ. ಶೋಷಕರು ಇಂತಹ ಹಲವು ಕಾನೂನುಗಳನ್ನು ಮಾಡಬಹುದು. ಆದರೆ ಶೋಷಿತ ಜನತೆ ಅದನ್ನು ಎದುರಿಸುತ್ತಾರೆ, ತಿರಸ್ಕರಿ ಸುತ್ತಾರೆ ಎಂಬುದನ್ನು ವಾಸ್ತವಗೊಳಿಸಬೇಕಾಗಿದೆ.

ಬೆಲೆ ಏರಿಕೆ - ರಾಜ್ಯವ್ಯಾಪಿ ಪ್ರತಿಭಟನೆ



ಉತ್ತರ ಕನ್ನಡ ಜಿಲ್ಲೆಯಲ್ಲಿ ಸಿಪಿಐ(ಎಂ) ಪ್ರತಿಭಟನೆ

ಮೈಸೂರಿನಲ್ಲಿ ಸಿಪಿಐ(ಎಂ) - ಸಿಪಿಐ ಪ್ರತಿಭಟನೆ





ಜನವಿರೋಧಿತನ - ಭ್ರಷ್ಟತೆಯ ಪ್ರತೀಕ

ರಾಜ್ಯ ಬಿಜೆಪಿ ಸರ್ಕಾರದ ದರ್ಬಾರಿನಲ್ಲಿ ಏನೇನು ನಡೆದಿದೆ?

ಬಿಜೆಪಿ ದರ್ಬಾರ್

ವಾಹನ ತಪಾಸಣೆಯ ಖಾಸಗೀಕರಣ ಶುಲ್ಕ ನಿಗದಿಯಲ್ಲಿ ಹಗರಣ ಕಮಟು ವಾಸನೆ

ವಾಹನಗಳಿಗೆ ಭದ್ರತಾ ನೋಂದಣಿ ಫಲಕ ಹಾಕುವ ಯೋಜನೆಯೊಂದು ರಾಜ್ಯದಲ್ಲಿ ಜಾರಿಯಾಗುತ್ತಿದೆ. ವಾಹನಗಳ ಕಳವು ತಪ್ಪಿಸುವುದು ಈ ಯೋಜನೆಯ ಉದ್ದೇಶ. ಯೋಜನೆಯನ್ನು ಮುಂಬೈ ಮೂಲದ ಸಿಮಾನಿಕ್ ಉಚ್ ಎಂಬ ಸಂಸ್ಥೆಗೆ ಗುತ್ತಿಗೆ ನೀಡಲಾಗಿದೆ.

ಪಶ್ಚಿಮಬಂಗಾಳ ರಾಜ್ಯದಲ್ಲಿ ಈಗಾಗಲೇ ಇಂತಹ ಯೋಜನೆ ಜಾರಿಯಾಗುತ್ತಿದೆ. ಇಲ್ಲಿ ಗಮನಿಸಬೇಕಾದ ವಿಷಯ ಎಂದರೆ ಪಶ್ಚಿಮಬಂಗಾಳದಲ್ಲಿ ಇಂತಹ ಭದ್ರತಾ ಫಲಕ ಅಳವಡಿಕೆಗಾಗಿ ವಾಹನಗಳ ಮಾಲೀಕರಿಗೆ ವಿಧಿಸಲಾಗುತ್ತಿರುವ ದರದ 2 ಪಟ್ಟು 3 ಪಟ್ಟು ದರವನ್ನು ರಾಜ್ಯದಲ್ಲಿ ವಿಧಿಸಲಾಗುತ್ತಿದೆ ಎಂಬ ತೀವ್ರ ಟೀಕೆಗಳು ಬರುತ್ತಿವೆ. ಶುಲ್ಕಗಳಲ್ಲಿ ವ್ಯತ್ಯಾಸ ನೋಡಿ.

ವಾರ್ಷಿಕ ಶುಲ್ಕ

ವಾಹನ	ಪಶ್ಚಿಮಬಂಗಾಳ	ಕರ್ನಾಟಕ
ಕಾರು	441.00	1,200.00
ಆಟೋರಿಕ್ಷಾ	298.00	650.00
ದ್ವಿ ಚಕ್ರ ವಾಹನ	280.00	550.00

ಈ ರೀತಿ ಜನರಿಂದ ದುಬಾರಿ ಶುಲ್ಕ ವಸೂಲಿ ಅವಕಾಶ ಸಿಗಬೇಕಾದರೆ 'ಮೇಲಿನ ಹಂತದಲ್ಲಿ' ಸಂಸ್ಥೆ ಅಧಿಕಾರಸ್ಥರನ್ನು ಸರಿ ಮಾಡಿಕೊಂಡಿರಬೇಕು. ಇಲ್ಲವಾದರೇ ಇದೆಲ್ಲಾ ಸಾಧ್ಯವಾ?

ಇದೇನು ಆಕಸ್ಮಿಕ ಅಲ್ಲ ಅನ್ನೋದಕ್ಕೆ ಸಾಕ್ಷಿಬೇಕಾದರೆ ನೋಡಿ, ಪ್ರತಿವರ್ಷವೂ ವಾಹನಗಳ ಸುಸ್ಥಿತಿಯ ಕುರಿತು ತಪಾಸಣೆ ಮಾಡಿ ಸಾರಿಗೆ ಇಲಾಖೆಯು ಅರ್ಹತಾ ಪತ್ರ(ಎಫ್.ಸಿ) ಕೊಡಬೇಕಲ್ಲವೇ? ಈ ಜವಾಬ್ದಾರಿಯನ್ನು ಖಾಸಗಿಗೆ ವಹಿಸುವ ಪ್ರಸ್ತಾಪ ಸರ್ಕಾರ ಮುಂದಿದೆಯಂತೆ. ಇದು ಪ್ರಸ್ತುತ ಇರುವ ಮೋಟಾರು ಕಾಯ್ದೆಗೆ ವಿರುದ್ಧ. ಹಾಗಾಗಿ ಸರ್ಕಾರ ಕಾನೂನನ್ನೇ ತಿದ್ದುತ್ತದೋ ಏನೋ ನೋಡಬೇಕು. ರಾಜ್ಯ ಬಿಜೆಪಿ ಸರ್ಕಾರದಲ್ಲಿ ಅಂತೂ ಖಾಸಗಿ ಸಂಸ್ಥೆಗಳ ಮಸಲತ್ತು ಜೋರಾಗಿ ನಡೆದಿದೆ ಅಂತಾಯ್ತು.

★

ಸಾಂಕ್ರಾಮಿಕ ರೋಗ: ಸರ್ಕಾರದ ದಿವ್ಯ ನಿರ್ಲಕ್ಷ್ಯ

ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಮಲೇರಿಯಾ, ಚಿಕೂನ್‌ಗುನ್ಯಾ, ಡೆಂಗ್ಯೂ ಕಾಯಿಲೆಗಳು ಹರಡಿ ಜನರ ಜೀವ ಹಿಂಡುತ್ತಿದೆ. ಹಂದಿ ಜ್ವರದ ಪ್ರಕರಣಗಳೂ ವರದಿಯಾಗಿದೆ.

ರಾಜ್ಯ ಬಿಜೆಪಿ ಸರ್ಕಾರ, ಆರೋಗ್ಯ ಸಚಿವರು, ಆರೋಗ್ಯ ಇಲಾಖೆ ಎಲ್ಲಾ ಏನು ಮಾಡುತ್ತಿವೆ?

ಸರ್ಕಾರಿ ಆಸ್ಪತ್ರೆಗಳಲ್ಲಿ ಅಗತ್ಯ ಔಷಧಿಗಳು ದೊರೆಯುತ್ತಿಲ್ಲ. ವೈದ್ಯರ ಸೇವೆಯೂ ಸಮರ್ಪಕವಾಗಿ ದೊರೆಯುತ್ತಿಲ್ಲ. ಶ್ರೀಮಂತರು ಅನುಕೂಲಸ್ಥರೇನೋ ಖಾಸಗಿ ಆಸ್ಪತ್ರೆಗಳಲ್ಲಿ ದುಬಾರಿ ವೆಚ್ಚ ಮಾಡಿ ಚಿಕಿತ್ಸೆ ಪಡೆದುಕೊಳ್ಳುತ್ತಾರೆ. ಬಡವರ ಪಾಡೇನು? ಸರ್ಕಾರಕ್ಕೆ ಅದರ ಚಿಂತೆಯೇ ಇಲ್ಲವಾಗಿದೆ.

ಮುಖ್ಯಮಂತ್ರಿಗಳಿಗೆ ಆರೋಗ್ಯ ಮಂತ್ರಿಗಳಿಗೆ ಬರಿ ತಮ್ಮ ಹಗರಣಗಳನ್ನು ಮುಚ್ಚಿ ಹಾಕುವುದು. ಆಂತರಿಕ ಕಿತ್ತಾಟಗಳಿಗೆ ತೇಪೇ ಹಾಕುವುದು. ಇದೇ ಮುಖ್ಯವಾದ ಕೆಲಸಗಳಾಗಿವೆ.

ಇದು ಕೇವಲ ಟೀಕೆಗಾಗಿ ಮಾಡುತ್ತಿರುವ ಟೀಕೆಯಲ್ಲ. ಸಮಸ್ಯೆಯ ತೀವ್ರತೆ ಎಷ್ಟಿದೆ ಎಂದರೆ ಆಡಳಿತ ಪಕ್ಷವಾದ ಬಿಜೆಪಿಯಶಾಸಕರೇ ಈ ಬಗ್ಗೆ ಕುಟುವಾದ ಮಾತನ್ನಾಡಬೇಕಾಗಿದೆ ಬಂದಿದೆ. ಜುಲೈ 24 ರಂದು ವಿಧಾನ ಪರಿಷತ್‌ನಲ್ಲಿ ಬಿಜೆಪಿಯವರೇ



ಆದ ವಿಮಲಾ ಗೌಡ ಅವರು ಬಿಜೆಪಿ ಸರ್ಕಾರ ಬೇಜವಾಬ್ದಾರಿತನದ ಬಗೆಗೆ ತೀವ್ರವಾಗಿ ಟೀಕಿಸಿದ್ದಾರೆ. ಅವರೇನೂ ಹೇಳಿದರೋ ಅದು ಹಾಗೇ ಇಲ್ಲಿ ಕೊಡಲಾಗಿದೆ.

"ರಾಜ್ಯದಲ್ಲಿ ಡೆಂಗ್ಯೂ, ಮಲೇರಿಯಾ ಮತ್ತು ಚಿಕೂನ್ ಗುನ್ಯಾ ರೋಗಕ್ಕೆ ತುತ್ತಾದವರ ಬಗ್ಗೆ ಆರೋಗ್ಯ ಇಲಾಖೆ ತಪ್ಪು ಮಾಹಿತಿ ನೀಡಿದೆ. ಈ ಇಲಾಖೆಯ ಸಚಿವರು 'ಮೃದುವಾಗಿ' ವರ್ತಿಸುತ್ತಿರುವುದರಿಂದ ಅಧಿಕಾರಿಗಳು ದಿಕ್ಕು ತಪ್ಪಿಸುತ್ತಿದ್ದಾರೆ. ಬೃಹತ್ ಬೆಂಗಳೂರು ಪಾಲಿಕೆಯಲ್ಲಿ ಸೊಳ್ಳೆ ನಿಯಂತ್ರಣ ಕ್ಕಾಗಿ ನಾಲ್ಕು ಕೋಟಿ ರೂಪಾಯಿಗೂ ಹೆಚ್ಚು ವೆಚ್ಚ ಮಾಡಲಾಗಿದೆ. ಆದರೆ ನಗರದ ಎಲ್ಲೆಡೆ ಚಿಕುನ್ ಗುನ್ಯಾ ಮತ್ತು ಡೆಂಗ್ಯೂ ರೋಗಗಳು ತಾಂಡವವಾಡುತ್ತಿವೆ. ಆರೋಗ್ಯ ಇಲಾಖೆ ತನ್ನ ಜವಾಬ್ದಾರಿಯನ್ನು ನಿಬಾಯಿಸುವಲ್ಲಿ ಸಂಪೂರ್ಣ ವಿಫಲವಾಗಿದೆ" ಇಲ್ಲಿ 'ಮೃದು' ಅಂದರೇನು? ಅದು ಯಾಕೆ? ಅಂತ ಹೆಚ್ಚು ವಿವರಿಸಬೇಕಾದ ಅಗತ್ಯವಿಲ್ಲ ಅಲ್ಲವೇ?

ನಾಗರಾಜ್ ಜಂಬಗಿ ಮೇಲೆ ಹಲ್ಲೆ ಮಾಡಿದ್ದು ಯಾಕೆ?



ಕಳೆದ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಹುಬ್ಬಳ್ಳಿ ನ್ಯಾಯಾಲಯದೊಳಗೆ ಬಾಂಬ್ ಒಂದು ಸ್ಫೋಟಿಸಿದ ಸುದ್ದಿ ನಮಗೆಲ್ಲಾ ಗೊತ್ತು. ಆ ಬಾಂಬ್ ಸ್ಫೋಟವನ್ನೇ ಬಳಸಿ ಸಂಘಪರಿವಾರವು ಮುಸ್ಲಿಂ ಅಲ್ಪಸಂಖ್ಯಾತರ ವಿರುದ್ಧ ಅಪಪ್ರಚಾರ ನಡೆಸಿ ಜನರ ಮನಸ್ಸಿನಲ್ಲಿ ವಿಷ ಹರಡಿದ್ದೂ ಗೊತ್ತು.

ಆ ಪ್ರಕರಣದ ಪ್ರಮುಖ ಆರೋಪಿ ನಾಗರಾಜ ಜಂಬಗಿ ಎಂಬಾತ. ಆತ ಶ್ರೀರಾಮಸೇನೆ ಪ್ರಮೋದ್ ಮುತಾಲಿಕ್‌ನ ಶಿಷ್ಯ ಗಣಕ್ಕೆ ಸೇರಿದವನು ಎಂಬು ಬಯಲಾದರೂ ಯಾಕೋ ಸದ್ದು ಮಾಧ್ಯಮಗಳಲ್ಲಿ ಆ ಬಗ್ಗೆ ಅಷ್ಟು ಪ್ರಚಾರ ಸಿಕ್ಕಿರಲಿಲ್ಲ. ಇದೇ ನಾಗರಾಜ್ ಜಂಬಗಿಯ ಮೇಲೆ ಬಾಗಲಕೋಟೆಯ ಜಿಲ್ಲಾ ಕಾರಾಗೃಹದಲ್ಲಿ ಜುಲೈ18ರ ಮಧ್ಯಾಹ್ನ ತೀವ್ರವಾದ ಹಲ್ಲೆ ನಡೆದಿದೆ. ಹಲ್ಲೆನಡೆಸಿದ್ದು ಅದೇ ನಾಗರಾಜ ಜಂಬಗಿಯ ಜೊತೆಗಾರರು.

ನಾಜರಾಜ ಜಂಬಗಿಯ ಮೇಲೆ ಹಲವು, ಕೊಲೆ, ದರೋಡೆ, ಕೊಲೆ ಸಂಚಿನ ಆರೋಪಗಳೂ ಇವೆ. ಜಂಬಗಿಯ ತಲೆಯ ಮೇಲೆ ಕಲ್ಲು ಎತ್ತಿ ಹಾಕಿ ಜಜ್ಜಲಾಗಿದೆಯಂತೆ. ಅದೂ ಜೈಲಿನೊಳಗೆ ಈ ಸಂಚಿನ ಹಿಂದೆ ಯಾರಿದ್ದಾರೋ, ಈತನ ಮೇಲಿನ ಆರೋಪ ಸಾಬೀತಾದರೆ ಯಾರ್‍ಯಾರ ಕುತ್ತಿಗೆ ಶಿಕ್ಷೆಯ ಹಗ್ಗ ಸುತ್ತಿಕೊಳ್ಳಲಿದೆಯೇ? ಯಾರ್‍ಯಾರೂ ಈ ಸಂಚಿನ ಹಿಂದಿದ್ದಾರೋ ತನಿಖೆಯಿಂದ ಹೊರಬರಬೇಕಿದೆ. ಆದರೆ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರಕ್ಕೆ ನಿಷ್ಪಕ್ಷಪಾತ ತನಿಖೆ ನಡೆಸುವ ಮನಸ್ಸು, ಇಚ್ಛಾಶಕ್ತಿ ನಿಜಕ್ಕೂ ಇದೆಯೇ ಎಂಬುದು ಸಂಶಯದ ವಿಚಾರವಾಗಿದೆ.

ಇದು ಒಂದು ಕಡೆ. ಮತ್ತೊಂದು ಕಡೆ ಈಗಲೂ ಇದು ಮಾಧ್ಯಮಗಳಲ್ಲಿ ಯಾಕೋ ಸಾಕಷ್ಟು ಸುದ್ದಿಯಾಗುತ್ತಿಲ್ಲ. ಕಾರಣ ಏನಂತಲೂ ತನಿಖೆಯಾಗಬೇಕೇನೋ?

○

ಸುದ್ದಿ ಬಿಂಬ

'ಭ್ರಷ್ಟಾಚಾರ ಕಾನೂನುಬದ್ಧಗೊಳಿಸಿಬಿಡಲಿ'

**ನ್ಯಾಯಮೂರ್ತಿ ಸಂತೋಷ ಹೆಗಡೆ,
ಲೋಕಾಯುಕ್ತರು**

'ಭ್ರಷ್ಟರಿಗೆ ನ್ಯಾಯಾಲಯದ ಮೆಟ್ಟಿಲು ಹತ್ತಿಸುವ ಅಧಿಕಾರವನ್ನು ಲೋಕಾಯುಕ್ತಕ್ಕೆ ಕೊಡುವ ಮನಸ್ಸು ರಾಜ್ಯ ಸರ್ಕಾರಕ್ಕೆ ಇಲ್ಲದಿದ್ದರೆ ಭ್ರಷ್ಟಾಚಾರವನ್ನು ಕಾನೂನುಬದ್ಧಗೊಳಿಸಿಬಿಡಲಿ' ಎಂದು ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಪುನ: ವ್ಯಂಗ್ಯವಾಡಿದರು.

'ನಾನು ಇನ್ನೆಂದೂ ಹೆಚ್ಚಿನ ಅಧಿಕಾರಕ್ಕಾಗಿ ಸರ್ಕಾರದ ಮುಂದೆ ಬೇಡುವುದಿಲ್ಲ. ವರ್ಷದ ಹಿಂದೆಯೇ ಬೇಡುವುದನ್ನು ನಿಲ್ಲಿಸಿದ್ದೇನೆ. ಈ ಹುದ್ದೆಗೆ ನನ್ನನ್ನು ನೇಮಕ ಮಾಡಿದಾಗಲೇ ಹೆಚ್ಚು ಅಧಿಕಾರ ಕೊಡಬೇಕು ಎಂಬ ಷರತ್ತು ಹಾಕಿದ್ದೆ. ಅದಕ್ಕೆ ಒಪ್ಪಲಾಗಿತ್ತು' ಎಂದು ಅವರು ಸೋಮವಾರ ಪುನರುಚ್ಚರಿಸಿದರು.

'ಕಳೆದ ವಿಧಾನಸಭಾ ಚುನಾವಣೆಯಲ್ಲಿ ಎಲ್ಲ ಪ್ರಮುಖ ರಾಜಕೀಯ ಪಕ್ಷಗಳು ತಮ್ಮ ಪ್ರಣಾಳಿಕೆಯಲ್ಲಿ ಲೋಕಾಯುಕ್ತಕ್ಕೆ ಹೆಚ್ಚು ಅಧಿಕಾರ ಕೊಡುವ ಭರವಸೆ ನೀಡಿವೆ. ಆದರೆ, ಭರವಸೆ ನೀಡಿವೆ. ಆದರೆ ಭರವಸೆ ಈಡೇರಿಸುವ ಮನಸ್ಸು ಸರ್ಕಾರಕ್ಕೆ ಇದ್ದಂತಿಲ್ಲ ಎಂದರು.

1986 ರ ಜನವರಿಯಲ್ಲಿ ಲೋಕಾಯುಕ್ತ ಅಸ್ತಿತ್ವಕ್ಕೆ ಬಂದಾಗ ಸ್ವಯಂ ವಿಚಾರಣೆ ನಡೆಸುವ ಅಧಿಕಾರವನ್ನು ಲೋಕಾಯುಕ್ತ ಮತ್ತು ಉಪ ಲೋಕಾಯುಕ್ತರಿಗೆ ಕೊಡಲಾಗಿತ್ತು. ಆರು ತಿಂಗಳಲ್ಲಿ ಲೋಕಾಯುಕ್ತರ ಅಧಿಕಾರವನ್ನು ವಾಪಸ್ ಪಡೆಯಲಾಯಿತು. ಉಪ ಲೋಕಾಯುಕ್ತರಿಗೆ ಈಗಲೂ ಈ ಅಧಿಕಾರ ಇದೆ ಎಂದರು.

ಸುಮಾರು 110 ಭ್ರಷ್ಟ ಅಧಿಕಾರಿಗಳ ವಿಚಾರಣೆಗೆ ಸರ್ಕಾರ ಅನುಮತಿ ನೀಡಿಲ್ಲ. ಇವರಲ್ಲಿ ಹತ್ತಕ್ಕೂ ಹೆಚ್ಚಿನವರು ಐಎಎಸ್ ಹಾಗೂ ಐಪಿಸ್ ಅಧಿಕಾರಿಗಳು. ಈ ಅಧಿಕಾರಿಗಳ ವಿಚಾರಣೆಗೆ ಅನುಮತಿ ಕೊಡುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇಲ್ಲವೆನ್ನುವುದಾದರೆ ಅನುಮತಿ ನಿರಾಕರಿಸುವ ಅಧಿಕಾರವೂ ಇಲ್ಲ ಎಂದು ಅವರು ನುಡಿದರು. ರಾಜ್ಯ ಸರ್ಕಾರ ಅನುಮತಿ ನಿರಾಕರಿಸಿದ್ದರೂ ಸುಪ್ರಿಂ ಕೋರ್ಟ್ ತೀರ್ಪಿನ ಅನ್ವಯ ಕಾನೂನು ಕ್ರಮ ಜರುಗಿಸಲಾಗುತ್ತಿದೆ. ಆದರೆ, ಈ ಪ್ರಕರಣ ಹೈಕೋರ್ಟ್ ಮುಂದೆ ಇತ್ಯರ್ಥಕ್ಕಾಗಿ ಕಾಯುತ್ತಿದೆ ಎಂದರು.


ಪ್ರಜಾವಾಣಿ, ಜುಲೈ 21, 2009

ರಾಜ್ಯದ ಕರಾವಳಿ ಜಿಲ್ಲೆಯಲ್ಲಿನ ಕಾರ್ಮಿಕರ ಸಮಸ್ಯೆಗಳು ಭಿನ್ನವಾದವುಗಳು. ಸಿಐಟಿಯು ಸಂಘಟನೆಯ ರಾಜ್ಯ ಅಧ್ಯಕ್ಷರಾದ ಕಾಮ್ರೆಡ್ ಬಿ.ಮಾಧವ ಅವರು ಇಲ್ಲಿ ಕರಾವಳಿ ಕಾರ್ಮಿಕರ, ಅಲ್ಲಿನ ಉದ್ದಿಮೆಗಳ ಪರಿಸ್ಥಿತಿಯ ಕುರಿತು ವಿವರಿಸಿದ್ದಾರೆ.

ಕರ್ನಾಟಕ ಕರಾವಳಿ ಈಗ ಕೈಗಾರಿಕಾ ಮರುಭೂಮಿ

ಬಿ.ಮಾಧವ

ಸಂದರ್ಶನ



ಕರಾವಳಿಯಲ್ಲಿ ಪ್ರಸ್ತುತ ಕಾರ್ಮಿಕರ ಪರಿಸ್ಥಿತಿ ಹೇಗಿದೆ

ಮಾಧವ : ಒಂದು ಕಾಲದಲ್ಲಿ ಕರಾವಳಿಯ ಜೀವನಾಡಿ ಎಂದರೆ ಹೆಂಚು ಉದ್ಯಮ. ಆದರೆ ಇವತ್ತು ಆ ಉದ್ಯಮ ಬಿಕ್ಕಟ್ಟಿನಲ್ಲಿದೆ. ಮತ್ತೊಂದೆಡೆ ಯಾವುದೇ ಹೊಸ ಕೈಗಾರಿಕಾ ಬೆಳವಣಿಗೆ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕರಾವಳಿ ಪ್ರದೇಶಗಳಲ್ಲಿ ಆಗುತ್ತಿಲ್ಲ. ಹೀಗಾಗಿ ಈ ಪ್ರದೇಶ 'ಕೈಗಾರಿಕಾ ಮರುಭೂಮಿ'ಯಾಗುವ ಅಪಾಯ ತಲುಪುತ್ತಿದೆ.

ಐದಾರು ದಶಕಗಳಿಂದಲೂ ಇಲ್ಲಿನ ಹೆಂಚು ಉದ್ಯಮ 'ಜಗತ್‌ಪ್ರಸಿದ್ಧ' ವಾಗಿತ್ತು. ಈ ಉದ್ಯಮ ಮಂಗಳೂರು, ಕುಂದಾಪುರದಿಂದ ಹಿಡಿದು ಉತ್ತರ ಕನ್ನಡ ಜಿಲ್ಲೆಯವರೆಗೂ ವ್ಯಾಪಿಸಿತ್ತು. ಇಲ್ಲಿನ ಹೆಂಚು ಉದ್ಯಮವು ಈ ಪ್ರದೇಶದ ಆರ್ಥಿಕತೆಗೆ ಬಹಳಷ್ಟು ಕಾಣಿಕೆ ನೀಡುತ್ತಿತ್ತು. ಮಾತ್ರವಲ್ಲ ಬಲಿಷ್ಠ ಕಾರ್ಮಿಕ ಚಳುವಳಿಗೂ ಕಾರಣವಾಗಿತ್ತು.

ಹೆಂಚು ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಒಂದೆಡೆ ತಮ್ಮ ಸಂಬಳ ಬೋನಸ್‌ಗಾಗಿ ಸಂಘ ಕಟ್ಟಿಕೊಂಡು ಹೋರಾಡುತ್ತಿದ್ದರು ಮಾತ್ರವಲ್ಲ. ಮುಂದುವರೆದು ಸಾಮಾಜಿಕ ಪ್ರಶ್ನೆಗಳನ್ನು ಎತ್ತಿಕೊಂಡು ಹಲವು 'ಸಮರಶೀಲ' ಚಳುವಳಿಗಳನ್ನು ನಡೆಸಿದರು. ಅಲ್ಲದೆ ಬಹುಪಾಲು ಕಾರ್ಮಿಕರು ತಮ್ಮ ಬಿಡುವಿನ ವೇಳೆಯಲ್ಲಿ ಅವರು ವಾಸಿಸುತ್ತಿದ್ದ ಪ್ರದೇಶಗಳಲ್ಲಿ ರೈತ ಚಳುವಳಿ, ಅವರದೇ ಮನೆಗಳಲ್ಲಿದ್ದ ಬೀಡಿ ಮಹಿಳಾ ಕಾರ್ಮಿಕರನ್ನು ಸಂಘಟಿಸಲು ಕಾರಣಕರ್ತರಾದರು.

ಜನಶಕ್ತಿ : ಹೆಂಚು ಉದ್ಯಮದ ಈ ಬಿಕ್ಕಟ್ಟಿಗೆ ಕಾರಣಗಳೇನು?

ಮಾಧವ : ಇದಕ್ಕೆ ಹಲವು ಕಾರಣಗಳಿವೆ. ಮುಖ್ಯವಾಗಿ ಹೆಂಚು ತಯಾರಿಸಲು ಬೇಕಾದ 'ಆವೆ ಮಣ್ಣು' (ಕಚ್ಚಾ ಸಾಮಗ್ರಿ) ಕೊರತೆ ಇದೆ. ನಗರಗಳು ಬೆಳೆದಂತೆಲ್ಲಾ ಗದ್ದೆಗಳಲ್ಲಿ ಸಿಗುತ್ತಿದ್ದ ಆ ಮಣ್ಣಿನ ಅಭಾವ ಹೆಚ್ಚಾಯ್ತು. ಜೊತೆಗೆ ಹೆಂಚು ಸುಡಲು ಬೇಕಾದ 'ಉರುವಲು ಕಟ್ಟಿಗೆ' ಅಭಾವವಿದೆ. ಅರಣ್ಯ ಕಾನೂನು ಬಿಗಿಯಾಗಿರುವುದು ಇದಕ್ಕೊಂದು ಕಾರಣ. ಮತ್ತೊಂದೆಡೆ ಡೀಸೆಲ್ ದುಬಾರಿಯಾಗಿರುವುದು ಕೂಡ. ಅಲ್ಲದೆ ಇತ್ತೀಚಿನ ದಿನಗಳಲ್ಲಿ ಕಟ್ಟಡ ಕಟ್ಟುವುದೇ ದುಬಾರಿಯಾಗಿದೆ. ಇನ್ನು ಹೆಂಚು ಹೊದಿಕೆಯ ಕೆಳ ಬಳಸುತ್ತಿರುವ ಟಿಂಬರ್ ಸಾಮಗ್ರಿಗಳು (ಮರದ ಪಟ್ಟಿ)ಗಳು ದುಬಾರಿ ಹೀಗೆ. ಈ ಎಲ್ಲಾ ಕಾರಣಗಳಿಂದ ಒಂದು ಕಾಲದಲ್ಲಿದ್ದ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಹೆಂಚು ಉದ್ದಮ ಬಿಕ್ಕಟ್ಟಿಗೆ ಸಿಲುಕಿದ್ದು, ಒಂದು ಕಾಲದಲ್ಲಿ ಲಕ್ಷಾಂತರ ಕಾರ್ಮಿಕರಿಗೆ 'ಬದುಕಲು' ನೆರವಾಗಿದದ್ದುದು ಈಗ ಕೇವಲ ಅಲ್ಲಲ್ಲಿ ಅಸ್ಥಿಪಂಜರದಂತಾಗಿ ನಿಂತಿವೆ.


ಜನಶಕ್ತಿ : ಕರಾವಳಿಯಲ್ಲಿ ಉಳಿದ ಉದ್ಯಮಗಳಾದ ಗೋಡಂಬಿ, ಮೀನುಗಾರಿಕೆ, ಅಡಿಕೆ ಸಂಸ್ಕರಣೆ ಇತ್ಯಾದಿಗಳ ಪರಿಸ್ಥಿತಿ ಏನಿದೆ?

ಮಾಧವ : ಕರಾವಳಿ ಪ್ರದೇಶದ ಉದ್ದಕ್ಕೂ ಹಿಂದೊಮ್ಮೆ ಕೈಮಗ್ಗದ ಶಬ್ದವೇ 'ಪಟಾಪಟ್' ಅಂತಾ ಕೇಳಿಬರುತ್ತಿತ್ತು. ಅಷ್ಟೊಂದು ದೊಡ್ಡದಾಗಿ ಅದು ಬೆಳೆದಿತ್ತು. ಆದರೆ ಅದರಲ್ಲಿ ಕಾಣಿಸಿಕೊಂಡ 'ಬಿಕ್ಕಟ್ಟಿನಿಂದಾಗಿ ಈಗ ಕೈಮಗ್ಗ ಇಡೀ ಕರಾವಳಿಯಿಂದಲೇ ಕಣ್ಮರೆಯಾಗಿದೆ (ಉಡುಪಿ ಸುತ್ತಮುತ್ತ ಸ್ವಲ್ಪ ಇರುವುದನ್ನು ಬಿಟ್ಟು).

ಇನ್ನು ವಿಶೇಷವಾಗಿ ಮಹಿಳೆಯರನ್ನು ಸಮರಶೀಲ ಚಳುವಳಿಗೆ ಧುಮುಕಿಸಿದ್ದ ಕ್ಷೇತ್ರ ಗೋಡಂಬಿ ಸಂಸ್ಕರಣೆ. ಮಂಗಳೂರಿನಲ್ಲಿ 'ಐಯರ್‌ಲೆಸ್ಲೆ' ಎನ್ನುವ ವಿದೇಶಿ ಕಂಪನಿ ಈ ಸಂಸ್ಕರಣೆ ಮಾಡುತ್ತಿತ್ತು. ಈ ಕ್ಷೇತ್ರದಲ್ಲಿ ಸುಮಾರು 7, 8 ಸಾವಿರ ಮಹಿಳೆಯರು ಕೆಲಸ ಮಾಡುತ್ತಿದ್ದರು. ಅಲ್ಲಿ ಕಾರ್ಮಿಕ ಸಂಘವೂ ಬಲಿಷ್ಠವಾಗಿತ್ತು. ಇದರಿಂದಾಗಿ ಆ ಮಹಿಳೆಯರಲ್ಲಿ ರಾಜಕೀಯ ಪ್ರಜ್ಞೆ ಬಹಳವಾಗಿ ಬೆಳೆದಿತ್ತು. ಅವರ ಆ ಸಂಘಟನಾ ರಾಜಕಿಯ ಪ್ರಜ್ಞೆಯಿಂದಾಗಿ ಹಲವು 'ಸಮರಶೀಲ' ಚಳುವಳಿಗಳು ಆ ದಿನಗಳಲ್ಲಿ ನಡೆದವು. ಆದರೆ ಗೋಡಂಬಿ ಬೆಳೆಯುವ ಪ್ರದೇಶಗಳ ಕ್ಷೀಣತೆ. (ಗುಡ್ಡಗಳ ನಾಶ) ಪ್ರಧಾನವಾಗಿ ಈ ಉದ್ಯಮ ಕುಸಿಯುವಂತೆ ಮಾಡಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗ ಇರುವುದು ಹೆಚ್ಚಾಗಿ ಗ್ರಾಮೀಣ ಪ್ರದೇಶದಲ್ಲಿ. ಅಲ್ಲಿ ಸಿಗುವ 'ಕಡಿಮೆ ಸಂಬಳದ ಕಾರ್ಮಿಕರನ್ನು' ಬಳಸಿ ಮಾಲೀಕರು ಈ ಕಾರ್ಖಾನೆಗಳನ್ನು ನಡೆಸುತ್ತಿದ್ದಾರೆ. ಕರಾವಳಿ ಜನರ ಮತ್ತೊಂದು ಜೀವನಾಡಿ ಇಲ್ಲಿನ ಮೀನುಗಾರಿಕೆ. ಆದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 'ಆಳ ಸಮುದ್ರದಲ್ಲಿ' ವಿದೇಶಿ ಟ್ರಾಮ್‌ಳಿಗೆ ಮೀನುಗಾರಿಕೆಗೆ ಅವಕಾಶ ಮಾಡಿಕೊಟ್ಟಿವೆ. ಇದರಿಂದಾಗಿ 'ಮತ್ಸ್ಯಕ್ಷಾಮ' ಉಂಟಾಗಿದೆ. ಪರಿಣಾಮ ಇದನ್ನು ನಂಬಿಕೊಂಡಿದ್ದ ಸಾವಿರಾರು ಮೀನುಗಾರರು ನಿರುದ್ಯೋಗಿಗಳಾಗಿದ್ದಾರೆ. ಇದಲ್ಲದೆ, ಸರ್ಕಾರ ಮೀನುಗಾರಿಕೆಗೆ ಅಗತ್ಯವಾದ ಡೀಸೆಲ್ ಸಬ್ಸಿಡಿ, ಮಾರುಕಟ್ಟೆ ವ್ಯವಸ್ಥೆ, ಬ್ಯಾಂಕ್‌ನಿಂದ ಹಣಕಾಸು ನೆರವು ಇತ್ಯಾದಿಗಳನ್ನು ಕ್ರಮಬದ್ಧವಾಗಿ ನೀಡುತ್ತಿಲ್ಲ. ಇದು ಕೂಡ ಇದರ 'ಬಿಕ್ಕಟ್ಟು' ಉಲ್ಬಣವಾಗಲು ಕಾರಣವಾಗಿದೆ. ಈ ಪ್ರದೇಶದ ಮತ್ತೊಂದು ವಾಣಿಜ್ಯ ಬೆಳೆ ಅಡಿಕೆ. ಈ ಉದ್ಯಮ ಕೂಡ ಹೊಯ್ದಾಟದಲ್ಲಿದೆ. ಮುಖ್ಯವಾಗಿ ಅಡಿಕೆ ಈಗ ಬಳಕೆಯಾಗುತ್ತಿರುವುದು 'ಗುಟ್ಕಾ' ತಯಾರಿಕೆಯಲ್ಲಿ. ಅದರ ಮೇಲೆ ಈಗಲೂ ಹಲವು ನಿರ್ಬಂಧಗಳು ಹೇರಲ್ಪಟ್ಟಿವೆ. ಹೀಗಾಗಿ ಅಡಿಕೆಗೆ ಬೆಲೆಯಿಲ್ಲದಂತಾಗಿ ಅದನ್ನು ಬೆಳೆಯುತ್ತಿದ್ದ ಸಾವಿರಾರು ಅಡಿಕೆ ಬೆಳೆಗಾರರು ಸಂಕಷ್ಟಕ್ಕೆ ಸಿಲುಕುವ ಸನ್ನಿವೇಶದಲ್ಲಿದ್ದಾರೆ.

ಜನಶಕ್ತಿ : ಕರಾವಳಿ ಎಂದರೆ ಥಟ್ಟನೆ ನೆನಪಾಗೋದು ಬೀಡಿ ಉದ್ಯಮ. ಲಕ್ಷಾಂತರ ಬದುಕಿಗೆ ಅದರಲ್ಲೂ ಮಹಿಳೆಯರ ಸ್ವಾವಲಂಬಿ ಬದುಕಿನ ಆಧಾರವಾಗಿದ್ದ ಅದು ಕೂಡ, ಅಪಾಯದಲ್ಲಿ ಸಿಲುಕಿದೆಯಲ್ಲ?

ಮಾಧವ : ಹೌದು ! ಬಹುಶ: ಮುಂದೊಂದು ದಿನ ದಕ್ಷಿಣ ಕನ್ನಡ ಕರಾವಳಿ ಮಾತ್ರವಲ್ಲ ಇಡೀ ದೇಶದಲ್ಲೇ 'ಬೀಡಿ' ಎನ್ನುವುದೊಂದು ಕಾಣಸಿಗಲಾರದು. ಇದಕ್ಕೆ ಪ್ರಮುಖ ಕಾರಣ. ಡಬ್ಲ್ಯೂ.ಹೆಚ್.ಸಿ ನಿರ್ದೇಶನ (world health organisation) 2020 ರ ಹೊತ್ತಿಗೆ ಇಡೀ ಜಗತ್ತನ್ನು 'ತಂಬಾಕುರಹಿತ' ವನ್ನಾಗಿಸಲು ಡಬ್ಲ್ಯುಹೆಚ್‌ಒ ಕಾರ್ಯೋನ್ಮುಖವಾಗಿದೆ. ದಕ್ಷಿಣ ಕನ್ನಡ ಮತ್ತು ಕರಾವಳಿ ಸೇರಿದಂತೆ ನಮ್ಮ ರಾಜ್ಯದ ಹಲವಾರು ಪ್ರದೇಶಗಳಲ್ಲಿ ಇವತ್ತೂ ಬೀಡಿ ಎನ್ನುವುದು ಉದ್ಯೋಗಾಧಾರಿತ ಉದ್ಯಮವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯೊಂದರಲ್ಲೇ ಸುಮಾರು 4 ಲಕ್ಷ ಮಹಿಳೆಯರು



'ಬೀಡಿ' ತಯಾರಿಕೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಬೀಡಿ ಉದ್ಯಮ ಬಂದ್ ಆದರೆ ಈ ಲಕ್ಷಾಂತರ ಕುಟುಂಬಗಳಿಗೆ ಭವಿಷ್ಯವೇ ಇಲ್ಲದಂತಾಗುತ್ತದೆ. ನಮ್ಮ ಸಂಘದಲ್ಲೂ ಸುಮಾರು 50 ರಿಂದ 60 ಸಾವಿರ ಮಂದಿ ಸದಸ್ಯರಿದ್ದಾರೆ. ಕಳೆದ ಹಲವು ದಶಕಗಳಿಂದ ನಮ್ಮ ಚಳುವಳಿಯ ಬೆನ್ನೆಲುಬಾಗಿ ಈ ಕಾರ್ಮಿಕರು ನಿಂತಿದ್ದಾರೆ. ಈಗಾಗಲೇ ನಮ್ಮ ದೇಶದ ಸರ್ವೋಚ್ಚ ನ್ಯಾಯಾಲಯವು ಬೀಡಿಯೂ ಸೇರಿದಂತೆ ಎಲ್ಲಾ ತಂಬಾಕು ಉತ್ಪಾದನೆ ಮೇಲೆ ಮನುಷ್ಯನ ತಲೆಬುರುಡೆ, ಎಲುಬು ಚಿತ್ರ ಹಾಕಬೇಕೆಂದು 200 ರಲ್ಲಿ ತೀರ್ಪು ನೀಡಿತ್ತು. ಆದರೆ ನಮ್ಮ ಚಳುವ ಮೂಲಕ 2009 ರವರೆಗೆ ಆ ತೀರ್ಪು ಜಾರಿ ತಡೆಯೊಡ್ಡಿದೆವು. ಅಲ್ಲದೇ ಈಗಾಗಲೇ ಸಾರ್ವಜನಿ ಸ್ಥಳಗಳಲ್ಲಿ ಧೂಮಪಾನ ನಿಷೇಧ ದೇಶಾದ್ಯ ಜಾರಿಯಲ್ಲಿದೆ. ಇದರ ಪರಿಣಾಮ ಈಗಾಗಲೇ ಬೀ ಉದ್ಯಮದ ಮೇಲೆ ಬಿದ್ದಿದೆ. ಇದಲ್ಲದೆ 2009 ಮೆ 30 ನಂತರದ ಎಲ್ಲಾ ತಂಬಾಕು ಉತ್ಪಾದನೆ ಮೇಲ 'ರೋಗಗ್ರಸ್ಥ ಶ್ವಾಸಕೋಶ' ಚಿತ್ರವನ್ನು ಮುದ್ರಿಸಬೇಕೆಂ ನಿರ್ದೇಶನ ತನ್ನ ವಿಶ್ವ ಆರೋಗ್ಯ ಸಂಸ್ಥೆ ನೀಡಿದ ಇದರಿಂದಾಗಿ ಬೀಡಿ ಉದ್ಯಮ ಅಳಿವಿನ ಅಂಚಿನಲ್ಲಿ ಎಂದೇ ಹೇಳಬಹುದು. ಇವುಗಳ ಎಲ್ಲಾ ಪರಿಣಾಮ ಬೀಡಿ ಕಾರ್ಮಿಕರ ಮೇಲೆ ಮತ್ತು ವಿಶೇಷವಾ ಕಾರ್ಮಿಕ ಚಳುವಳಿಯ ಮೇಲೆ ನೇರವಾಗಿ ತಟ್ಟುತ್ತದ


ಜನಶಕ್ತಿ : ಜಾಗತೀಕ ಆರ್ಥಿಕ ಬಿಕ್ಕಟ್ಟಿ ಕರಿನೆರಳು ಕರಾವಳಿ ಮೇಲೆ ಹೇಗೆ ಪರಿಣಾಮ ಬೀರಿದೆ?

ಮಾಧವ : ಇದರ ನೇರ ಪರಿಣಾಮ ಉಂಟಾಗಿರುವುದು ಜಿಲ್ಲೆಯ ಕಟ್ಟ ನಿರ್ಮಾಣ ಕ್ಷೇತ್ರದ ಮೇಲೆ ಮತ್ತು ಕಾರ್ಮಿಕರ ಬದುಕಿನ ಮೇಲೆ. ಜೊತೆ ಮೊದಲಿನಿಂದಲೂ ಕರಾವ ಪ್ರದೇಶಗಳಿಂದ ಸಾವಿರಾರು ಜನರು ಅರಬ್ ದೇಶಗಳಿಗೆ ಹೋಗುತ್ತಿರುತ್ತ ಆದರೆ ಇವತ್ತು ಆ ಗಲ್ಫ್ ಪ್ರದೇಶಗಳ ಈ ಬಿಕ್ಕಟ್ಟಿನಿಂದ ತತ್ತರಿಸುತ್ತಿವೆ ಇದರಿಂದಾಗಿ ಅಲ್ಲಿ ಉದ್ಯೋಗ ಕಳೆದುಕೊಂಡು ಸಾವಿರಾರು ಜನರು 'ತಾಯ್ನಾಡಿಗೆ' ನಿರುದ್ಯೋಗಿಗಳಾ ವಾಪಸ್ಸಾಗುತ್ತಿದ್ದಾರೆ. ಅಲ್ಲದೆ ಇಡೀ ಕರಾವಳಿಯಲ್ಲಿ 'ಕಟ್ಟಡ' ನಿರ್ಮಾಣ ಸ್ಥಗಿತಗೊಂಡಿರುವುದರಿಂದ ಇಲ್ಲಿ ಸಾವಿರಾರು ಕಟ್ಟಡ ಕಾರ್ಮಿಕರ ನಿರುದ್ಯೋಗಿಗಳಾಗಿದ್ದಾರೆ. ಇದ ಕರಾವಳಿಯ 'ಆರ್ಥಿಕತೆ' ಮೇಲೆ ಪರಿಣಾಮ ಬೀರುತ್ತಿದೆ.

ಜನಶಕ್ತಿ : ದಕ್ಷಿಣ ಕನ್ನಡ ಮತ್ತು ಕರಾವಳಿಯಲ್ ಹೊಸ ಕೈಗಾರಿಕೆ ಬೆಳವಣಿಗೆ ಅವಕಾಶವಿಲ್ಲವೇ

ಮಾಧವ : ಮಂಗಳೂರಿನಲ್ಲಿರುವ ಎಂ.ಸಿ.ಎಫ್ (ಮಂಗಳೂರು ಫರ್ಟಿಲೈಸರ್ಸ ಫ್ಯಾಕ್ಟರಿ) ಮತ್ತು ಮಂಗಳೂರು ಬಂದರ ಹೊರತುಪಡಿಸಿದರೆ ಬೃಹತ್ ಕೈಗಾರಿಕೆಗಳ್ಯಾವ

ಪುಟ 14ಕ



'ಟಾರ್ಗೆಟೆಡ್' ಅಂದರೆ 'ಗುರಿಯಿಟ್ಟ' ವ್ಯವಸ್ಥೆಯ ಹೆಸರಿನಲ್ಲಿ ಸಾರ್ವತ್ರಿಕ ಪಡಿತರ ಮತ್ತು ಇತರ ಸಬ್ಸಿಡಿಗಳ ಮೇಲೆಯೇ ಗುರಿಯಿಟ್ಟಿರುವ ಅರ್ಥಾತ್ ಅವು ಜನಗಳಿಗೆ ಸಿಗದಂತೆ ಮಾಡಿ ಜನಸಾಮಾನ್ಯರ ಬದುಕನ್ನು ನಾಶಮಾಡುವಂತಹ ಬೆಲೆಯೇರಿಕೆ ಇದು. ಯುಪಿಎ ಸರಕಾರದ ತಪ್ಪು ನೀತಿಗಳನ್ನು ಬದಲಿಸದೆ, ಆಹಾರ ವಸ್ತುಗಳಲ್ಲಿ ಜೂಜುಕೋರ ವ್ಯಾಪಾರವನ್ನು ನಿಷೇಧಿಸದೆ ನಿರಂತರ ಬೆಲೆಯೇರಿಕೆಯೆಂಬ ಈ ಕ್ರೂರ ದಾಳಿಯನ್ನು ತಡೆಯಲು, 'ಆಮ್ ಆದ್ಮಿ'ಯ ಬದುಕನ್ನು ರಕ್ಷಿಸಲು ಸಾಧ್ಯವಾಗದು.

ಇದೀಗ 'ಗುರಿಯಿಟ್ಟ' ಬೆಲೆಯೇರಿಕೆ !

ಕಾಂಗ್ರೆಸಿನ ಚುನಾವಣಾ ಪ್ರಣಾಳಿಕೆ ಜನಸಾಮಾನ್ಯರ ಬಗ್ಗೆ-'ಆಮ್ ಆದ್ಮಿ'ಯ ಬಗ್ಗೆ- ಬಹಳ ಮಾತಾಡಿತ್ತು. ಈಗ ಅದೇ ಕೋಟ್ಯಂತರ ಜನಸಾಮಾನ್ಯರ ಬದುಕಿನ ಮೇಲೆ ಕ್ರೂರ ದಾಳಿ ನಡೆದಿದೆ, ಎಲ್ಲಾ ಜೀವನಾವಶ್ಯಕ ವಸ್ತುಗಳ ನಿರಂತರ ಬೆಲೆಯೇರಿಕೆಗಳ ಮೂಲಕ. ಇದೊಂದು ವಿಚಿತ್ರ ಸನ್ನಿವೇಶದಲ್ಲಿ ನಡೆಯುತ್ತಿದೆ- ಒಂದೆಡೆ ಸಗಟು ಬೆಲೆ ಸೂಚ್ಯಂಕ ಋಣಾತ್ಮಕವಾಗಿದೆ, ಅಂದರೆ ಸಗಟು ಬೆಲೆಗಳು ಕಳೆದ ವರ್ಷಕ್ಕೆ ಹೋಲಿಸಿದರೆ ಇಳಿಯುತ್ತಿವೆ ಎಂಬ ಸೂಚನೆ ಕೊಟ್ಟರೆ, ಗ್ರಾಹಕ ಬೆಲೆ ಸೂಚ್ಯಂಕ 10 ಶೇಕಡಾಕ್ಕಿಂತಲೂ ಹೆಚ್ಚಿನ ದರದಲ್ಲಿ ಏರಿದೆ. ಈ ವಿಷಮ ಜೋಡಿಯೇ ಒಂದು ಗಂಭೀರ ಪರಿಣಾಮ ಬೀರುವ ಸಂಗತಿ, ಅದು ನಮ್ಮ ಆರ್ಥಿಕದ ಸಂರಚನೆಯಲ್ಲಿಯೇ ಹುದುಗಿರುವ ಒಂದು ಆಳದ ನ್ಯೂನ್ಯತೆಯನ್ನು ಬಿಂಬಿಸುತ್ತದೆ.

ಆದ್ದರಿಂದ ಇದೊಂದು 'ಗುರಿಯಿಟ್ಟ' ಬೆಲೆಯೇರಿಕೆ ಎಂಬುದು ಸುಸ್ಪಷ್ಟ; ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೇಲೆ ಮತ್ತು ಇತರ ಸಬ್ಸಿಡಿಗಳ ಮೇಲೆ ಗುರಿಯಿಟ್ಟು, ಅಂದರೆ ಅವು ಜನಗಳಿಗೆ ಸಿಗದಂತೆ ಮಾಡಿ ಅವರ ಸಂಕಟಗಳನ್ನು ಇಮ್ಮಡಿಗೊಳಿಸುವ ಸರಕಾರದ ತಪ್ಪು ನೀತಿಗಳಿಂದ ಜನಸಾಮಾನ್ಯರ ಬದುಕನ್ನು ನಾಶಮಾಡುವಂತಹ ಬೆಲೆಯೇರಿಕೆ. ಇನ್ನೊಂದೆಡೆ, ಅಷ್ಟೇನೂ ಆವಶ್ಯಕವಲ್ಲದ ಸಾಮಗ್ರಿಗಳ ಗ್ರಾಹಕರಿಗೆ, ಮುಖ್ಯವಾಗಿ ಅವುಗಳ ಉತ್ಪಾದಕರಿಗೆ ಈ ಋಣಾತ್ಮಕ ಸಗಟು ಬೆಲೆ ಸೂಚ್ಯಂಕದಿಂದ ಲಾಭವಾಗುತ್ತಿದೆ. ಸಗಟು ಬೆಲೆ ಸೂಚ್ಯಂಕ ಮತ್ತು ಗ್ರಾಹಕ ಬೆಲೆ ಸೂಚ್ಯಂಕದ ನಡುವಿನ ವಿಷಮತೆಗೆ ಕೂಡಾ ಒಂದು ಉದ್ದೇಶಪೂರ್ವಕ ಪಕ್ಷಪಾತವೇ ಕಾರಣ. ಸಗಟು ಬೆಲೆ ಸೂಚ್ಯಂಕವನ್ನು ಲೆಕ್ಕಹಾಕುವಾಗ ಬಳಕೆಯ ವಿವಿಧ ಸರಕುಗಳಿಗೆ ಕೊಡುವ ಪ್ರಮಾಣತ್ವ ಕುರಿತಂತೆ ಇರುವ ಪಕ್ಷಪಾತ ಇದು. ಒಟ್ಟು ಬಳಕೆಯಲ್ಲಿ ಆಹಾರ ಮತ್ತು ಆವಶ್ಯಕ ಬಳಕೆಯ ವಸ್ತುಗಳ ಪ್ರಮಾಣ ಕೇವಲ 20 ಶೇ. ಎಂದು ಪರಿಗಣಿಸಲಾಗುತ್ತಿದೆ. ಆದರೆ ವಾಸ್ತವತೆ ಚಿತ್ರ ತದ್ವಿರುದ್ಧವಾಗಿದೆ. 77ಶೇಕಡಾ ಮಂದಿಗೆ ದಿನಕ್ಕೆ 20ರೂ. ಗಳಷ್ಟು ಕೂಡಾ ಖರ್ಚು ಮಾಡಲಾಗದ ಸ್ಥಿತಿ ಇರುವ ನಮ್ಮ ದೇಶದಲ್ಲಿ ಈ ಅಲ್ಪ ಆದಾಯದ ಬಹುಪಾಲು ಆಹಾರ ಮತ್ತು ಇತರ ಅತ್ಯಾವಶ್ಯಕ ವಸ್ತುಗಳಿಗಷ್ಟೇ ಖರ್ಚು ಮಾಡಲೇ ಬೇಕಾದ ಪರಿಸ್ಥಿತಿಯಿದೆ. ಈ 77 ಶೇಕಡಾ ಭಾರತೀಯ ಜನತೆಯ ಬದುಕೇ ಈ ಕ್ರೂರ ದಾಳಿಯ ಗುರಿ.


ದಟ್ಟ ದಾರಿದ್ರ್ಯದ ದವಡೆಗೆ

ಎಲ್ಲಾ ಜೀವನಾವಶ್ಯಕ ವಸ್ತುಗಳು, ಬೇಳೆಗಳು, ಕಾಳುಗಳು, ತರಕಾರಿಗಳು ಎಲ್ಲದರ ಬೆಲೆಗಳಲ್ಲಿ ಜೂನ್ 2008ರಿಂದ ಜೂನ್ 2009ರ ನಡುವೆ 50 ಶೇಕಡಾ ಹೆಚ್ಚಳವಾಗಿದೆ. ಇವು ಕೋಟ್ಯಂತರ ಜನಗಳನ್ನು ದಟ್ಟ ದಾರಿದ್ಯದ ದವಡೆಗೆ ನೂಕುತ್ತಿವೆ.

ಮಳೆಯ ಪ್ರಮಾಣದಲ್ಲಿ ವ್ಯತ್ಯಾಸ ಮತ್ತು ಆಹಾರಧಾನ್ಯಗಳು ಮತ್ತು ಕಾಳುಗಳ ಉತ್ಪಾದನೆಯಲ್ಲಿ ಇಳಿಕೆಯಾಗಬಹುದೆಂಬ ಭಯ ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸುತ್ತಿದೆ. ಮಳೆಯಲ್ಲಿ ವಿಳಂಬದಿಂದಾಗಿ ಭತ್ತದ ನಾಟಿಯಲ್ಲಿ 13.66ಲಕ್ಷ ಹೆಕ್ಟೇರುಗಳಷ್ಟು ಅಂದರೆ ಸುಮಾರು 25ಶೇಕಡಾ ಇಳಿಕೆಯಾಗಿದೆ. ಮಳೆಯ ವಿಳಂಬವೊಂದೇ ಕಾರಣವಲ್ಲ. ಒಳ್ಳೆಯ ನೀರಾವರಿ ಇರುವ ಪಂಜಾಬ್ ಮತ್ತು ಹರ್ಯಾಣಾದಲ್ಲಿಯೂ 8.17ಲಕ್ಷ ಹೆಕ್ಟೇರು ಜಮೀನುಗಳಲ್ಲಿ ನಾಟಿಯಾಗಿಲ್ಲ. ಕಾಳುಗಳ ಉತ್ಪಾದನೆ 53 ಶೇಕಡಾದಷ್ಟು ಕಡಿಮೆಯಾಗಬಹುದು ಎಂದು ನಿರೀಕ್ಷಿಸಲಾಗಿದೆ. ಸೆಜ್ಜೆಯ ಬಿತ್ತನೆ ಕೇವಲ 6.56 ಲಕ್ಷ ಹೆಕ್ಟೇರುಗಳಲ್ಲಿ ಅಂದರೆ 2008ಕ್ಕೆ ಹೋಲಿಸಿದರೆ 8 ಶೇಕಡಾಕ್ಕಿಂತಲೂ ಕಡಿಮೆ ಗದ್ದೆಗಳಲ್ಲಿ ಮಾತ್ರ ಆಗಿದೆ. ಜೋಳ, ಮೆಕ್ಕೆಜೋಳದ್ದು ಕೂಡಾ ಇದೇ ಕಥೆ.

ಸರಕಾರ ಅತ್ಯಂತ ದೃಢವಾದ ರೀತಿಯಲ್ಲಿ ಮಧ್ಯಪ್ರವೇಶ ಮಾಡದಿದ್ದರೆ ಜನಸಾಮಾನ್ಯರ ಬದುಕು ಇನ್ನಷ್ಟು ಹದಗೆಡದಂತೆ ರಕ್ಷಿಸುವುದು ಸಾಧ್ಯವಿಲ್ಲ. ಆದರೆ, ದುರದೃಷ್ಟವಶಾತ್ ಯುಪಿಎ-2 ಸರಕಾರ ಈ ದಿಸೆಯಲ್ಲಿ ಯಾವುದೇ ನಿರ್ಣಾಯಕ ಕ್ರಮ ಕೈಗೊಂಡಿಲ್ಲ. ತಕ್ಷಣವೇ ವಿತರಣಾ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸಿ, ಈ ಜಾಲದ ಮೂಲಕ ಆವಶ್ಯಕ ಸಾಮಗ್ರಿಗಳನ್ನು ಹಂಚಬೇಕಾಗಿದೆ. ಆದರೆ ಬಜೆಟಿನಲ್ಲಿ ವ್ಯಕ್ತವಾಗಿರುವ ಸರಕಾರದ ಯೋಚನೆ ಸಂಪೂರ್ಣ ವಿರುದ್ಧ ದಿಕ್ಕಿನಲ್ಲಿರುವಂತೆ ಕಾಣುತ್ತದೆ. ವಿತರಣೆಯನ್ನು ಅತ್ಯಗತ್ಯವಿರುವ ನಿರ್ದಿಷ್ಟ ಗುಂಪಿನವರಿಗೇ 'ಗುರಿಗೊಳಿಸುವ' ಹೆಸರಿನಲ್ಲಿ 'ಬಡತನದ ರೇಖೆಯ ಕೆಳಗೆ'(ಬಿಪಿಎಲ್) ಎನ್ನುವುದರಲ್ಲಿಯೇ ವಂಚನೆಯಾಗುತ್ತಿದೆ, ಇದರಿಂದ ಕೋಟ್ಯಂತರ ಜನಗಳಿಗೆ ಅವರು ತೆರಬಹುದಾದ ಬೆಲೆಗಳಲ್ಲಿ ಜೀವನಾವಶ್ಯಕ ವಸ್ತುಗಳು ಸಿಗದೇ ಹೋಗುತ್ತಿದೆ. ಈಗಾಗಲೇ ನೋಡಿರುವಂತೆ ಸರಕಾರ ತರಬೇಕೆಂದಿರುವ ಆಹಾರ ಭದ್ರತಾ ಕಾನೂನು ಬಡವರಿಗೆ ಆಗಲೇ ಅಂತ್ಯೋದಯ ಯೋಜನೆಯಲ್ಲಿ ಸಿಗುತ್ತಿರುವ ಫಲವೂ ದೊರೆಯದಂತೆ ವಂಚಿಸುತ್ತದೆ.

ಸಗಟು ಬೆಲೆ ಸೂಚ್ಯಂಕ ಮತ್ತು ಗ್ರಾಹಕ ಬೆಲೆ ಸೂಚ್ಯಂಕದ ನಡುವೆ ಇರುವ ವಿಷಮತೆ ಮತ್ತು



ಜೀವನಾವಶ್ಯಕ ವಸ್ತುಗಳ ಬೆಲೆಗಳಲ್ಲಿ ಅಸಾಮಾನ್ಯ ಏರಿಕೆ ಕಳ್ಳದಾಸ್ತಾನಿನಿಂದಾಗಿ ಎಂದು ಅತ್ಯಂತ ಕುಗ್ಗು ದನಿಯಲ್ಲಿ ವಿವರಿಸುವ ಒಂದು ಪ್ರವೃತ್ತಿಯೂ ಸರಕಾರದ ಕೆಲವು ವಲಯಗಳಲ್ಲಿ ಕಾಣುತ್ತಿದೆ. ಹಾಗಿದ್ದರೆ ಮಾರುಕಟ್ಟೆಯ ಮೇಲೆ ನಿಯಂತ್ರಣವಿಡುವುದು ಮತ್ತು ಕಳ್ಳ ದಾಸ್ತಾನಿನ ಮೇಲೆ ಕಣ್ಣಿಡುವುದು ಸರಕಾರದ ಜವಾಬ್ದಾರಿ. ಇದು ಪ್ರಥಮತಃ ರಾಜ್ಯ ಸರಕಾರಗಳ ಕೆಲಸ ಎಂದು ಹೊಣೆ ದಾಟಿಸಲು ಕೇಂದ್ರ ಸರಕಾರ ಪ್ರಯತ್ನಿಸುತ್ತದೆ. ವಾಸ್ತವವಾಗಿ ಕಳ್ಳ ದಾಸ್ತಾನಿನ ಮೂಲಕ ಬೆಲೆಗಳನ್ನು ತಮಗೆ ಬೇಕಾದಂತೆ ನಿರ್ಧರಿಸಿಕೊಳ್ಳಲು ಅವಕಾಶವಾಗದಂತೆ ಮಾಡುವುದು ಕೇಂದ್ರ ಸರಕಾರದ ಜವಾಬ್ದಾರಿ. ನಿಜಸಂಗತಿಯೆಂದರೆ, ಇಂತಹ ಬೆಲೆಯೇರಿಕೆ ಭಾರತದಾದ್ಯಂತ ಎಲ್ಲಾ ರಾಜ್ಯಗಳಲ್ಲಿ ಸಾರ್ವತ್ರಿಕವಾಗಿ ನಡೆಯುತ್ತಿದೆ.

ಜೂಜುಕೋರತನಕ್ಕೆ ಪ್ರೋತ್ಸಾಹ ನಿಲ್ಲಲಿ

ಅಭೂತಪೂರ್ವ ಬೆಲೆಯೇರಿಕೆಗೆ ಕಾರಣ ಮೊದಲನೆಯದಾಗಿ ಸಟ್ಟಾ ಕೋರತನ. ಆವಶ್ಯಕ ವಸ್ತುಗಳಲ್ಲಿ ವಾಯಿದಾ ವ್ಯಾಪಾರದ (ಮುಂಗಡ ವ್ಯಾಪಾರ) ಮೂಲಕ ಸರಕು ವಿನಿಮಯಗಳಲ್ಲಿ ಜೂಜುಕೋರತನಕ್ಕೆ ದೊಡ್ಡ ಪ್ರಮಾಣದಲ್ಲಿ ಪ್ರೋತ್ಸಾಹ ನೀಡಲಾಗುತ್ತಿದೆ. ಭಾರತದ ವಾಯಿದಾ ಮಾರುಕಟ್ಟೆ ಆಯೋಗ (ಫಾರ್ವರ್ಡ್ಸ್ ಮಾರ್ಕೆಟ್ ಕಮಿಶನ್ ಆಫ್ ಇಂಡಿಯಾ) ತನ್ನ ಪಾಕ್ಷಿಕ ವರದಿಗಳಲ್ಲಿ ನೀಡಿರುವ ಮಾಹಿತಿಗಳ ಪ್ರಕಾರ ಸರಕು ವಿನಿಮಯ ಕೇಂದ್ರಗಳಲ್ಲಿ ಈ ವರ್ಷ ಜೂನ್ 1ರಿಂದ ಜೂನ್ 30 ರ ನಡುವೆ ಆಗಿರುವ ವ್ಯಾಪಾರದ ಒಟ್ಟು ಮೌಲ್ಯ 15,64,114.96 ಕೋಟಿ ರೂಪಾಯಿಗಳು. 2007ರಲ್ಲಿ ಇದೇ ಅವಧಿಯಲ್ಲಿ ಆಗಿರುವ ವ್ಯಾಪಾರದ ಒಟ್ಟು ಮೌಲ್ಯ 2,21,88.06 ಕೋಟಿ ರೂಪಾಯಿಗಳು. ಅಂದರೆ ಎರಡೇ ವರ್ಷಗಳಲ್ಲಿ ವಾಯಿದಾ ಮಾರುಕಟ್ಟೆಗಳಲ್ಲಿ ನಡೆಯುವ ವ್ಯಾಪಾರಗಳ ಒಟ್ಟು ಮೌಲ್ಯದಲ್ಲಿ ಏಳು ಪಟ್ಟಿಗಿಂತಲೂ ಹೆಚ್ಚಿನ ನೆಗೆತ ಕಾಣ ಬಂದಿದೆ. ಇದು ನಿಜವಾಗಿಯೂ ಒಂದು ದೈತ್ಯಾಕಾರದ ಜೂಜುಕೋರ ವ್ಯಾಪಾರ. ಇಂತಹ ವ್ಯಾಪಾರದ ಪ್ರಮಾಣ ಒಟ್ಟು ಸರಕುಗಳ ದಾಸ್ತಾನಿಗಿಂತ ಅಥವಾ ದೇಶದ ಉತ್ಪಾದನಾ ಸಾಮರ್ಥ್ಯಕ್ಕಿಂತ ಅದೆಷ್ಟೋ ಹೆಚ್ಚು. ಆದ್ದರಿಂದ, ಇಂತಹ ಅಗಾಧ ಪ್ರಮಾಣದ ವ್ಯಾಪಾರದಲ್ಲಿ ಲಾಭ ಗಳಿಸಲು ಇರುವ ಏಕೈಕ ದಾರಿಯೆಂದರೆ ಈ ಸರಕುಗಳ ಬೆಲೆಗಳು ನಿರಂತರವಾಗಿ ಹೆಚ್ಚುತ್ತಿರಬೇಕು, ಅದು ಜನಗಳ ಮೇಲೆ ಯಾವುದೇ ಕರುಣೆಯೆಂಬುದಿಲ್ಲದೆ ಹೊರೆಗಳನ್ನು ಹಾಕುತ್ತಿರಬೇಕು.

ಈ ವರ್ಷದ ಬಜೆಟಿನಲ್ಲಿ ಯುಪಿಎ ಸರಕಾರ ಜೂಜುಕೋರ ವ್ಯಾಪಾರದ ಈ ವಿದ್ಯಮಾನವನ್ನು ಎದುರಿಸುವುದಂತೂ ಒತ್ತಟ್ಟಿಗಿರಲಿ, ಸರಕು ವ್ಯವಹಾರ ತೆರಿಗೆಯನ್ನು ರದ್ದು ಮಾಡಿ ತದ್ವಿರುದ್ಧವಾದ ಕೆಲಸವನ್ನೇ ಅದು ಮಾಡಿದೆ. ಜೀವನಾವಶ್ಯಕ ವಸ್ತುಗಳಲ್ಲಿ ನಿರಂತರ ಬೆಲೆಯೇರಿಕೆಯ ಪ್ರವೃತ್ತಿಯನ್ನು ತಡೆಯಬೇಕಾದರೆ ಮತ್ತು ಜನಸಾಮಾನ್ಯನ ಬದುಕನ್ನು ರಕ್ಷಿಸಬೇಕೆಂದಿದ್ದರೆ ಯುಪಿಎ ಸರಕಾರ ಈ ಸರಕುಗಳಲ್ಲಿ ಎಲ್ಲಾ ವಾಯಿದಾ ವ್ಯವಹಾರಗಳನ್ನು, ಜೂಜುಕೋರ ವ್ಯಾಪಾರವನ್ನು ನಿಷೇಧಿಸಬೇಕು.

ಎಡಪಕ್ಷಗಳು ಸಂಸತ್ತಿನ ಒಳಗೆ ಮತ್ತು ಜನಗಳ ಹೋರಾಟಗಳ ಮೂಲಕ ಹೊರಗೆ ಸಂಘಟಿಸುತ್ತಿರುವ ಪ್ರತಿಭಟನೆಗಳು ಮುಂದಿನ ದಿನಗಳಲ್ಲಿ ಇನ್ನಷ್ಟು ತೀವ್ರಗೊಳ್ಳಬೇಕು. ಜೀವನಾವಶ್ಯಕ ವಸ್ತುಗಳ ಬೆಲೆಗಳಲ್ಲಿ ಇಂತಹ ಕ್ರೂರ ಏರಿಕೆಗಳ ಮೂಲಕ ಇನ್ನಷ್ಟು ದಾಳಿಗಳಿಂದ ಕಾಂಗ್ರೆಸಿನ ಪ್ರಣಾಳಿಕೆಯ 'ಆಮ್ ಆದ್ಮಿ'ಯ ಅಂದರೆ ಜನಸಾಮಾನ್ಯನ ಸ್ಥಾನಮಾನ ಇನ್ನೂ ಕುಸಿಯದಂತೆ ಉಳಿಸಿಕೊಳ್ಳಲಾದರೂ ಇದು ಅಗತ್ಯ.

('ಪೀಪಲ್ಸ್ ಡೆಮಾಕ್ರಸಿ' ಸಂಪಾದಕೀಯದಿಂದ)

ತೊಗರಿಬೇಳೆ, ಅಕ್ಕಿ, ಸಕ್ಕರೆ, ಎಣ್ಣೆ, ತರಕಾರಿ ಇತ್ಯಾದಿ ಇತ್ಯಾದಿಗಳ ಬೆಲೆಗಳೆಲ್ಲಾ ಗಗನಕ್ಕೇರಿ ಬಡವರು, ಮಧ್ಯಮ ವರ್ಗದವರ ಕೈಗೆ ಎಟುಕದಂತಾಗಿದೆ. ಕೇಂದ್ರ ಯುಪಿಎ ಸರ್ಕಾರ ರಾಜ್ಯ ಬಿಜೆಪಿ ಸರ್ಕಾರಗಳು ಬೆಲೆ ಏರಿಕೆಗೆ ಕಾರಣವಾಗಿವೆ ಮಾತ್ರವಲ್ಲ ಜನರು ಸಂಕಟಗಳಲ್ಲಿರುವುದನ್ನು ನೋಡುತ್ತಾ ತಣ್ಣಗೆ ಕುಳಿತಿವೆ.

ಬಿಜೆಪಿ -ಯುಪಿಎ ಸರ್ಕಾರಗಳ ಹೊಣೆಗೇಡಿತನ

ಬೆಲೆ ಏರಿಕೆಯ ಶಾಕ್

ಜಯ

"ಹೆಚ್ಚುತ್ತಿರುವ ಆಹಾರ ಧಾನ್ಯ ಬೆಲೆಗಳಿಂದಾಗಿ ಭಾರತದಲ್ಲಿ ಹಸಿವಿನಿಂದ ನರಳುತ್ತಿರುವವರ ಸಂಖ್ಯೆ ಕಳೆದ ವರ್ಷವೊಂದರಲ್ಲೇ ಇನ್ನೂ 10 ಕೋಟಿ ಹೆಚ್ಚಾಗಿದೆ."

ರಾಷ್ಟ್ರಾಧ್ಯಕ್ಷೆ ಪ್ರತಿಭಾ ಪಾಟೀಲ್, ಸಿದ್ದಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜೀಯವರ 102ನೇ ಜನ್ಮದಿನಾಚರಣೆಯ ಸಭೆಯಲ್ಲಿ ಹೇಳಿದ್ದು.


ಬೆಲೆಯೇರಿಕೆಯು ಪೆಡಂಭೂತದಂತೆ ಜನತೆಯನ್ನು ಹುರಿದು ಮುಕ್ಕುತ್ತಿದೆಯೆಂಬುದು ರಾಷ್ಟ್ರಾಧ್ಯಕ್ಷರಾದಿ ಯಾಗಿ ಶ್ರೀಸಾಮಾನ್ಯರೆಲ್ಲರಿಗೂ ತಿಳಿದಿರುವಂಥದೇ. ಇತ್ತೀಚಿಗೆ ಬ್ರಿಟನ್ನಿನ ರಾಣಿ ತೀವ್ರ ಬೆಲೆಯೇರಿಕೆ ಮತ್ತು ಹಣಕಾಸು ಬಿಕ್ಕಟ್ಟಿನ ಪರಿಣಾಮದಿಂದ ಬೃಹತ್ ಅರಮನೆಯಿಂದ ಸಣ್ಣ ಬಂಗಲೆಗೆ ವಾಸವ್ನ ಬದಲಾಯಿಸಿದ್ದಾರೆ. ರಾಣಿಯ ಗತಿಯೇ ಹೀಗಾದಲ್ಲಿ ಇನ್ನು ಶ್ರೀಸಾಮಾನ್ಯನ ಪಾಡೇನು ಎಂಬುದಷ್ಟೆ ಇಲ್ಲಿಯ ಪ್ರಶ್ನೆ.

ಕಳೆದೊಂದು ವರ್ಷದಿಂದ ಏರುತ್ತಲೇ ಇರುವ ಆಹಾರ ಧಾನ್ಯಗಳ ಬೆಲೆಗೆ ಕೇಂದ್ರ ಸರ್ಕಾರವಾಗಲೀ ರಾಜ್ಯದ ಬಿಜೆಪಿ ಸರ್ಕಾರವಾಗಲೀ ಅಂಕುಶ ಹಾಕದೆ ದಿನಾಲು ಹೊಟ್ಟೆ ತುಂಬಿಸಲು ಹೆಣಗುತ್ತಿರುವ ಕೋಟ್ಯಾಂತರ ಜನಸಮೂಹವನ್ನು ಸಮಾಧಿ ಮಾಡಲು ಪಣತೊಟ್ಟಂತೆ ಕಾಣುತ್ತಿದೆ. ಏರುತ್ತಿರುವ ಬೆಲೆಯಿಂದ ಇಡೀ ದೇಶದಾದ್ಯಂತ ಕೂಲಿಕಾರರು, ಅಸಂಘಟಿತ ಕಾರ್ಮಿಕರು, ಗಾರ್ಮೆಂಟ್ ನೌಕರರು, ಮಹಿಳೆಯರು, ಬಡ ವಿಭಾಗದ ಜನತೆ ತತ್ತರಿಸುತ್ತಿದ್ದರೆ, ಬೆಲೆಯೇರಿಕೆ ತಡೆಗಟ್ಟಲು ಅವಶ್ಯ ಕ್ರಮಗಳನ್ನು ಕೈಗೊಳ್ಳದ ಕೇಂದ್ರ ಸರ್ಕಾರ ಬಜೆಟ್‌ಗೆ ಮುನ್ನದಿನ ಬಿಡುಗಡೆ ಮಾಡಿದ ಆರ್ಥಿಕ ಸಮೀಕ್ಷೆಯ ಗುರಿ ಮತ್ತು ಶ್ರಮವೆಲ್ಲ ಆರ್ಥಿಕ ಸುಧಾರಣೆಗಳ ಹೆಸರಿನಲ್ಲಿ ಬಂಡವಾಳಶಾಹಿ ಕಂಪನಿಗಳಿಗೆ ಲಾಭದಾಯಕ ಸಾರ್ವಜನಿಕ ರಂಗದ ಉದ್ದಿಮೆಗಳನ್ನು ಹೇಗೆ ಮಾರುವುದು ಎಂಬುದರ ಕುರಿತು ನೀಲಿ ನಕ್ಷೆ ತಯಾರಿಸಲು ಹೆಚ್ಚು ತಲೆ ಕೆಡಿಸಿಕೊಂಡಿತ್ತು.

ಬೆಳೆ, ಎಣ್ಣೆ, ತರಕಾರಿ, ಕಾಳು, ಅಕ್ಕಿ, ಗೋಧಿಯಂಥಹ ಅತ್ಯವಶ್ಯ ವಸ್ತುಗಳ ಬೆಲೆ ಬೃಹದಾಕಾರವಾಗಿ ಏರುತ್ತಲೇ ಇದೆ. ಅದರಲ್ಲೂ ಕೆಲವು ಧಾನ್ಯ ಮತ್ತು ತರಕಾರಿಗಳ ಬೆಲೆ ಕೆಜಿಯೊಂದಕ್ಕೆ ರೂ. 80 ರಿಂದ 100 ರವರೆಗೂ ಏರಿದೆ. ಕೇಂದ್ರ ಸರ್ಕಾರವು ಇತ್ತೀಚಿಗೆ ಹೆಚ್ಚಳ ಮಾಡಿದ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯು ಉರಿಯುತ್ತಿರುವ ಬೆಂಕಿ ತುಪ್ಪ ಸುರಿದಂತಾಯಿತು. ಸಕಾಲದಲ್ಲಿ ಮುಂಗಾರು ಮಳೆ ಬೀಳದೆ ದೇಶಾದ್ಯಂತ ಗೋಚರಿಸುತ್ತಿರುವ ... ಪರಿಸ್ಥಿತಿಯಿಂದ ತರಕಾರಿ ಮತ್ತು ಆಹಾರ ಧಾನ್ಯಗ... ಬೆಲೆ ಇನ್ನಷ್ಟು ಹೆಚ್ಚಳಗೊಳ್ಳಬಹುದು. ಹವಾಮಾ... ಇಲಾಖೆಯು ದೇಶಾದ್ಯಂತ ಅಳವಡಿಸಿರುವ ಒಟ್ಟು 3... ಹವಾಮಾನ ಮಾನಿಟರಿಂಗ್ ಉಪವಿಭಾಗಗಳ ಪೈ... ಒಟ್ಟು 29 ಉಪವಿಭಾಗಗಳಲ್ಲಿ ಮ... ಕೊರತೆಯಿದೆಯೆಂದು ತಿಳಿಸಿರುವುದು ಬರ... ಛಾಯೆಯನ್ನು ಮೂಡಿಸುತ್ತಿದೆ. ಇದರಿಂದಾ... ದೇಶಾದ್ಯಂತ ಹಲವಾರು ಧಾನ್ಯಗಳ ಬಿತ್ತನೆ ಕಾಯ... ವಿಶೇಷವಾಗಿ ಭತ್ತ ಬಿತ್ತನೆ ಹರಿಯಾಣ ಮತ... ಪಂಜಾಬ್‌ಗಳಲ್ಲಿ ಕಳೆದ ವರ್ಷಕ್ಕಿಂತ ಕಡಿಮೆ ಬಿತ್ತ... ಮಾಡಲಾಗಿದೆ.

ಅವಶ್ಯ ವಸ್ತುಗಳ ಹಣದುಬ್ಬರ :

ಹಣದುಬ್ಬರ ಶೇ. - 1.21 ನಷ್ಟ... ಇಳಿಮುಖಗೊಂಡಿದೆಯೆಂದು ಸರ್ಕಾ... ಹೇಳಿಕೊಳ್ಳುತ್ತಿದೆಯಾದರೂ ಅವ... ವಸ್ತುಗಳ ಹಣದುಬ್ಬರವಿನ್ನೂ ಶೇ. 10.8... ನಷ್ಟಿದೆಯೆಂದು ಪಾರ್ಲಿಮೆಂಟ... ಅಧಿವೇಶನದಲ್ಲಿ ಸರ್ಕಾರವೇ ಉತ್ತರಿಸಿದ...



ರಾಜ್ಯದ ಜನತೆಗೆ ಬಿಜೆಪಿ ಸರ್ಕಾರದ ಶಾಕ್ ಥೆರಪಿ

ಕೇಂದ್ರ ಸರ್ಕಾರ ತನ್ನ ಹಿಂದಿನ ಚಾಳಿಯನ್ನೇ ಮುಂದುವರೆಸಿ ನವ-ಉದಾರವಾದಿ ಆರ್ಥಿಕ ನೀತಿಗಳ ಮೂಲಕ ಜನತೆಯ ಮೇಲೆ ಧಾಳಿಯನ್ನು ನಡೆಸುತ್ತಿರುವಾಗಲೇ ಗಣಿ ಮಾಫಿಯಾ, ರಿಯಲ್ ಎಸ್ಟೇಟ್ ದಂಧೆಕೋರರು ಮತ್ತು ಆರ್ ಎಸ್ ಎಸ್ ನಿಯಂತ್ರಣದಲ್ಲಿರುವ ಬಿಜೆಪಿ ಸಕಾರವೂ ಕೂಡ ಜನತೆಯ ಮೇಲಿನ ಧಾಳಿಯನ್ನು ಇನ್ನಷ್ಟು ತೀವ್ರಗೊಳಿಸಿದೆ. ಕೇಂದ್ರ ಸರ್ಕಾರ ಪೆಟ್ರೋಲ್ ಡೀಸೆಲ್ ಬೆಲೆ ಏರಿಸಿದರೂ ತಾನು ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಬಸ್ಸುಗಳ ದರವನ್ನು ಸದ್ಯಕ್ಕೆ ಹೆಚ್ಚಿಸುವುದಿಲ್ಲವೆಂದು ಹೇಳುತ್ತಲೇ ರಾತ್ರೋರಾತ್ರಿ ಹೆಚ್ಚಿಸಿತು. ವಾಸ್ತವವೆಂದರೆ ಬಿಎಂಟಿಸಿ ಸಂಸ್ಥೆಗೆ ನಷ್ಟವುಂಟು ಮಾಡುತ್ತಿರುವ ವೋಲ್ವೋ ಬಸ್ಸಿನ ದರಗಳನ್ನು ಇಳಿಸಿದೆ. ವೋಲ್ವೋ ಬಸ್ಸೊಂದಕ್ಕೆ ಸುಮಾರು ರೂ. 70 ಲಕ್ಷ ತೆತ್ತು ಅಗಾಧ ಪ್ರಮಾಣದ ಬಸ್ಸು ಛಾರ್ಜು ವಿಧಿಸುವ ಜರೂರತ್ತು ಸರ್ಕಾರಕ್ಕೇನಿತ್ತು ಎಂಬುದು ಇಲ್ಲಿನ ಪ್ರಶ್ನೆ. ಕೆಎಸ್‌ಆರ್‌ಟಿಸಿ ಸಂಸ್ಥೆ ಯಿಂದ ಸಾರಿಗೆ ಸಚಿವರು ಇಂತಿಷ್ಟು ಬಸ್ಸುಗಳನ್ನು ಖರೀದಿಸಿಯೇ ತೀರುವುದಾಗಿ ವೋಲ್ವೋ ಬಸ್ಸು ಕಂಪನಿಯ ಜೊತೆ ಡೀಲ್ ಕುದುರಿಸಿದ್ದಾರೆಂಬ ಮಾತು ಕೇಳಿಬರುತ್ತಿದೆ.

ಇದರ ಹಿಂದೆಯೇ ರಾಜ್ಯದ ಅಧೀನದಲ್ಲಿರುವ ವಿದ್ಯುತ್ ಕಂಪನಿಗಳು (ಬೆಸ್ಕಾಂ, ಹೆಸ್ಕಾಂ, ಮೆಸ್ಕಾಂ, ಚೆಸ್ಕಾಂ) ರಾಜ್ಯದ ಜನತೆಯನ್ನು ವರ್ಷ ಪೂರ್ತಿ ಕತ್ತಲೆಯಲ್ಲಿಟ್ಟು ಇದೀಗ ದಿಢೀರನೆ ವಿದ್ಯುತ್ ಬೆಲೆಯೇರಿಸಿ ರಾಜ್ಯಾದ್ಯಂತ ಷಾಕ್ ತೆರಪಿ ನೀಡಲು ಸಜ್ಜಾಗಿವೆ. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಮುಂದೆ ಅವು ವಿದ್ಯುತ್ ಬೆಲೆಯೇರಿಸಲು ಅಹವಾಲು ಸಲ್ಲಿಸಿದ್ದು ಅದಕ್ಕೆ ಶೀಘ್ರ ಅನುಮೋದನೆ ಸಿಗುವುದು ಕೇವಲ ಔಪಚಾರಿಕವಷ್ಟೆ. ರಾಜ್ಯದಲ್ಲಿ ಉಂಟಾಗಿರುವ ಗಂಭೀರ ವಿದ್ಯುತ್ ಸಮಸ್ಯೆಯನ್ನು ಪರಿಹರಿಸಲು ರಾಜ್ಯ ಸರ್ಕಾರ ಅಗತ್ಯ ಬಂಡವಾಳ ಹೂಡಿ ವಿದ್ಯುತ್ ಸ್ಥಾವರ ಸ್ಥಾಪಿಸುವ ಬದಲು ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಅಂದರೆ ಖಾಸಗಿ ಕಂಪನಿಗಳು ವಿದ್ಯುತ್ ತಯಾರಿಸಿ ಲಾಭಮಾಡಿಕೊಳ್ಳಲು ಅವಕಾಶ ಕಲ್ಪಿಸಿ ತಾನು ಆಪರೇಷನ್ ಕಮಲದಲ್ಲಿ ಬಿಜಿಯಾಯಿತು.

ರೈತರು ಬೆಳೆದ ಬೆಳೆಗಳಿಗೆ ಸೂಕ್ತ ಬೆಂಬಲವೂ ಇಲ್ಲದೆ, ಅತ್ತ ಸರಿಯಾದ ಸಮಯಕ್ಕೆ ಸುಲಭ ದರದಲ್ಲಿ ರಾಸಾಯನಿಕ ಗೊಬ್ಬರಗಳನ್ನೂ ಪೂರೈಸದ ರಾಜ್ಯ ಬಿಜೆಪಿ ಸರ್ಕಾರ ರೈತರ ಬದುಕಿನೊಂದಿಗೆ ಚೆಲ್ಲಾಟ ಆಡುತ್ತಿದೆ. ಬಿಜೆಪಿ ಸರ್ಕಾರದ ಗುರಿ ಮತ್ತು ಶ್ರಮವೆಲ್ಲ ಆಪರೇಷನ್ ಕಮಲದಂಥಹ ಬೆತ್ತಲೆ ಕಾರ್ಯಗಳಿಂದ ಬಿಜೆಪಿಯನ್ನು ಬಲಗೊಳಿಸುವುದಕ್ಕೂ, ಸ್ಥಳೀಯ ಮಂಡಳಿಗಳು ಮತ್ತು ಕೆಎಂಎಫ್ ನಂತಹ ಸಂಸ್ಥೆಗಳನ್ನು ಆರ್‌ಎಸ್‌ಎಸ್, ಗಣಿ ಮಾಫಿಯಾ ಮತ್ತು ರಿಯಲ್ ಎಸ್ಟೇಟ್ ಕುಳಗಳ ಸುಪರ್ದಿಗೆ ಒಪ್ಪಿಸುವುದಕ್ಕೂ ಮಾತ್ರವೇ ವಿನಿಯೋಗವಾಗುತ್ತಿದೆ.

ರೈತರು ಬೆಳೆದ ಆಹಾರ ಧಾನ್ಯಗಳು ಕಾಳಸಂತೆಕೋರರು ಮತ್ತು ಸಟ್ಟಾಕೋರರ ಸಂಗ್ರಹಣಾಗಾರಗಳಲ್ಲಿ ಕೊಳೆಯುತ್ತಿದೆ. ಆದರೆ ಇವುಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಬಿಜೆಪಿ ಸರ್ಕಾರ ಹಿಂಜರಿಯುತ್ತಿದೆ. ನೆಪ ಮಾತ್ರಕ್ಕೆಂಬಂತೆ ಆಹಾರ ಸಚಿವ ಹಾಲಪ್ಪ ಯಾವುದೋ ಒಂದು ಉಗ್ರಾಣದ ಮೇಲೆ ತಾವೇ ಧಾಳಿ ನಡೆಸಿ ರೂ. 70 ಲಕ್ಷ ಮೌಲ್ಯದ ಆಹಾರ ಧಾನ್ಯಗಳನ್ನು ಮುಟ್ಟುಗೋಲು ಹಾಕಿಕೊಂಡು ಪ್ರಚಾರ ಗಿಟ್ಟಿಸಿದ್ದು ಬಿಟ್ಟರೆ, ಸರ್ಕಾರ ಕಾಳಸಂತೆಕೋರರ ವಿರುದ್ಧ ಕ್ರಮ ಕೈಗೊಳ್ಳದೆ ಗಂಭೀರ ಮೌನ ವಹಿಸಿದೆ.

ಕೇಂದ್ರ ಸರ್ಕಾರ ಪೆಟ್ರೋಲ್ ಬೆಲೆ ಏರಿಸಿದರೆ ರಾಜ್ಯ ಸರ್ಕಾರಕ್ಕೆ ಲಾಭ, ಜನತೆಗೆ ನಾಮ!

ಕೇಂದ್ರ ಸರ್ಕಾರ ಪೆಟ್ರೋಲ್ ಡೀಸೆಲ್ ಬೆಲೆ ಏರಿಸಿದರೆ ರಾಜ್ಯ ಸರ್ಕಾರಕ್ಕೆ ಲಾಭ ಹೆಚ್ಚುತ್ತದೆ. ರಾಜ್ಯಕ್ಕೆ ಬರುವ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ರಾಜ್ಯ ಸರ್ಕಾರ ಇನ್ನಿಲ್ಲದಂಥ ತೆರಿಗೆ ವಿಧಿಸುತ್ತದೆ. ಡೀಸೆಲ್ ಮತ್ತು ನಾಪ್ತಾ ಎಂಬ ಉತ್ಪನ್ನಗಳ ಮೇಲೆ ಶೆ. 12.5ರಷ್ಟು ಮಾರಾಟ ತೆರಿಗೆ ವಿಧಿಸಿದರೆ, ಪೆಟ್ರೋಲ್ ಮೇಲೆ ಶೇ. 20ರಷ್ಟು ಮಾರಾಟ ತೆರಿಗೆ ವಿಧಿಸುತ್ತದೆ. ರಾಜ್ಯ ಬಿಜೆಪಿ ಸರ್ಕಾರಕ್ಕೆ ನಿಜಕ್ಕೂ ಜನಪರ ಕಾಳಜಿಯಿದ್ದಲ್ಲಿ ಇನ್ನಿತರ ರಾಜ್ಯಗಳಂತೆ ಈ ತೆರಿಗೆಗಳನ್ನು ಒಂದಷ್ಟು ಕಡಿಮೆ ಮಾಡಿ ರಾಜ್ಯದ ಜನತೆಯ ನೋವಿನ ಸಂಕಟವನ್ನು ಕಡಿಮೆ ಮಾಡಬಹುದಿತ್ತು. ಆದರೆ, ಅದರ ಬದಲು ಬಿಜೆಪಿ ಸರ್ಕಾರ ಮಾಡಿದ್ದೇನೆಂದರೆ ಸರ್ಕಾರಿ ಬಸ್ಸುಗಳ ಬಸ್ ಛಾರ್ಜನ್ನು ಜಾಸ್ತಿ ಮಾಡಿ ಗಾಯದ ಮೇಲೆ ಇನ್ನಷ್ಟು ಬರೆ ಎಳೆಯಿತು.

ಕೇಂದ್ರ ಸರ್ಕಾರದ ಬೆಲೆ ಮಾನಿಟರಿಂಗ್ ಕೇಂದ್ರವು ಅಕ್ಕಿ, ಗೋಧಿ, ಗೋಧಿ ಹಿಟ್ಟು, ತೊಗರಿ ಬೇಳೆ, ಬೇಳೆ, ಸಕ್ಕರೆ, ಆಲೂಗಡ್ಡೆ, ಕಡ್ಲೆಕಾಯಿ ಎಣ್ಣೆ, ಸಾಸಿವೆ ... ವನಸ್ಪತಿ, ಟೀ, ಈರುಳ್ಳಿ ಮತ್ತು ಉಪ್ಪು - ಇವುಗಳ ಬೆಲೆಯನ್ನು ನಿರಂತರವಾಗಿ ಮಾನಿಟರಿಂಗ್ ಮಾಡುತ್ತದೆ. ಅದರಂತೆ ಕಳೆದ ವರ್ಷಕ್ಕೂ ಈ ವರ್ಷಕ್ಕೂ ನಡುವೆ ಏರಿರುವ ಕೆಲವು ಅತ್ಯವಶ್ಯ ಆಹಾರ ವಸ್ತುಗಳ ಬೆಲೆ ಕೋಷ್ಟಕದಲ್ಲಿ ತೋರಿಸಿರುವಂತೆ ಸಿಕ್ಕಾಪಟ್ಟೆ ಏರಿದೆ.

ಶೇಕಡಾವಾರು ಏರಿರುವ ಬೆಲೆ (ಜೂನ್ 6, 2008 ಕ್ಕೂ ಜೂನ್ 6, 2009 ಕ್ಕೂ ನಡುವಿನ ಶೇಕಡಾವಾರು ಬೆಲೆ ವ್ಯತ್ಯಾಸ)

ಆಹಾರ ಧಾನ್ಯಗಳು	ಶೇಕಡಾವಾರು ಬೆಲೆಯೇರಿಕೆ
ಅಕ್ಕಿ	13
ಗೋಧಿ ಹಿಟ್ಟು	7
ಸಕ್ಕರೆ	59
ಬೇಳೆ	59
ಟೀ	25
ಆಲೂಗಡ್ಡೆ	160
ಈರುಳ್ಳಿ	71
ಉಪ್ಪು	23

ಕೃಪೆ : ಬಿಸಿನೆಸ್ ಲೈನ್



ಸಕ್ಕರೆಯು ಈ ವರ್ಷ ಕಡಿಮೆ ಉತ್ಪಾದನೆಯಾಗಿರುವುದರಿಂದ, ಈರುಳ್ಳಿಯನ್ನು ರಫ್ತು ಮಾರುಕಟ್ಟೆಗಾಗಿ ಕಳುಹಿಸುತ್ತಿರುವುದರಿಂದ ಅವುಗಳ ಬೆಲೆ ಏರುತ್ತಿದೆಯೆಂದು ಕಾರಣ ಹೇಳಲಾಗುತ್ತಿದೆ. ಆದರೆ ಇದು ಕೆಲವಮಟ್ಟಿಗೆ ನಿಜವಾದರೂ, ಬೆಲೆಯೇರಿಕೆಗೆ ಹಲವು ಕಾರಣಗಳಿದ್ದು ಅವುಗಳಲ್ಲಿ ಪ್ರಧಾನವಾಗಿ ಫಾರ್ವರ್ಡ್ ಗುತ್ತಿಗೆ ಮಾರುಕಟ್ಟೆಯು ಕಾರಣ ಕರ್ತೃವಾಗಿದೆ.

ಬೆಂಗಳೂರು ನಗರದಲ್ಲಿ ದೊರೆಯುವ ವಸ್ತುಗಳ ಬೆಲೆ ದರಗಳನ್ನೇ ತೆಗೆದುಕೊಳ್ಳೋಣ : ಕೆಜಿ ಕ್ಯಾರಟ್ ರೂ. 40/-, ಬೀನ್ಸ್ - 25/-, ಬಟಾಣಿ-60/-, ಬೆಲ್ಲ-40/-, ಬೇಳೆ-80/-, ಮೈದಾ - 20/- ಅಕ್ಕಿ - 36/-, ತೊಗರಿ ಬೇಳೆ - 100/- ಹೀಗೆ ಸಾಗುತ್ತದೆ ಬೆಲೆಯೇರಿಕೆಯ ಭಯಾನಕ ದರಪಟ್ಟಿ.

ಅಸಂಘಟಿತ ಕಾರ್ಮಿಕರು ಮತ್ತು ಕೂಲಿಕಾರರು ಬೆಲೆಯೇರಿಕೆಗೆ ತತ್ತರ:

ರಾಕೆಟ್ ವೇಗದಲ್ಲಿ ಏರುತ್ತಿರುವ ಅತ್ಯವಶ್ಯ ವಸ್ತುಗಳು, ಮನೆ ಬಾಡಿಗೆ, ವಿದ್ಯುತ್ ಬಿಲ್ಲು, ಬಸ್ ಛಾರ್ಜು, ಇತ್ಯಾದಿಗಳ ಒಂದೆಡೆಯಾಗಿದ್ದು, ಉದ್ಯೋಗ ಲಭ್ಯತೆಯ ಅನಿಶ್ಚಿತತೆ ಮತ್ತೊಂದೆಡೆ ಒತ್ತಡ ಸೃಷ್ಟಿಸಿದ್ದು, ಅಸಂಘಟಿತ ವಲಯ ಕಾರ್ಮಿಕರು ಮತ್ತು ಕೂಲಿಕಾರರು ಅಡ ಕತ್ತರಿಯಲ್ಲಿ ಸಿಕ್ಕಿಬಿದ್ದಿದ್ದಾರೆ. ಸ್ವಾತಂತ್ರ್ಯ ಪಡೆದು ಅರವತ್ತು ವರ್ಷ ಗತಿಸಿದ್ದರೂ ಇವತ್ತಿಗೂ ಕೂಡ ಸರ್ಕಾರವೇ ಅಧಿಕೃತವಾಗಿ ನಿಗಧಿಪಡಿಸಿರುವ ದಿನವೊಂದರ ಕೂಲಿ ನೂರು ರೂಪಾಯಿಯ ಗಡಿ ದಾಟಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಇದರ ಅರ್ಧದಷ್ಟು ಕೂಲಿಯೂ ಸಿಗುವುದಿಲ್ಲ. ಆದರೆ ಇದೇ ಅವಧಿಯಲ್ಲಿ ಅತ್ಯವಶ್ಯ ವಸ್ತುಗಳ ಬೆಲೆ ಮಾತ್ರ ಹಲವು ಪಟ್ಟು ಹೆಚ್ಚಿದೆ. ಉದಾಹರಣೆಗೆ, 1996ರಲ್ಲಿ ಪ್ರತಿ ಲೀಟರಿಗೆ ರೂ. 24.97/- ರಷ್ಟಿದ್ದ ಪೆಟ್ರೋಲ್ ಇವತ್ತು ರೂ. 52/-, ಮತ್ತು ಡೀಸೆಲ್ ರೂ. 9.33/- ಇಂದು ರೂ. 33/- ಆಗಿದೆ.

ಜನತೆಗೆ ಬೆಲೆಯೇರಿಕೆಯ ಬಿಸಿ, ಅಂಬಾನಿಗೆ ಲಾಭದ ಬಳುವಳಿ:

ಕೋಮುವಾದಿ ಶಕ್ತಿಗಳನ್ನು ಮೂಲೆಗುಂಪಾಗಿಸಿ ಒಂದು ಸುಸ್ಥಿರ, ಜಾತ್ಯಾತೀತ ಸರ್ಕಾರಕ್ಕಾಗಿ ಹಾತೊರೆದು ಯುಪಿಎ ಸರ್ಕಾರಕ್ಕೆ ಮತ್ತೊಮ್ಮೆ ಅಧಿಕಾರ ನೀಡಿದ ಜನತೆಗೆ ಈ ಸರ್ಕಾರ ಕೊಟ್ಟ ಮೊಟ್ಟಮೊದಲ ಬಳುವಳಿ ಎಂದರೆ, ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲಗಳ ಬೆಲೆಯನ್ನು ಏರಿಸಿದ್ದು. ಆದರೆ ವಿದ್ಯುತ್ ರಂಗ ಮತ್ತು ರಾಸಾಯನಿಕ ಗೊಬ್ಬರ ಕ್ಷೇತ್ರಗಳು ಹಾಗೂ ಸರ್ಕಾರಗಳಿಗೆ ಭಾರಿ ನಷ್ಟವುಂಟಾಗುತ್ತಿದ್ದರೂ ಮುಖೇಶ್ ಅಂಬಾನಿ ಮಾಲೀಕತ್ವದ ರಿಲಯನ್ಸ್ ಕಂಪನಿಯು ತಾನು ಅನಿಲ ಬಾವಿಗಳಿಂದ ಹೊರತೆಗೆಯುವ ನೈಸರ್ಗಿಕ ಅನಿಲಕ್ಕೆ ಈ ಕಂಪನಿಯು ಅತಿ ಹೆಚ್ಚು ಬೆಲೆ ನಿಗಧಿಪಡಿಸಿಕೊಳ್ಳಲು ಎಲ್ಲ ಮುಂಚಿನ ಒಪ್ಪಂದಗಳನ್ನು ಗಾಳಿಗೆ ತೂರಿ ನಡೆಸುತ್ತಿರುವ ಹೋರಾಟಕ್ಕೆ ಕೇಂದ್ರ ಸರ್ಕಾರ ಅದರಲ್ಲೂ ವಿಶೇಷವಾಗಿ ಪೆಟ್ರೋಲಿಯಂ ಮಂತ್ರಿ ಮುರಳಿ ದೇವ್ರ ಅವರು ಮುಖೇಶ್ ಅಂಬಾನಿಯ ಸೇವಕರಂತೆ ನಿಂತಿರುವುದು ನಾಚಿಕೆಗೇಡಿನ ಸಂಗತಿ. ವಾಸ್ತವವಾಗಿ ಜನರಿಂದ ಅಧಿಕಾರಕ್ಕೆ ಬಂದ ಸರ್ಕಾರ ಹೇಗೆ ಖಾಸಗಿ ಕಂಪನಿಗಳ ಆಸ್ತಿ ಮತ್ತು ಲಾಭ ಹೆಚ್ಚಿಸುವ ಕೆಲಸ ಮಾಡುತ್ತಿದೆ ಎಂದು ಇವೆರಡೂ ಬಂಡವಾಳಶಾಹಿ ಕಂಪನಿಗಳ ಅಣ್ಣ-ತಮ್ಮಂದಿರ ನಡುವಿನ ಒಳಜಗಳದಿಂದ ಈ ವಿಷಯ ಹೊರಬಿದ್ದಿತಷ್ಟೆ. ಅಲ್ಲದೆ ವಿಮಾನ ಇಂಧನವನ್ನು ಹತ್ತಾರು ಬಾರಿ ಇಳಿಸಿ ಖಾಸಗಿ ವಿಮಾನಯಾನ ಕಂಪನಿಗಳಿಗೆ ಲಾಭ ಮಾಡಿಕೊಟ್ಟ ಯುಪಿಎ ಸರ್ಕಾರ, ಬಡ ಜನತೆ ಮತ್ತು ಮಧ್ಯಮ ವರ್ಗ ಬಳಸುವ ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲಗಳ ಬೆಲೆಯನ್ನು ಏರಿಸಿರುವುದು ಅದರ ವರ್ಗ ಗುಣಕ್ಕೆ ಹಿಡಿದ ಕನ್ನಡಿಯಷ್ಟೆ.

ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಕೂಪದಲ್ಲಿ ನರಳುತ್ತಿರುವ ಜೀವಗಳು:

ಪ್ರಸಕ್ತ ಜಾಗತಿಕ ಬಿಕ್ಕಟ್ಟಿನಿಂದ ತೀವ್ರತರದ ಸಂಕಷ್ಟದಲ್ಲಿರುವ ಜನತೆಯನ್ನು ಸಂರಕ್ಷಿಸುವ ನೆಪದಲ್ಲಿ ಯುಪಿಎ ಸರ್ಕಾರ ಕೈಗೊಳ್ಳುತ್ತಿರುವ ಕ್ರಮಗಳು ಜನತೆಯನ್ನು ಮೂರ್ಖರನ್ನಾಗಿಸಲು ಹೆಣಗುತ್ತಿವೆ. ಕಳೆದ ವರ್ಷದ ನವೆಂಬರ್ ನಿಂದ ಆರಂಭವಾದ ಜಾಗತಿಕ ಆರ್ಥಿಕ ಬಿಕ್ಕಟ್ಟಿನಿಂದಾಗಿ ದೇಶಾದ್ಯಂತ ಏನಿಲ್ಲವೆಂದರೂ 50ಲಕ್ಷಕ್ಕೂ ಹೆಚ್ಚು ಜನ ಕೆಲಸ ಕಳೆದುಕೊಂಡಿದ್ದಾರೆ. ಹಲವು ಲಕ್ಷ ಮಂದಿ ಕೊಲ್ಲಿ ರಾಷ್ಟ್ರಗಳಿಂದ ವಾಪಸು ಬಂದಿದ್ದಾರೆ. ಇಂಥಹ ಪರಿಸ್ಥಿತಿಯಲ್ಲಿ ಪರ್ಯಾಯ ಉದ್ಯೋಗ ಸೃಷ್ಟಿಸಲು ಸಾರ್ವಜನಿಕ ರಂಗದಲ್ಲಿ ಹೆಚ್ಚಿನ ಹಣ ತೊಡಗಿಸದೆ ಯುಪಿಎ ಸರ್ಕಾರವು ಬಿಕ್ಕಟ್ಟನ್ನು ಪರಿಹರಿಸಲು ಖಾಸಗಿ ಕಂಪನಿಗಳಿಗೆ ಅತ್ಯಧಿಕ ತೆರಿಗೆ ವಿನಾಯಿತಿಗಳ ಮಹಾಪೂರವನ್ನೇ ಹರಿಸಿ ಲೋಕಸಭಾ ಚುನಾವಣೆಯಲ್ಲಿ ಖಾಸಗಿ ಕಂಪನಿಗಳು ತನಗೆ

ಪುಟ 15 ಕ್ಕೆ

ಮುಂಗಡ ವ್ಯಾಪಾರ ಮಾರುಕಟ್ಟೆಯಲ್ಲಿ ಬಳಸುವ ಪದಗಳು

ಸ್ಪಾಟ್ ಟ್ರೇಡಿಂಗ್ : ಎರಡು ಪಾರ್ಟಿಗಳ ಮಧ್ಯೆ ವ್ಯಾಪಾರ ನಡೆದ ತಕ್ಷಣವೇ ವಸ್ತುವೊಂದನ್ನು ಹಣದೊಂದಿಗೆ ವಿನಿಮಯ ಮಾಡಿಕೊಳ್ಳಲಾಗುತ್ತದೆ.

ಫಾರ್ವರ್ಡ್ ಕಂಟ್ರ್ಯಾಕ್ಟ್ಸ್ (ಮುಂಗಡ ಗುತ್ತಿಗೆ) : ಮುಂಗಡ ಗುತ್ತಿಗೆ ಎಂದರೆ ಈಗ ಒಪ್ಪಂದ ಮಾಡಿಕೊಂಡು ಮುಂದೆ ನಿರ್ದಿಷ್ಟ ಸಮಯದಲ್ಲಿ ಹಣ ಪಾವತಿಸಿ ಸರಕನ್ನು ಪಡೆದುಕೊಳ್ಳುವುದು ಎಂದರ್ಥ. ನಿರ್ದಿಷ್ಟ ಭವಿಷ್ಯತ್ತಿನ ದಿನಾಂಕದಂದು, ನಿರ್ದಿಷ್ಟ ಪ್ರಮಾಣದ ಸರಕನ್ನು ಇವತ್ತು ನಿಗಧಿಪಡಿಸುವ ಬೆಲೆಗೆ ಕೊಂಡು ಕೊಳ್ಳುವುದಕ್ಕೆ ಫಾರ್ವರ್ಡ್ ಗುತ್ತಿಗೆ ಎನ್ನುತ್ತಾರೆ. ಉದಾಹರಣೆಗೆ, ಸದ್ಯಕ್ಕೆ ಕ್ವಿಂಟಾಲ್ ಅಕ್ಕಿಗೆ ರೂ. 3,500/- ಇದೆ ಅಂತಿಟ್ಟುಕೊಳ್ಳಿ. ಮುಂದಿನ 6 ತಿಂಗಳ ನಂತರ 1 ಕ್ವಿಂಟಾಲ್ ಅಕ್ಕಿಯನ್ನು ಬೋರೇಗೌಡ ಫಕೀರಪ್ಪನಿಂದ ರೂ. 4,000/-ಕ್ಕೆ ಕೊಂಡುಕೊಳ್ಳುತ್ತೇನೆಂದು ಇಂದೇ ಬೆಲೆ ನಿಗಧಿ ಮಾಡಿ ಒಪ್ಪಂದ ಮಾಡಿಕೊಳ್ಳುತ್ತಾನೆ. ಮುಂದಿನ 6 ತಿಂಗಳ ನಂತರದಲ್ಲಿ ಅಕ್ಕಿಯ ಬೆಲೆ ಕ್ವಿಂಟಾಲ್‌ಗೆ ರೂ. 4,500/- ಕ್ಕೆ ಏರಿದ್ದರೆ, ಬೋರೇಗೌಡ ಈ ಮುಂಚೆಯೇ ಫಕೀರಪ್ಪನೊಂದಿಗೆ ಮುಂಗಡ ಒಪ್ಪಂದ ಮಾಡಿಕೊಂಡಿರುವುದರಿಂದ ಅವನಿಗೆ ರೂ. 4,000/- ಅಕ್ಕಿ ಸಿಗುತ್ತದೆ, ಹಾಗೆ ರೂ. 500/- ಲಾಭವಾಗುತ್ತದೆ. ಫಕೀರಪ್ಪ ಈಗಾಗಲೇ ಬೋರೇಗೌಡನಿಗೆ ರೂ. 4,000/- ಅಕ್ಕಿ ಮಾರಿಬಿಟ್ಟಿರುವುದರಿಂದ ಫಕೀರಪ್ಪ ರೂ. 500/- ನಷ್ಟ ಅನುಭವಿಸುತ್ತಾನೆ.

ಫ್ಯೂಚರ್ಸ್ ಕಂಟ್ರಾ?ಕ್ಟ್ಸ್ (ಭವಿಷ್ಯತ್ತಿನ ಗುತ್ತಿಗೆ) : ಇದು ಮುಂಗಡ ಗುತ್ತಿಗೆ ಪದ್ಧತಿಯಂತೆಯೇ ಇದ್ದು ಮುಂಗಡ ಗುತ್ತಿಗೆಯನ್ನೇ ಇನ್ನಷ್ಟು ವ್ಯವಸ್ಥಿತವಾಗಿ ವಿನಿಮಯ ಮಾರುಕಟ್ಟೆಗಳ ಮೂಲಕ ನಡೆಸಲಾಗುತ್ತದೆ. ದೇಶದಾದ್ಯಂತ ಫ್ಯೂಚರ್ ಟ್ರೇಡಿಂಗ್ ವಿನಿಮಯ ಕೇಂದ್ರಗಳ ಜಾಲವೇ ಇದ್ದು ಅವು ಕೊಳ್ಳುವವರಿಗೂ ಮಾರಾಟ ಮಾಡುವವರಿಗೂ ನಡುವೆ ಸಂಪರ್ಕ ಕಲ್ಪಿಸುತ್ತದೆ. 6 ತಿಂಗಳ ನಂತರ ಕೊಳ್ಳುವ 1 ಕ್ವಿಂಟಾಲ್ ಅಕ್ಕಿಗೆ ರೂ. 4,000/- ನ್ನು ನಿಗಧಿಪಡಿಸಿದ್ದರೂ, ಇಲ್ಲಿ ಕೊಳ್ಳುವವನು ಒಂದಷ್ಟು ಮಾರ್ಜಿನ್ ಹಣವನ್ನು ಠೇವಣಿಯಾಗಿ ಇಡುತ್ತಾನೆ. ಮಾರುಕಟ್ಟೆಯಲ್ಲಿ ಅಕ್ಕಿ ಬೆಲೆಯಲ್ಲಿ ಆಗುವ ಏರಿಳಿತಕ್ಕೆ ತಕ್ಕಂತೆ ಈ ಠೇವಣಿ ಅಂಶವನ್ನು ಲಿಂಕ್ ಮಾಡಿದ್ದು ಅಕ್ಕಿ ಬೆಲೆಯಲ್ಲಾಗುವ ವ್ಯತ್ಯಾಸಕ್ಕೆ ತಕ್ಕಂತೆ ಅಕ್ಕಿ ಬೆಲೆಯಲ್ಲಿ ಮಾರ್ಪಾಡು ಮಾಡಲಾಗುವುದು. ಆದರೆ ಹೆಚ್ಚಿನ ಏರುಪೇರಾದಲ್ಲಿ ಮಾತ್ರವೇ ಮಾರ್ಪಾಡು ಅನ್ವಯವಾಗುವುದು.

ಅಮೇರಿಕಾದ ಸಂಸತ್ತಿನಲ್ಲಿ ಕೋಲಾಹಲ

ಸರಕುಗಳ ಭವಿಷ್ಯತ್ತಿನ ಗುತ್ತಿಗೆ ವಿನಿಮಯ ಮಾರುಕಟ್ಟೆಗಳು (ಫ್ಯೂಚರ್ಸ್ ಟ್ರೇಡಿಂಗ್) ಗೋಧಿ ಬೆಲೆಯೇರಿಕೆಗೆ ಕಾರಣವಾಗಿದೆಯೆಂದು ಅಮೇರಿಕಾದ ಸಂಸತ್ತಿನಲ್ಲೂ ಗದ್ದಲ ಎದ್ದಿದೆ. ಈಗಾಗಲೇ ತಿಳಿಸಿದಂತೆ ಸ್ವಲ್ಪವೇ ಸ್ವಲ್ಪ ಮೊತ್ತದ ಮಾರ್ಜಿನ್ ಮನಿಯನ್ನು ಪಾವತಿಸಿ ಅಗಾಧ ಪ್ರಮಾಣದ ಅತ್ಯವಶ್ಯ ವಸ್ತುಗಳ ಪೂರೈಕೆಯನ್ನು ಇಂತಹ ಮಾರುಕಟ್ಟೆಗಳಲ್ಲಿ ನಿಯಂತ್ರಿಸುವುದರಿಂದ ಕೃತಕವಾಗಿ ಬೆಲೆಯೇರಿಸಲು ಖಾಸಗಿ ಕಂಪನಿಗಳಿಗೆ ಸಾಧ್ಯವೆಂದು ಹಲವು ಅಮೇರಿಕಾದ ಸೆನೇಟರುಗಳು ಹೇಳಿದ್ದಾರೆ. ಹೀಗಾಗಿ ಹವಾಮಾನ ವೈಪರೀತ್ಯ, ಮಳೆ ಏರುಪೇರು, ಇತ್ಯಾದಿಯಂಥಹ ನೈಸರ್ಗಿಕ ವಿಕೋಪಗಳ ದುಷ್ಪರಿಣಾಮಗಳಂಥ ಕಾರಣಗಳು ಬೆಲೆ ಏರಿಕೆಗೆ ಕಾರಣವಾಗುವುದಕ್ಕಿಂತಲೂ ಹೆಚ್ಚಾಗಿ ಸಟ್ಟಾಕೋರ ಕಂಪನಿಗಳು ಕೃತಕವಾಗಿ ಬೆಲೆ ಏರಿಸುವ ಸಾಮರ್ಥ್ಯ ಹೊಂದಿವೆ. ಯಥೇಚ್ಛವಾಗಿ ವಸ್ತುಗಳನ್ನು ಉತ್ಪಾದಿಸಿದರೂ, ಆಹಾರ ಧಾನ್ಯಗಳನ್ನು ರೈತರು ಬೆಳೆದರೂ, ಹೀಗೆ ಬೆಳೆದ ವಸ್ತುಗಳನ್ನು ಇಂಥಹ ಸಟ್ಟಾ ವ್ಯವಹಾರದಲ್ಲಿ ತೊಡಗಿರುವ ಕಂಪನಿಗಳು ಮುಂಗಡವಾಗಿಯೇ ಕಡಿಮೆ ಬೆಲೆಗೆ ಬೃಹತ್ ಪ್ರಮಾಣದಲ್ಲಿ ಗೋದಿಯನ್ನು ಖರೀದಿಸಿ ಒಳ್ಳೆಯ ಬೆಲೆಗೆ ಮಾರಲು ಕಾಯುತ್ತವೆ, ಹಾಗೆಯೇ ಕೃತಕ ಬೇಡಿಕೆಯನ್ನು ಸೃಷ್ಟಿಸಿ ಲಾಭಗಳಿಸುವಲ್ಲಿ ಯಶಸ್ವಿಯಾಗುತ್ತಿವೆ ಎಂದು ಹೇಳಿದ್ದಾರೆ. ಗೋಧಿಯ ಬೆಲೆಯೇರಿಕೆಯಿಂದ ಸಟ್ಟಾಕೋರರು ಅಗಾಧ ಲಾಭಗಳಿಸುತ್ತಿದ್ದಾರೆ. ಇದರಿಂದ ಗೋಧಿ ಬೆಳೆಗಾರರಿಗಾಗಲಿ, ಅದನ್ನು ಕೊಂಡು ಕೊಳ್ಳುವ ಗ್ರಾಹಕನಿಗಾಗಲಿ ನಷ್ಟವೇ ಹೊರತು ಇನ್ನಾವುದೇ ಪ್ರಯೋಜನವಾಗಿಲ್ಲ. ಅಮೇರಿಕಾದ ಗೋಧಿ ಬೆಲೆಯೇರಿಕೆ ಕುರಿತಂತೆ ಅಲ್ಲಿನ ಸಂಸತ್ತಿನಲ್ಲಿ ನಡೆಯುತ್ತಿರುವ ಗದ್ದಲದಿಂದಲಾದರೂ ಯುಪಿಎ ಸರ್ಕಾರ ಪಾಠ ಕಲಿಯಬೇಕಿದೆ. ನೈಜ ಬೆಳೆಗಾರರು ಮತ್ತು ಗ್ರಾಹಕರ ನಡುವೆ ಮಾರುಕಟ್ಟೆ ಕಲ್ಪಿಸಲು ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ತಕ್ಷಣವೇ ಬಲಪಡಿಸಬೇಕಿದೆ.

ಕರ್ನಾಟಕ ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಈ ವರ್ಷದಲ್ಲಿ ಕಲಿಕೆಯ ಒಂದು ನೂತನವಾದ ಮತ್ತು ಸೃಜನಾತ್ಮಕವಾದ 'ನಲಿ-ಕಲಿ' ಕಲ್ಪನೆಯನ್ನು ಜಾರಿಮಾಡಲಾಗುತ್ತಿದೆ. ಇದರ ಸಾಧಕ ಬಾಧಕಗಳೇನು? ಏನಿದರೊಳಗಿನ ವಿವಾದ? ಇರುವ ಸಮಸ್ಯೆಯೇನು?

ನಲಿ - ಕಲಿ
ಸಾಧಕ - ಬಾಧಕಗಳು

■ ಪ್ರಭು

ಇತ್ತೀಚಿನ ವರ್ಷಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಬದಲಾವಣೆಗಳಾಗುತ್ತಿವೆ. ಭೋಧನೆ- ಕಲಿಕೆಯಲ್ಲಿ ಹೊಸವಿಧಾನಗಳನ್ನು ಜಾರಿಗೆ ತರಲಾಗುತ್ತಿದೆ. ಪ್ರಸ್ತುತ ಕರ್ನಾಟಕದಲ್ಲಿಹೊಸದಾಗಿ ಜಾರಿಗೆ ಬಂದಿರುವ ನಲಿ-ಕಲಿ ವಿಧಾನವು ಚರ್ಚೆಗೆ ಗ್ರಾಸವಾಗಿದೆ. ಹಾಗೆ ನೋಡಿದರೆ ಈ ವಿಧಾನವು ಕರ್ನಾಟಕಕ್ಕೆ ಹೊಸದೇನಲ್ಲ 1992-93 ನೇ ಸಾಲಿನಲ್ಲೇ ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ ತಾಲ್ಲೋಕಿನಲ್ಲಿ ಈ ವಿಧಾನವನ್ನು ಪ್ರಾಯೋಗಿಕವಾಗಿ ಅಳವಡಿಸಿಕೊಳ್ಳಲಾಗಿತ್ತು. 1997-98ನೇ ಶೈಕ್ಷಣಿಕ ವರ್ಷದಲ್ಲಿ ಮೈಸೂರು ನಗರ ತಾಲ್ಲೂಕನ್ನು ಹೊರತುಪಡಿಸಿ ಇಡೀ ಜಿಲ್ಲೆಯಲ್ಲಿ ಈ ವಿಧಾನವನ್ನು ಅನುಷ್ಠಾನ ಗೊಳಿಸಲಾಗಿತ್ತು. ಮೈಸೂರು ಜಿಲ್ಲೆಯ ಫಲಿತಾಂಶವನ್ನು ಆಧಾರಿಸಿ 1999-2000 ದಲ್ಲಿ ಈ ಕಾರ್ಯಕ್ರಮವನ್ನು ಜನಶಾಲಾ ಕಾರ್ಯಕ್ರಮದಡಿಯಲ್ಲಿ ತುಮಕೂರು ಜಿಲ್ಲೆ ಶಿರಾ, ಮಧುಗಿರಿ, ಪಾವಗಡ ಚಿತ್ರದುರ್ಗಜಿಲ್ಲೆಯ ಹಿರಿಯೂರು,ಚಳ್ಳಕೆರೆ ಹಾಸನ ಜಿಲ್ಲೆಯಹೊಳೆನರಸೀಪುರ, ಅರಕಲಗೂಡು ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ದಾವಣಗೆರೆ ಜಿಲ್ಲೆಯಹೊನ್ನಾಳಿ ತಾಲ್ಲೋಕು ಡಿ.ಪಿ.ಇ.ಪಿ. ಜಾರಿಯಲ್ಲಿದ್ದ ಮಂಡ್ಯ ಜಿಲ್ಲೆಯ ಮಳವಳ್ಳಿ , ಕೋಲಾರ ಜಿಲ್ಲೆಯ ದೊಡ್ಡಬಳ್ಳಾಪುರ, ಬೆಳಗಾಂ ಜಿಲ್ಲೆಯ ಸವದತ್ತಿ ಹಾಗು ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕುಗಳಲ್ಲಿ ನಲಿ-ಕಲಿ ವಿಧಾನವನ್ನು ಅನುಷ್ಠಾನಗೊಳಿಸಲಾಗಿತ್ತು. 2004-05ನೇ ಸಾಲಿನಲ್ಲಿ ಎಸ್.ಎಸ್.ಎ ಹಾಗು ಯುನಿಸಿಫ್ ಸಹಭಾಗಿತ್ವದಲ್ಲಿ ಈಶಾನ್ಯವಲಯದ ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಯ ಆಯ್ದ 8 ತಾಲ್ಲೂಕುಗಳಲ್ಲಿಯೂ ಈ ಕಾರ್ಯಕ್ರಮವನ್ನು ಜಾರಿಗೆ ತರಲಾಯಿತು. ಹೀಗೆ ಒಟ್ಟಾರೆ ರಾಜ್ಯದ 40 ಕ್ಕಿಂತ ಹೆಚ್ಚು ತಾಲ್ಲೂಕುಗಳಿಗೆ ಈ ಕಲಿಕಾ ವಿಧಾನದ ಪರಿಚಯ ಮೊದಲೇ ಇತ್ತು.

ಹಿನ್ನೆಲೆ :

ಮೂಲತಃ ಇಂಗ್ಲೆಂಡಿನ ಶಿಕ್ಷಣ ತಜ್ಞರಾದ ಡೇವಿಡ್ ಹಾರ್ಡ್‌ಬರ್ಗ್ ರವರು ನಲಿ-ಕಲಿ ವಿಧಾನವನ್ನು ಆಂಧ್ರದ ಚಿತ್ತೂರು ಜಿಲ್ಲೆಯ ಮದನಪಲ್ಲಿ ತಾಲ್ಲೋಕಿನ ರಿಶಿವ್ಯಾಲಿ ಎಂಬಲ್ಲಿ ಜಿಡ್ಡು ಕೃಷ್ಣಮೂರ್ತಿರವರ ಸಹಕಾರದೊಂದಿಗೆ ಆಶ್ರಿತ ಶಾಲೆಯಲ್ಲಿ ಜಾರಿಗೆ ತಂದರು. ಇಲ್ಲಿಗೆ ಭೇಟಿನೀಡಿದ ಕರ್ನಾಟಕದ ತಂಡ ವಿವಿಧ ಹಂತಗಳಲ್ಲಿ ಕರ್ನಾಟಕದಲ್ಲಿ ಈ ವಿಧಾನವನ್ನು ಜಾರಿಗೆ ತರುವಲ್ಲಿ ಯಶಸ್ವಿಯಗಿದೆ.

ಶಿಕ್ಷಕಿಯಲ್ಲ ಅಕ್ಕ

ರಿಶಿ ವ್ಯಾಲಿಯಲ್ಲಿ ಹುಟ್ಟಿದ ಈ ಪದ್ದತಿ ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಮೂಲಭೂತ ಬದಲಾವಣೆಗಳನ್ನು ಬಯಸುತ್ತದೆ. ಇದುವರೆಗೂ ಶಿಕ್ಷಕ ಕೇಂದ್ರಿತವಾಗಿದ್ದ ಭೋಧನಾ ಪದ್ದತಿಯಿಂದ ಹೊರಬಂದು ಈ ಪದ್ದತಿಯು ಶಿಶು ಕೇಂದ್ರಿತ ಪದ್ದತಿಗೆ ನಾಂದಿ ಹಾಡಿದೆ. ಇಲ್ಲಿ ಶಿಕ್ಷಕ ಮಾರ್ಗದರ್ಶಿಯಷ್ಟೆ. ಶಾಲೆಯಲ್ಲಿ ಮಾರ್ಗದರ್ಶಕರು ಹಾಗು ಮಕ್ಕಳ ನಡುವೆ ಉತ್ತಮ ಭಾಂಧವ್ಯ ಹೊಂದುವ ಉದ್ದೇಶದಿಂದಲೇ ರಿಶಿವ್ಯಾಲಿ ಶಾಲೆಯ ಶಿಕ್ಷಕರಿಗೆ ಮಕ್ಕಳು 'ಟೀಚರ್' ಎನ್ನುವ ಬದಲು 'ಅಕ್ಕ' ಎಂದು ಕರೆಯುವುದು.ಮಕ್ಕಳು ತಮ್ಮಲ್ಲಿ ಹುದುಗಿರುವ ಸಂತಸವನ್ನೇ ಸಾಧನವನ್ನಾಗಿಸಿ ಕೊಂಡು ಜ್ಞಾನಾರ್ಜನೆ ಮಾಡುವುದು. ಅನಂತರವೂ ಮಕ್ಕಳಲ್ಲಿ ಅದೇ ತೆರನಾದ ಸಂತಸ ಪ್ರಕ್ರಿಯೆಯಲ್ಲೇ ಜ್ಞಾನ ನೆಲೆಗೊಳ್ಳುವಂತೆಮಾಡುವುದು. ಇದು ನಲಿ-ಕಲಿ ವಿಧಾನದ ವಿಶೇಷ ಅರ್ಥವಾಗಿದೆ. ಮಕ್ಕಳು ಚಟುವಟಿಕೆಯ ಮೂಲಕ ಸ್ವತಂತ್ರವಾಗಿ ಕಲಿಯುವುದೇ ಇದರ ಮೂಲ ಉದ್ದೇಶ. ಈ ವಿಧಾನದಲ್ಲಿ ಶಿಶುಕೇಂದ್ರಿತ ಶಿಕ್ಷಣಕ್ಕೆ ಒತ್ತು ನೀಡಿದ್ದು ಪಠ್ಯಪುಸ್ತಕದ ಹೊರೆಯನ್ನು ನೀಗಿಸಲಾಗಿದೆ. ಮತ್ತು ಶಿಕ್ಷಕರು ಒಬ್ಬ ಸ್ನೇಹಿತನಂತೆ ಕಲಿಕಾರ್ಥಿಗೆ ಮಾರ್ಗದರ್ಶಕನಾಗಿರುತ್ತಾನೆ. ಆಕರ್ಷಣೀಯ ತರಗತಿ, ಗುಂಪು ಕಲಿಕೆ, ವೈವಿಧ್ಯಮಯ ಕಲಿಕಾ ಸಾಮಗ್ರಿಗಳು, ಆಟದ ಮೂಲಕ ಮೌಲ್ಯಮಾಪನ ಇವುಗಳಿಗೆ ಪ್ರಧಾನವಾಗಿ ಗಮನಹರಿಸಲಾಗಿದೆ. ಪ್ರಮುಖವಾಗಿ ಬಹುವರ್ಗ ಮತ್ತು ಬಹುಹಂತದ ಸಮಸ್ಯೆಯನ್ನು ಈ ವಿಧಾನದಲ್ಲಿ ಸಮರ್ಥವಾಗಿ ನಿಭಾಯಿಸ ಬಹುದಾಗಿದೆ. ಸ್ವಕಲಿಕೆ , ಸ್ವವೇಗದ ಕಲಿಕೆ ಮತ್ತು ಸಂತಸದಾಯಕ ಕಲಿಕೆ ಈ ತತ್ವದ ಆಧಾರದ ಮೇಲೆ ನಲಿ-ಕಲಿ ವಿಧಾನ ರೂಪುಗೊಂಡಿದ್ದು ಕಲಿಸುವ ಮತ್ತು ಕಲಿಯುವ ಪ್ರಕ್ರಿಯಯಲ್ಲಿ ಸಕ್ರಿಯ ಪಾಲ್ಗೋಳ್ಳುವಿಕೆ ಉಂಟಾಗುತ್ತದೆ. ಮಕ್ಕಳಿಗೆ ಇಷ್ಟವಾದ ಹಾಡು, ಕಥೆ, ಸಂಭಾಷಣೆ ಚಟುವಟಿಕೆಗಳು ಕಲಿಕಾರ್ಥಿಗಳಲ್ಲಿ ಕುತೂಹಲವನ್ನುಂಟುಮಾಡಿ ಕಲಿಕೆಯಲ್ಲಿ ಏಕತಾನತೆಯನ್ನು ಹೋಗಲಾಡಿಸಿ ನಿರೀಕ್ಷಿತ ಕಲಿಕೆಯನ್ನು ಉಂಟುಮಾಡುತ್ತದೆ.



ಗುಣಾತ್ಮಕ ಶಿಕ್ಷಣಕ್ಕೆ ಪೂರಕವಾಗುವಂತೆ ಈ ವಿಧಾನವು ತರಗತಿ ಸನ್ನಿವೇಶಕ್ಕೆ ತಕ್ಕ ಹಾಗೆ ತನ್ನದೇ ಆದ ಬದಲಾವಣೆಗಳನ್ನು ಮಾಡಿಕೊಳ್ಳುವ ಅವಕಾಶವನ್ನು ನೀಡುತ್ತದೆ. ಜೊತೆಗೆ ಈ ಕೆಳಕಂಡ ಅಂಶಗಳು ಈ ವಿಧಾನದ ಪ್ರಮುಖ್ಯತೆಯನ್ನು ಹೆಚ್ಚಿಸಿವೆ.

- ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಗುರುತಿಸಿ ಅಭಿವೃದ್ಧಿಪಡಿಸುವುದು.
- ಮಗು ಮತ್ತು ಶಿಕ್ಷಕ ಸ್ವತಂತ್ರವಾಗಿ ಕಲಿಯುವ ಮತ್ತು ಕಲಿಸುವ ಅವಕಾಶ ದೊರಕುತ್ತವೆ.
- ಕ್ರಮಬದ್ದವಾಗಿ ಚಟುವಟಿಕೆಯ ಮೂಲಕ ಕಲಿಕೆ ಸ್ಥಿರಗೊಳ್ಳುತ್ತದೆ.
- ಗೊತ್ತುಪಡಿಸಿದ ಕಲಿಕೆಯ ನಂತರವೇ ಮುಂದಿನ ಕಲಿಕೆಗೆ ದಾರಿ ಸಿಗುತ್ತದೆ.
- ಮಾರ್ಗದರ್ಶನದಿಂದ ಕಲಿಕೆ ಶುರುವಾಗಿ ಮಕ್ಕಳಲ್ಲಿ ಸೃಜನಾತ್ಮಕತೆ ಸೃಷ್ಟಿಯಾಗುತ್ತದೆ.
- ನಿರಂತರ ಮಾರ್ಗದರ್ಶನ ಮತ್ತು ಸಹಭಾಗಿತ್ವದ ಕಲಿಕೆಗೆ ಅವಕಾಶ ದೊರೆಯುತ್ತದೆ.
- ಮಕ್ಕಳಿಗೆ ಪ್ರಿಯವಾದ ಹಾಡು, ಕಥೆಗಳಿಗೆ ಹೆಚ್ಚಿನ ಪ್ರಾಶಸ್ತ್ಯ ದೊರೆಯುತ್ತದೆ.
- ಮಕ್ಕಳು ಸ್ವಯಂ ಪ್ರೇರಿತರಾಗಿ ಕಲಿಕೆಯಲ್ಲಿ ತೊಡಗುತ್ತಾರೆ.
- ಕಲಿಕಾರ್ಥಿಗಳು ಸ್ವತಂತ್ರವಾಗಿ ಸಂವಹನ ನಡೆಸುತ್ತಾರೆ.
- ಕಲಿಕಾರ್ಥಿಗಳು ಯಾವ ಸಾಮರ್ಥ್ಯವನ್ನು ಯಾವ ಹಂತದಲ್ಲಿ ಕಲಿಯುತ್ತಿದೇವೆ ಎಂದು ತಾವೇ ತಿಳಿದುಕೊಳ್ಳುತ್ತಾರೆ.
- ಪ್ರತೀ ವಿಧ್ಯಾರ್ಥಿಯ ಶೈಕ್ಷಣಿಕ ಪ್ರಗತಿಯ ಬಗ್ಗೆ ನಿಖರವಾದ ಮಾಹಿತಿ ಇರುತ್ತದೆ.

ಈ ಎಲ್ಲಾ ಕಾರಣಗಳಿಂದಾಗಿ ನಲಿ-ಕಲಿ ವಿಧಾನವು ಬೇರೆ ವಿಧಾನಗಳಿಗಿಂತ ವಿಶೇಷವಾಗಿದೆ. ನಲಿ-ಕಲಿ ವಿಧಾನಕ್ಕೆ ಹೆಚ್ಚಿನ ಪ್ರಾಶಸ್ತ್ಯವಿರುವುದು ಇದೊಂದು ಪಠ್ಯಪುಸ್ತಕ ರಹಿತವಾದ ಕಲಿಕೆಯೆಂಬ ಕಾರಣಕ್ಕಾಗಿಯೇ. ಒಂದು ತರಗತಿಯಲ್ಲಿ ಕಲಿಯಬೇಕಾದ ಕಲಿಕಾಂಶಗಳನ್ನು ಇಲ್ಲಿ ಹಂತಗಳಾ ವಿಭಾಗಿಸಲಾಗಿದೆ. ಇವೇ ಮೈಲುಗಲ್ಲುಗಳು.ಒಂದ ತರಗತಿಯ ಎಲ್ಲಾ ಮೈಲುಗಲ್ಲುಗಳನ್ನು ಸೇರಿಸಿ ಒಂದ 'ಏಣಿ' ಎಂದು ಕರೆಯಲಾಗಿದೆ. ಪ್ರತಿ ಮಗುವೂ ಮೈಲುಗಲ್ಲುಗಳನ್ನು ಒಂದೊಂದಾಗಿ ಏರಬೇಕು ಉದಾಹರಣೆಗೆ ಮೊದಲನೆಯ ಏಣಿ 1 ಮೈಲಿಗಲ್ಲುಗಳನ್ನು ಹೊಂದಿದೆ. ಪ್ರತೀ ಮೈಲುಗಲ ವಿವಿಧ ಚಟುವಟಿಕೆ ಅಥವ ಕಲಿಕಾ ಕಾರ್ಡ್‌ಗಳನ ಹೊಂದಿದೆ.ಒಂದನೇ ತರಗತಿಯ ಮಗುವು ವರ್ಷದ ಕಾರ್ಡುಗಳನ್ನು ಒಳಗೊಂಡಂತೆ 45 ಚಟುವಟಿಕೆಗಳನ್ನು ಮಾಡಬೇಕಾಗಿರುತ್ತದೆ. ಕಾರ್ಡ್ ಗಳು ಪಠ್ಯಪುಸ್ತಕದ ರೀತಿ ಸಹಾಯ ಮಾಡುತ್ತದೆ ಪಠ್ಯಪುಸ್ತಕವು ಸಾಂಪ್ರದಾಯಿಕವಾದ ತರಗತಿಯನ ಒಂದು ಘಟಕವಾಗಿ ನೋಡುವ ವಿಧಾನಕ ಅಂಟಿಕೊಂಡಿದ್ದರೆ ಈ ಕಾರ್ಡುಗಳು ಪ್ರತಿ ಮಗುವನ ಒಂದು ಘಟಕವಾಗಿ ಪರಿಗಣಿಸಿ ಮಗು ತನ್ನ ವೇಗದಲ್ಲಿ ಕಲಿಯಲು ಪ್ರೇರೇಪಿಸುತ್ತದೆ. ಆದ್ದರಿಂದ ಇಲ್ಲಿ ಭೋಧನೆ ಎಂಬುದೇ ಇರುವುದಿಲ್ಲ ಬ ಕಲಿಯುವಿಕೆ - ಕಲಿಸುವಿಕೆಗೆ ಮಾತ್ರ ಇಲ್ಲಿ ಪ್ರಾಮುಖ್ಯ ಇರುತ್ತದೆ. ತರಗತಿಯಲ್ಲಿ ಸುಲಭವಾಗಿ ಮಕ್ಕಳಿ ಕೈಗೆಟಕುವಂತೆ ಎಲ್ಲ ಕಾರ್ಡುಗಳನ ಇರಿಸಲಾಗಿರುತ್ತದೆ. ಮಗು ತಾನು ಕಲಿಯಬೇಕಾದ ಕಾರ್ಡನ್ನು ತಾನೇ ಆಯ್ದುಕೊಳ್ಳುತ್ತದೆ. ಇದಕ ಸಹಾಯವಾಗುವಂತೆ ಯಾವ ಕಾರ್ಡ್‌ನ ನಂತ ಯಾವುದು ಎಂಬುದನ್ನು ಸೂಚಿಸುವ ಚಾರ್ಟ್‌ನ ತರಗತಿಯಲ್ಲಿ ತೂಗುಹಾಕಲಾಗಿರುತ್ತದೆ. ಏಣ ಚಾರ್ಟ್ ಎಂದು ಕರೆಯಲಾಗುತ್ತದೆ ಈ ಚಾರ್ಟ್‌ನ್ನು ನೋಡಿಕೊಂಡು ಮಗು ತಾನ ಕಲಿಯಬೇಕಾದ ಕಾರ್ಡನ್ನು ಆಯ್ಕೆ ಮಾಡುತ್ತದೆ. ಪ್ರತಿ ಕಾರ್ಡನ್ನು ಗುರುತಿಸುವುದಕ್ಕೆ ಹಾಗು ಆಯ್ಕೆಮಾಡಲ ಸುಲಭವಾಗುವಂತೆ ಕಾರ್ಡಿನ ಒಂದು ಮೂಲೆಯ ಅನೇಕ ಚಿತ್ರಗಳನ್ನು ನೀಡಲಾಗಿರುತ್ತದೆ. ಮಗು ಒಂದ ಕಾರ್ಡನ್ನು ಕಲಿತ ಬಳಿಕವೇ ಮತ್ತೊಂದನ ಎತ್ತಿಕೊಳ್ಳುವುದರಿಂದ ಇಲ್ಲಿ ಯಾವುದೇ ಹಂತ ಬಿಟ್ಟುಹೋಗುವ ಪ್ರಮೆಯವೇ ಇರುವುದಿಲ್ಲ. ಕೆ ಕಡೆ ಕಾರ್ಡ್ ಬಳಕೆ ಇರುವುದಿಲ್ಲ. ಇಲ್ಲಿ ಮಗ ಕಾರ್ಡುನೋಡಿ ಕಲಿಯುವ ವಿಷಯವಿರುವುದಿ ಬದಲಿಗೆ ಚಟುವಟಿಕೆಯೊಂದನ್ನು ಮಾಡಬೇಕಾ ರುತ್ತದೆ. ಉದಾಹರಣೆಗೆ ರಬ್ಬರ್ ಅಕ್ಷರ ಬಳಸುವ ಚಟುವಟಿಕೆಗೆ ಕಾರ್ಡು ಇರುವುದಿಲ್ಲ ಇಲ್ಲಿ ಮಗ ರಬ್ಬರ್ ಅಕ್ಷರದ ಮೇಲೆ ಬೆರಳಾಡಿಸುವ ಚಟುವಟಿಕೆಯನ್ನು ಮಾಡಬೇಕಾಗಿರುತ್ತದೆ.

ಕಾರ್ಡ್‌ಗಳನ್ನು ಆಯ್ಕೆ ಮಾಡಿಕೊಂಡ ಕಲಿಯುವಾಗ ಮಗು ಕೆಲವು ಸಲ ಪೂರ್ಣ ಶಿಕ್ಷಕರ ಸಹಾಯ ಪಡೆದರೆ ಕೆಲವುಸಲ ಗೆಳೆಯರ ಸಹಾಯ ಇನ್ನೂ ಕೆಲವು ಸಲ ಭಾಗಶಃ ಶಿಕ್ಷಕರ ಅಥವ ಗೆಳೆಯರ ಸಹಾಯ ಪಡೆಯುತ್ತದೆ. ಕೆಲವು ಕಾರ್ಡುಗಳನ್ನು ತಾನೆ ಯಾರ ಸಹಾಯವೂ ಇಲ್ಲದೇ ಕಲಿಯುತ್ತದೆ. ಈ ರೀತಿಯ ಐದು ಗುಂಪುಗಳಲ್ಲಿ ಕುಳಿತು ಮಗು ಅಭ್ಯಾಸಮಾಡುತ್ತದೆ. ಇದನ್ನೇ ಈ ವಿಧಾನದಲ್ಲಿ 'ತಟ್ಟೆಗಳು' ಎಂದು ಕರೆಯಲಾಗಿದೆ.

ಇಲ್ಲಿ 'ಕಲಿಕೆ' ಕಾರ್ಡು ಹಾಗು ಸೂಚಿತ ಚಟುವಟಿಕೆಗಳ ಮೂಲಕವೇ ಕಲಿಕೆ ನಡೆದರೂ ಈ ಹಿಂದೆ ಅನುಸರಿಸುತ್ತಿದ್ದ ಹರ್ಬಾರ್ಟ್


ಮಾಂಟಿಸೋರಿಯಾನ ಪದ್ದತಿ ಅಥವ ಇತ್ತೀಚಿಗೆ ಬಳಕೆಗೆ ತರಲಾಗಿರುವ ಚೈತನ್ಯ ಪದ್ಧತಿಯ 6 ಹಂತದ ಚಟುವಟಿಕೆಯ ಮೂಲಕವೇ ಕಲಿಕೆ ಸಾಗುತ್ತದೆ. ಮೊದಲಿಗೆ ಪೂರ್ವಸಿದ್ದತಾ ಚಟುವಟಿಕೆಯನ್ನು ತರಗತಿಯಲ್ಲಿ ಕಲಿಕಾವಾತಾವರನವನ್ನು ನಿರ್ಮಿಸಲು ಬಳಸಲಾಗುತ್ತದೆ.ಎರಡನೆಯದಾಗಿ ಕಲಿಕಾಪೂರಕ ಚಟುವಟಿಕೆಯನ್ನು ಮಕ್ಕಳ ಮನಸ್ಸನ್ನು ಕಲಿಕಾ ವಿಷಯದ ಕಡೆಗೆ ಸೆಳೆಯಲು ಬಳಸಲಾಗುತ್ತದೆ. ನಂತರ ಕಲಿಕಾಂಶ ಚಟುವಟಿಕೆಯಲ್ಲಿ ಕಲಿಸಬೇಕಾಗಿರುವ ಅಂಶಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತದೆ. ಅಭ್ಯಾಸ ಚಟುವಟಿಕೆಯ ಹಂತದಲ್ಲಿ ಕಲಿತ ವಿಷಯವನ್ನು ಮನನಮಾಡಿಕೊಳ್ಳುವುದಕ್ಕಾಗಿ ಚಟುವಟಿಕೆಗಳಿರುತ್ತವೆ. ನಂತರದ ಹಂತವೇ ಬಳಕೆ ಚಟುವಟಿಕೆಯ ಹಂತ ಈ ಹಂತದಲ್ಲಿ ಮಗು ಕಲಿತದ್ದನ್ನು ಬಳಸಿಕೊಳ್ಳುವುದಕ್ಕಾಗಿ ಚಟುವಟಿಕೆಗಳಿರುತ್ತವೆ. ಕೊನೆಯ ಹಂತವೇ ಮೌಲ್ಯಮಾಪನ ಹಂತ ಈ ಹಂತದಲ್ಲಿ ಮಗು ತಾನು ಕಲಿತದ್ದನ್ನು ತಾನೇ ಮೌಲ್ಯಮಾಪನ ಮಾಡಿಕೊಳ್ಳುತ್ತದೆ. ಅಥವ ಶಿಕ್ಷಕರಿಂದ ಈ ಕಾರ್ಯವು ನಡೆಯುತ್ತದೆ. ಪ್ರತಿ ಹಂತದಲ್ಲೂ ಅದಕ್ಕೆ ಬಂಧಿಸಿದ ಕಾರ್ಡುಗಳು ಅಥವ ಚಟುವಟಿಕೆ ಗಳನ್ನು ಬಳಸಿಕೊಳ್ಳಲಾಗುತ್ತದೆ.

ಪ್ರಸ್ತುತ ಈ ವಿಧಾನವನ್ನು ಒಂದು ಮತ್ತು ಎರಡನೇ ತರಗತಿಗೆ ಮಾತ್ರ ಅನ್ವಯಿಸ ಲಾಗುತ್ತಿದೆ. ಇದನ್ನು ಎರಡು ಏಣಿಗಳೆಂದು ಪರಿಗಣಿಸಿದರೆ, ಭಾಷೆಯ ವಿಷಯದಲ್ಲಿ ಮಗು ಈ ಏಣಿಗಳನ್ನು ಮುಗಿಸುವಷ್ಟರಲ್ಲಿ ಸರಳವಾಗಿ ಓದುವ, ಬರೆಯುವ ಸಾಮರ್ಥ್ಯವನ್ನು ಕಲಿಯಬೇಕಾಗಿರುತ್ತದೆ. ಮೊದಲನೇಯ ಏಣಿಯಲ್ಲಿ ಮಗು 17 ಮೈಲಿಗಲ್ಲುಗಳನ್ನು ದಾಟುವಷ್ಟರಲ್ಲಿ ವರ್ಣಮಾಲೆಯ ಎಲ್ಲ ಅಕ್ಷರಗಳು, ತಲೆಕಟ್ಟು ಇಂದ ಐತ್ವದ ವರೆಗಿನ ಗುಣಿತಾಕ್ಷರಗಳನ್ನು ರಚಿಸುವುದನ್ನು ಕಲಿಯುತ್ತದೆ. ಎರಡನೇ ಏಣಿಯಲ್ಲಿ ಉಳಿದ ಎಲ್ಲ ಗುಣಿತಾಕ್ಷರಗಳನ್ನು ಹಾಗು ಒತ್ತಕ್ಷರಗಳನ್ನು ಕಲಿಯುತ್ತದೆ.ಹೀಗೆಯೇ ಗಣಿತ ಮತ್ತು ಪರಿಸರ ಅಧ್ಯಯನದಲ್ಲೂ ಕಲಿಕಾಂಶಗಳನ್ನು ಮೈಲಿಗಲ್ಲುಗಳಲ್ಲಿ ವಿಭಾಗಿಸಲಾಗಿದೆ ಹಾಗು ಪ್ರತೀ ಮೈಲಿಗಲ್ಲು ಹಲವು ಚಟುವಟಿಕೆ ಹಾಗು ಕಾರ್ಡುಗಳನ್ನು ಒಳಗೊಂಡಿರುತ್ತದೆ.

ಭಾಷೆಗೆ ಸಂಬಂಧಿಸಿದಂತೆ ಕಾರ್ಡುಗಳಲ್ಲದೇ ವಾಚಕಗಳೆಂಬ ಸಣ್ಣ ಸಣ್ಣ ಪುಸ್ತಕಗಳನ್ನು ನೀಡಲಾಗಿದೆ. ಈ ಪುಸ್ತಕಗಳಲ್ಲಿ ಸರಳ ಪದಗಳು, ವಾಕ್ಯಗಳು ಇದ್ದು ಆಕರ್ಷಕವಾಗಿವೆ. ಇದಲ್ಲದೇ ಅಭ್ಯಾಸ ಪುಸ್ತಕ ಗಳನ್ನು ನೀಡುವ ಯೋಜನೇಇದ್ದು ಇದು ಮಕ್ಕಳು ಅಭ್ಯಾಸ ಚಟುವಟಿಕೆಗಳನ್ನು ಮಾಡಲು ಕೆಲವು ಸಲ ಮನೆಗೆಲಸವನ್ನು ಮಾಡಲು ಅನುಕೂಲವಾಗುವಂತೆ ರಚಿಸಲಾಗಿದೆ.

ನಲಿ-ಕಲಿ ವಿಧಾನದ ಮತ್ತೊಂದು ಮುಖ್ಯಾಂಶವೆಂದರೆ 'ಕಲಿಕಾ ಚಪ್ಪರ' ಇದು ದಾರ ಅಥವ ತಂತಿಯಿಂದ ತರಗತಿಯ ಒಳಗೆ ರಚಿಸಲಾದ ಚಪ್ಪರವಾಗಿದ್ದು ಇಲ್ಲಿ ಮಕ್ಕಳು ಕಲಿಕೆಯ ಅವಧಿಯಲ್ಲಿ ರಚಿಸಲಾದ ಮುಖ್ಯ ರಚನೆಗಳನ್ನು ತೂಗುಹಾಕಲಾಗುತ್ತದೆ. ಒಟ್ಟಾರೆ ಇದೊಂದು ಮಕ್ಕಳ ಶೋಕೇಸ್ ಆಗಿದ್ದು ಮಕ್ಕಳು ತಮ್ಮ ರಚನೆಗಳನ್ನು ಇಲ್ಲಿ ತೂಗು ಹಾಕುತ್ತಾರೆ ಮತ್ತು ಹಳೆಯದನ್ನು ತೆಗೆದು ಹಾಕಿ ಹೊಸದಾದುದನ್ನು ಸೇರಿಸುತ್ತಾ ಹೋಗುತ್ತಾರೆ.

ಇವಿಷ್ಟು ನಲಿ-ಕಲಿ ವಿಧಾನದ ಮೇಲ್ಪದರದ ರೂಪುರೇಷೆಗಳು.. ಪ್ರಸ್ತುತ ರಾಜ್ಯದಾದ್ಯಂತ ಈ ವಿಧಾನವನ್ನು ಜಾರಿಗೊಳಿಸುತ್ತಿರುವ ಹಿನ್ನೆಲೆಯಲ್ಲಿ ಅನೇಕರಿಂದ ಈ ಪದ್ದತಿಯ ಬಗ್ಗೆ ವಿರೋಧಗಳು




ಕಂಡುಬರುತ್ತಿವೆ. ಆದಕ್ಕೆ ವಿವಿಧ ಕಾರಣಗಳೂ ಇವೆ.

ಶಿಶು ಕೇಂದ್ರೀತ

ಮೊದಲನೆಯದಾಗಿ ಈ ವಿಧಾನವು ಶಿಶು ಕೇಂದ್ರಿತವಾಗಿದ್ದು ಶಿಕ್ಷಕರು ಈ ವಿಧಾನವನ್ನು ಹೇಗೆ ಅರಗಿಸಿಕೊಳ್ಳಬಲ್ಲರು ಎಂಬುದರ ಮೇಲೆಯೇ ಇದರ ಯಶಸ್ಸು ನಿಂತಿದೆ. ಇಷ್ಟು ದಿನ ತರಗತಿಯನ್ನೇ ಒಂದು ಘಟಕವೆಂದು ಪರಿಗಣಿಸಿ ಪಾಠಮಾಡಿಮುಗಿಸುತ್ತಿದ್ದ ಶಿಕ್ಷಕರು ಇಲ್ಲಿ ಪ್ರತಿ ಮಗುವಿಗೆ ವೈಯಕ್ತಿಕ ಗಮನಹರಿಸಿ ಕಲಿಸಬೇಕಿದೆ. ಇದಕ್ಕೆ ಶಿಕ್ಷಕರು ಈ ವಿಧಾನದ ಮೂಲ ಆಶಯವನ್ನು ಚೆನ್ನಾಗಿ ಅರಗಿಸಿಕೊಂಡಿದ್ದರೆ ಮಾತ್ರ ಸಾಧ್ಯವಾಗುವುದು. ಹೀಗೆ ಅರಗಿಸಿಕೊಳ್ಳುವುದಕ್ಕೆ ಸಾಕಷ್ಟು ಸಮಯ ಹಾಗು ಹಲವು ಹಂತಗಳ ನಿರಂತರ ತರಬೇತಿ ಅಗತ್ಯ ಏಕಾಏಕಿ ಒಂದು ತರಬೇತಿಯ ಮೂಲಕ ಇಂಥಹಾ ಬದಲಾವಣೆ ತರುವುದು ಸಾಧವಿಲ್ಲ . ಈ ವಿಧಾನದಲ್ಲಿ ಶಿಕ್ಷಕರ ಶ್ರಮ ಹಾಗು ಜವಾಬ್ದಾರಿ ಹೆಚ್ಚಿರುವ ದರಿಂದಲೂ ಈ ಹೆಚ್ಚುವರಿ ಜವಾಬ್ದಾರಿಯನ್ನು ಹೊತ್ತುಕೊಳ್ಳುವಂತೆ ಶಿಕ್ಷಕರಿಗೆ ಪ್ರೇರಣೆ ದೊರೆಯದಿರುವುದರಿಂದಲೂ ಶಿಕ್ಷಕ ಸಮುದಾಯ ಈ ಪದ್ದತಿಯನ್ನು ವಿರೋಧಿಸುತ್ತಿದೆ. ಸರ್ಕಾರವು ಇದಗ ಜಾರಿಗೆ ಮುನ್ನ ಇಂಥಹಾ ಪದ್ದತಿಯ ಬಗೆಗೆ ಶಿಕ್ಷಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಅಗತ್ಯವಿತ್ತು.ಈ ಹಿಂದೆಯೂ ಹಲವಾರು ತಾಲ್ಲೋಕುಗಳಲ್ಲಿ ಈ ಪದ್ದತಿಯನ್ನು ಜಾರಿ ಮಾಡಲಾಗಿತ್ತು ಹಾಗು ಹೀಗೆ ಜಾರಿಯಲ್ಲಿದ್ದ ತಾಲ್ಲೂಕುಗಳಲ್ಲಿ ವಿನಾಕಾರಣ ಯಾರಿಗೂ ಯಾವ ಮಾಹಿತಿಯೂ ಇಲ್ಲದೆ ಈ ಪದ್ದತಿಯನ್ನು ಹಿಂಪಡೆದು ಪಠ್ಯಪುಸ್ತಕಗಳನ್ನು ನೀಡಲಾಗಿತ್ತು. ಹೀಗೆ ಏಕಾಏಕಿ ಜಾರಿಮಾಡುವುದು ಹಾಗು ತೆಗೆದುಹಾಕುವ ನಿರ್ಧಾರಗಳಿಂದಾಗಿ ಶಿಕ್ಷಕರು ವಿಶ್ವಾಸವನ್ನೇ ಕಳೆದುಕೊಂಡಿದ್ದಾರೆ. ಎಲ್ಲವೂ ಬರುತ್ತವೆ ಎರಡು ದಿನ ಇದ್ದು ಹೋಗುತ್ತವೆ ನಮಗೇನು ವ್ಯತ್ಯಾಸವಿಲ್ಲ ಎಂಬ ಭಾವನೆ ಶಿಕ್ಷಕರಲ್ಲಿ ಈಗಾಗಲೇ ಮೂಡಲು ಇದು ಕಾರಣವಾಗಿದೆ, ಈಗ ನೀಡಲಾದ ಅಲ್ಪಾವಧಿ ತರಬೇತಿಯಿಂದ ಶಿಕ್ಷಕರು ಈ ಪದ್ದತಿಯ ಮೂಲ ಆಶಯಗಳನ್ನು ತಿಳಿಯಲು ಸಾಧ್ಯವಾಗದೇ ಕೇವಲ ಈ ಪದ್ದತಿಯ ಚಟುವಟಿಕೆಗಳನ್ನಷ್ಟೇ ಅನುಕರಿಸಲು ಪ್ರಯತ್ನಿಸುತ್ತಿದ್ದಾರೆ.ಇದೂ ಕೂಡ ಈ ಪದ್ದತಿ ರಾಜ್ಯದಲ್ಲಿ ಸೋಲಲು ಕಾರಣವಾಗಬಹುದಾಗಿದೆ. ಬರೀ ತರಬೇತಿಯಷ್ಟೇ ಅಲ್ಲ ಕಾರ್ಡುಗಳ ವಿತರಣೆಯಲ್ಲೂ ಬಹಳವಿಳಂಬ ನೀತಿಯನ್ನು ಅನುಸರಿಸಲಾಗುತ್ತಿದ್ದು ಯೋಜನೆಯ ಯಶಸ್ಸಿಗೆ ಪ್ರಶ್ನೆ ಚಿಹ್ನೆಯನ್ನು ಇರಿಸಿದೆ.

ವಾದಗಳು

ಎರಡನೆಯದಾಗಿ ಹೊಸ ವಿಧಾನ ಒಂದನ್ನು ಅನುಷ್ಠಾನ ಗೊಳಿಸುವಾಗ ಪೋಷಕರಿಗೆ, ಜನಸಮುದಾಯಕ್ಕೆ ಆ ಬಗ್ಗೆ ತಿಳುವಳಿಕೆ ಮೂಡಿಸುವುದು ಅತ್ಯಗತ್ಯ. ಸಾಂಪ್ರದಾಯಿಕ, ಪಠ್ಯಪುಸ್ತಕಗಳನ್ನೇ ಸರ್ವಸ್ವವೆಂದು ಭಾವಿಸಿರುವ ಶಾಲೆಗಳನ್ನಷ್ಟೇ ನೋಡಿರುವ ಸಮುದಾಯ ಇಂತಹ ಹೊಸ ಪದ್ದತಿಗಳನ್ನು ಹೊಸದರಲ್ಲಿ ವಿರೋಧಿಸುವುದು ಸಹಜ. ಈ ಪದ್ದತಿಯಲ್ಲಿ ಪಠ್ಯಪುಸ್ತಕವಿಲ್ಲದ ಕಾರಣ ಪೋಷಕರು ಏನನ್ನೂ ಕಲಿಸಲು ಆಗುವುದಿಲ್ಲ ಅಥವ ಮಕ್ಕಳು ಓದುವುದಿಲ್ಲ ಎಂಬ ವಾದಗಳು ತೀರಾ ಬಾಲಿಶ ವಾಗಿ ಕಾಣುತ್ತವೆ. ಇಂತಹ ವಾದಗಳನ್ನು ಮಾಡುತ್ತಿರುವವರಿಗೆ ನಮ್ಮ ಸರ್ಕಾರಿ ಶಾಲೆಗಳ ಪೋಷಕರಲ್ಲಿ ಎಷ್ಟು ಜನ ಓದಿದವರಿದ್ದಾರೆ? ಎಷ್ಟು ಜನರಿಗೆ ತಮ್ಮ ಮಕ್ಕಳಿಗೆ ಮನೆಯಲ್ಲಿ ಓದಿಸಲು ಸಮಯಸಿಗುತ್ತದೆ? ಎಷ್ಟು ಮಕ್ಕಳು ವರ್ಷಪೂರ್ತಿ ಪಠ್ಯಪುಸ್ತಕವನ್ನು



ಜೋಪಾನವಾಗಿಟ್ಟು ಕೊಂಡು ಓದುತ್ತಾರೆ? ಎಂಬ ವಿಷಯಗಳ ಬಗ್ಗೆ ಕನಿಷ್ಟ ಮಾಹಿತಿಯೂ ಇಲ್ಲವೆಂದು ತೋರುತ್ತದೆ. ಏನೇ ಆಗಲಿ ಸರ್ಕಾರ ಇಂಥಹಾ ಕಾರ್ಯಕ್ರಮಗಳನ್ನು ಜಾರಿಗೆ ತರುವ ಮೊದಲು ಈ ಬಗ್ಗೆ ಜನರ ತಿಳುವಳಿಕೆ ಹೆಚ್ಚಿಸುವ ಯಾವ ಕಾರ್ಯಕ್ರಮಗಳೂ ರೂಪಿಸದಿರುವುದು ಜನರಲ್ಲಿ ತಪ್ಪು ತಿಳುವಳಿಕೆ ಮೂಡುವುದಕ್ಕೆ ಸಾಧ್ಯತೆಯನ್ನು ಕೊಟ್ಟಿದ್ದು ಮತ್ತೊಂದು ಜನವರ್ಗದಿಂದ ಬೆಂಬಲ ಸಿಗದಿರುವುದಕ್ಕೆ ಪ್ರಮುಖ ಕಾರಣವಾಗಿದೆ.

ವಿರೋಧ

ಮೂರನೇಯದಾಗಿ ಶಿಕ್ಷಣ ಇಲಾಖೆಯ ಒಳಗೇ ಎರಡು ಗುಂಪುಗಳು ಹುಟ್ಟಿಕೊಂಡಿದ್ದು ಒಂದು ಗುಂಪು ಈ ಪದ್ದತಿಯನ್ನು ವಿರೋಧಿಸುತ್ತಿದೆ. ಈ ಹಿಂದೆ ಇದೇ ಪದ್ದತಿಯನ್ನು ಕೊಂಡಾಡುತ್ತಿದ್ದ ಕೆಲವರು ಈಗ ಇದರಲ್ಲಿ ಮೊಸರಲ್ಲಿ ಕಲ್ಲು ಹುಡುಕಿದಂತೆ ಇಲ್ಲದ ತಪ್ಪುಗಳನ್ನು ಹುಡುಕುತ್ತಿರುವುದು ಹಾಗು ಈ ಪದ್ದತಿಯನ್ನು ವಿರೋದಿಸುವುದಕ್ಕೆ ಸರಿಯಾದ ಕಾರಣ ನೀಡದಿರುವುದು ಹಲವಾರು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಇಲ್ಲಿ ಬಹುಶಃ ಇಲಾಖಾ ಅಧಿಕಾರಿಗಳ ನಡುವಿನ ಒಣ ಪ್ರತಿಷ್ಠೆಯೂ ಕೆಲಸ ಮಾಡುತ್ತಿರಬಹುದು. ಇನ್ನೊಂದು ಅನುಮಾನದ ಪ್ರಕಾರ ಪರ-ವಿರೋದದ ಅಲೆಯಲ್ಲಿ ಪಠ್ಯಪುಸ್ತಕ ಮುದ್ರಣ ಅಥವ ಕಾರ್ಡುಗಳ ಮುದ್ರಣದ ಲಾಭಿಯೂ ಕೆಲಸಮಾಡುತ್ತಿರಬಹುದು.

ಒಟ್ಟಾರೆ ನಲಿ-ಕಲಿಯನ್ನು ಒಂದು ಶಿಕ್ಷಣ ಪದ್ದತಿಯನ್ನಾಗಿ ನೋಡುವುದಾದರೆ ಪ್ರಸ್ತುತ ಜಾರಿಯಲ್ಲಿರುವ ಪದ್ದತಿಗಳಲ್ಲೇ ಶ್ರೇಷ್ಟವಾದ ಪದ್ದತಿಯಾಗಿದೆ. ಪ್ರತೀ ಮಗುವಿನ ಕಡೆಗೆ ವ್ಯಯಕ್ತಿಕ ಗಮನ, ಮಗುವಿನ ಸ್ವಾತಂತ್ರ್ಯಕ್ಕೆ ಹೆಚ್ಚಿನ ಒತ್ತು, ಚಟುವಟಿಕೆ ಆಧಾರಿತ ಕಲಿಕೆ, ಹಂತ ಹಂತವಾದ ಕಲಿಕೆ, ಕಲಿಯುವಿಕೆ-ಕಲಿಸುವಿಕೆಗೆ ಪ್ರಾಮುಖ್ಯತೆ, ಮಗುವಿನ ಸ್ವ ಮೌಲ್ಯಮಾಪನ, ಸ್ವಕಲಿಕೆಗೆ ಹೆಚ್ಚಿನ ಒತ್ತು ಇನ್ನೂ ಮೊದಲಾದ ಒಳ್ಳೆಯ ಅಂಶಗಳಿಂದಾಗಿ ಇದು ಅತ್ಯುತ್ತಮ ವಿಧಾನವಾಗಿದೆ. ಹಾಗೆಂದು ಈ ವಿಧಾನದಲ್ಲಿ ದೋಷಗಳೇನು ಇಲ್ಲವೆಂದಿಲ್ಲ. 20 ಕ್ಕಿಂತ ಹೆಚ್ಚು ವಿಧ್ಯಾರ್ಥಿಗಳಿರುವ ತರಗತಿಯಲ್ಲಿ ಈ ವಿಧಾನದ ಬಳಕೆ ತೀರಾಕಷ್ಟಕರ ವಾಗಿರುತ್ತದೆ.ಈ ವಿಧಾನದ ಬಗ್ಗೆ ಸರಿಯಾದ ತಿಳುವಳಿಕೆ ಇರದ ಶಿಕ್ಷಕರು ಈ ವಿಧಾನವನ್ನು ತಪ್ಪಾಗಿ ಅರ್ಥಮಾಡಿಕೊಂಡ ಶಿಕ್ಷಕರು ಮಕ್ಕಳನ್ನು ದಾರಿತಪ್ಪಿಸುವುದಕ್ಕೆ ಇಲ್ಲಿ ಹೆಚ್ಚಿನ ಅವಕಾಶವಿರುತ್ತದೆ. ಈ ಪದ್ದತಿಯು ಶಿಕ್ಷಕರಿಂದ ಹೆಚ್ಚಿನ ಸೇವೆಯನ್ನು ಬಯಸುತ್ತದೆ. ಈ ಸೇವೆ ನೀಡಲು ಶಿಕ್ಷಕರು ಸಿದ್ದರಾಗದ್ದಿದ್ದಲ್ಲಿ ಇದಕ್ಕಿಂತ ಕೆಟ್ಟ ಪದ್ದತಿ ಬೇರೆ ಇಲ್ಲವಾಗುತ್ತದೆ.

ಶಿಕ್ಷಕರನ್ನು ಈ ನಿಟ್ಟಿನಲ್ಲಿ ಅಣಿಗೊಳಿಸ ಬೇಕಾಗಿದೆ ಕೇವಲ ನಾಲ್ಕೈದು ದಿನಗಳ ತರಬೇತಿಯಿಂದ ಇದು ಸಾಧ್ಯವಿಲ್ಲ.ಇದಕ್ಕೆ ಹಲವು ಹಂತಗಳ ನಿರಂತರ ತರಬೇತಿ ಬೇಕು ಹಾಗು ಅವರ ಮನ ಪರಿವರ್ತನೆ ಮಾಡುವ ಹಲವು ಕಾರ್ಯಕ್ರಮಗಳು ಜಾರಿಯಾಗ ಬೇಕು.ಇಂತಹ ಪದ್ದತಿಗಳನ್ನು ಪೂರ್ಣವಾಗಿ ಶಿಕ್ಷಕರಿಗೆ ಅರ್ಥಮಾಡಿಸದೇ ಹೋದರೆ ಮುಂದೊಂದುದಿನ ಈ ಪದ್ದತಿಯ ಕಾರ್ಡುಗಳನ್ನೇ ಪಠ್ಯಪುಸ್ತಕದಂತೆ ಬಳಸುವ ಹಾಗು ಅವುಗಳಲ್ಲಿರುವ ವಿಷಯಗಳನ್ನೇ ಪಾಠ ಮಾಡುವ ಶಿಕ್ಷಕರು ಹುಟ್ಟಿಕೊಂಡರೂ ಆಶ್ಚರ್ಯವಿಲ್ಲ.ನಮ್ಮ ಶಿಕ್ಷಕರು ರಿಶಿವ್ಯಾಲಿಯ 'ಅಕ್ಕ' ಆಗಬಲ್ಲರೇ ? ಚಟುವಟಿಕೆಗಳ ನಿರ್ವಹಣೆಯಲ್ಲಿ ಅಲ್ಲ ಅವರ ಮನೋಭಾವದಲ್ಲಿ. ನಿಜವಾಗಿಯೂ ಈ ನಿಟ್ಟಿನಲ್ಲಿ ಯಶಸ್ವಿಯಾದರೆ ಮಾತ್ರ ಈ ಪದ್ದತಿ ಸಾರ್ಥಕತೆಯನ್ನು ಪಡೆಯುತ್ತದೆ. ಹಾಗೆಯೇ ಇಂತಹ ವಿಧಾನಗಳನ್ನು ದೊಡ್ಡಮಟ್ಟದಲ್ಲಿ ರಾಜ್ಯದಾದ್ಯಂತ ಜಾರಿಗೆ ತರುವಾಗ ಸರ್ಕಾರ ಸಾಕಷ್ಟು ಪೂರ್ವ ತಯಾರಿಗಳನ್ನು ಮಾಡಿಕೊಳ್ಳಬೇಕಾದ ಅಗತ್ಯವಿದೆ. ಪ್ರಸ್ತುತ ಇಂತಹ ತಯಾರಿಗಳ ಕೊರತೆ ಶಿಕ್ಷಣ ಇಲಾಖೆಯಲ್ಲಿ ಎದ್ದು ಕಾಣುತ್ತಿದೆ. ❑



ಕ್ಯೂಬಾ ಉತ್ಸವ

ಈ ಮರಿ ಗುಬ್ಬಿಯಂಥಾ ಪುಟ್ಟ ದೇಶವನ್ನು ತುಳಿದು ಹೊಸಕಿ ಹಾಕಲು ಹೂಂಕರಿಸಿ ನಿಂತ ದೈತ್ಯ ಅಮೇರಿಕಾ ಕೇವಲ 60 ಮೈಲಿ ದೂರದಲ್ಲಿದೆ. ಉಹೂಂ, 50 ವರ್ಷಗಳ ಕಾಲ ನಿರಂತರ ಕೆಂಡದ ಮಳೆ ಸುರಿಸಿದರೂ ಜಗ್ಗದ ಕ್ಯೂಬಾದ ಛಲ. ಉಚಿತ ಶಿಕ್ಷಣ, ಆರೋಗ್ಯದ ಉಚಿತ ಭರವಸೆ, ದೇಶದ ಎಲ್ಲಾ ಜನರಿಗೆ ಆತ್ಮಗೌರವದ ಬದುಕನ್ನು ಖಾತ್ರಿ ಮಾಡುವ ಸಮಾಜವಾದಿ ವ್ಯವಸ್ಥೆಯನ್ನು ಕೈಬಿಡಲು, ಕಳಚಿ ಹಾಕಲು ಕ್ಯೂಬಾ ಸಿದ್ಧವಿಲ್ಲ. ಅವುಡುಗಚ್ಚಿ ಕಷ್ಟ ಕಾರ್ಪಣ್ಯಗಳನ್ನು ಸವಾಲುಗಳನ್ನು ಎದುರಿಸುವುದನ್ನು ಜಗತ್ತು ಕ್ಯೂಬಾದಿಂದ ಕಲಿಯಬೇಕು.

ಕೆಂಡದ ಮಳೆಗೆ ಬೆನ್ನೊಡ್ಡಿ ಸಮತೆಯ ಹೂವು ಕಾಯುತ್ತಿರುವ ಕ್ಯೂಬಾ

ಅಸಮಾನತೆ, ಅನ್ಯಾಯವಿಲ್ಲದ ಸಮ ಸಮಾಜದ ಕನಸುಗಳನ್ನು ಕಾಣುವ ಕನಸುಗಾರರ ಕನಸುಗಳಿಗೆ ಬಣ್ಣ ತುಂಬುವ ಒಂದು ಪುಟ್ಟ ದೇಶ ಕ್ಯೂಬಾ. ಜನಸಂಖ್ಯೆಯಲ್ಲಿ ಬೆಂಗಳೂರು ಜಿಲ್ಲೆಯಷ್ಟು ಭೂ ಪ್ರದೇಶ. ಭಾರತದ ಭೂಪಟದಲ್ಲಿ ಎಡಬದಿಯ ಅರಬ್ಬಿ ಸಮುದ್ರದ ಅಂಚಿಗೆ ಅಂಟಿಕೊಂಡಂತಿರುವ ಪುಟ್ಟ ಕೇರಳದಷ್ಟು.

ಈ ಮರಿ ಗುಬ್ಬಿಯಂಥಾ ಪುಟ್ಟ ದೇಶವನ್ನು ತುಳಿದು ಹೊಸಕಿ ಹಾಕಲು ಹೂಂಕರಿಸಿ ನಿಂತ ದೈತ್ಯ ಅಮೇರಿಕಾ ಕೇವಲ 60 ಮೈಲಿ ದೂರದಲ್ಲಿದೆ. ಉಹೂಂ, 50 ವರ್ಷಗಳ ಕಾಲ ನಿರಂತರ ಕೆಂಡದ ಮಳೆ ಸುರಿಸಿದರೂ ಜಗ್ಗದ ಕ್ಯೂಬಾದ ಛಲ. ಉಚಿತ ಶಿಕ್ಷಣ, ಉಚಿತ ಆರೋಗ್ಯದ ಭರವಸೆ, ದೇಶದ ಎಲ್ಲಾ ಜನರಿಗೆ ಆತ್ಮಗೌರವದ ಬದುಕನ್ನು ಖಾತ್ರಿ ಮಾಡುವ ಸಮಾಜವಾದಿ ವ್ಯವಸ್ಥೆಯನ್ನು ಕೈಬಿಡಲು, ಕಳಚಿ ಹಾಕಲು ಕ್ಯೂಬಾ ಸಿದ್ಧವಿಲ್ಲ. ಅವುಡುಗಚ್ಚಿ ಕಷ್ಟ ಕಾರ್ಪಣ್ಯಗಳನ್ನು ಸವಾಲುಗಳನ್ನು ಎದುರಿಸುವುದನ್ನು ಜಗತ್ತು ಕ್ಯೂಬಾದಿಂದ ಕಲಿಯಬೇಕು. ಪ್ರಾಣ ಕೊಟ್ಟರು ಕೊಟ್ಟೇವು ನಂಬಿದ ತತ್ವಾದರ್ಶಗಳನ್ನು ಬಿಡೆವು ಎಂಬುದು ಕ್ಯೂಬನ್ನರ ಅಪ್ರತಿಮ ಬದ್ಧತೆ.

ಜನವರಿ 1, 1959 ಲ್ಯಾಟಿನ್ ಅಮೇರಿಕಾದ ಒಂದು ಪುಟ್ಟ ದೇಶದಲ್ಲಿ ಅಪೂರ್ವ ಕ್ರಾಂತಿ. ಫಿಡೆಲ್, ಚೇ ಮುಂತಾದ ಸಂಗಾತಿಗಳ ನೇತೃತ್ವದಲ್ಲಿ ಅಮೇರಿಕಾದ ಕೈಗೊಂಬೆ ಸರ್ವಾಧಿಕಾರಿ ಬ್ಯಾಪಿಸ್ಟ್ ಸರ್ಕಾರವನ್ನು ಕಿತ್ತೆಸೆದ ಕ್ರಾಂತಿಕಾರಿ ಹೋರಾಟ ಯಶಸ್ಸಿನ ದಡ ಮುಟ್ಟಿತ್ತು. ಅಂದಿನಿಂದ 50 ವರ್ಷಗಳ ಕಾಲ ಈ ಕ್ರಾಂತಿ ಜ್ಯೋತಿಯನ್ನು ಆರದಂತೆ ಕಾಪಾಡಿಕೊಂಡು ಬರಲು ಕ್ಯೂಬಾದ ಜನತೆ ಎದುರಿಸಿದ ದಾಳಿಗಳೆಷ್ಟೋ? ಕುತಂತ್ರಗಳೆಷ್ಟೋ? ಘೋರ ದಿಗ್ಬಂಧನ ಸೃಷ್ಟಿಸಿದ ಭೀಕರ ಸನ್ನಿವೇಶಗಳೆಷ್ಟೋ?

ಇಂತಹ ಕಠಿಣ ಸನ್ನಿವೇಶದ ಸಂದರ್ಭದಲ್ಲಿ ಕ್ಯೂಬಾದ ಜನತೆ ಘೋಷಿಸಿದ್ದು, 'ಸಮಾಜವಾದ ಇಲ್ಲವೇ ಸಾವು, ಎಂದೇಹೊರತು, ಶರಣಾಗತಿಯನ್ನಲ್ಲ. ಇಂದು ಕ್ಯೂಬಾ ಸಾವಿಗಲ್ಲ, ಬದುಕುವ, ಹೋರಾಡುವ ಕೆಚ್ಚೆದೆಗೆ-ಧೈರ್ಯಕ್ಕೆ ಒಂದು ಸಂಕೇತವಾಗಿದೆ. ದೀಪದಿಂದ ದೀಪ ಹಚ್ಚು ಎಂಬಂತೆ ಅಂದು ನಿರಾಶೆಯ ಕಾರ್ಗತ್ತಲಲ್ಲಿ ಕ್ಯೂಬಾ ಹಚ್ಚಿಟ್ಟ ಹಣತೆ ಇಂದು ಇಡೀ ಲ್ಯಾಟಿನ್ ಅಮೇರಿಕಾದ ದೇಶಗಳಲ್ಲಿ ಸುಲಿಗೆಕೋರ ಸಾಮ್ರಾಜ್ಯಶಾಹಿ ನೀತಿಗಳನ್ನು ಬುಡಮೇಲು ಮಾಡುವ ಹೋರಾಟಗಳ ಸಾಲು ದೀಪಗಳನ್ನೇ ಹೊತ್ತಿಸಿದೆ.

ಇಂತಹ ಐತಿಹಾಸಿಕ ಕ್ರಾಂತಿಗೆ 50 ವರ್ಷ ತುಂಬುವುದು ಸಂಭ್ರಮವಲ್ಲವೇ, ಹೌದು ಅದು ಮಹಾ ಸಂಭ್ರಮದ ಸಂದರ್ಭ. ಜುಲೈ 26, 1953 ಕ್ಯೂಬಾ ಕ್ರಾಂತಿಯ ಹೋರಾಟ ಆರಂಭಗೊಂಡ ದಿನ. ಫಿಡೆಲ್‌ರಿಂದ ಮೊದಲ ಯುದ್ಧ ಘೋಷಣೆಯಾದ ದಿನ. ಜುಲೈ 26, 2009 ಕ್ಯೂಬಾದಿಂದ 12,000 ಕಿ.ಮೀ.ದೂರದಲ್ಲಿರುವ ಭಾರತದಲ್ಲಿ,



ಬೆಂಗಳೂರಿನ ಸೆನೆಟ್ ಸಭಾಂಗಣದಲ್ಲಿ ಸಡಗರ ಸಂಭ್ರಮ.

ತುಂಬಿ ತುಳುಕುವ ಸಭಾಂಗಣ. ಹಾಡು, ವಾದ್ಯಗೋಷ್ಠಿ, ಕವನ ವಾಚನ, ಸ್ಫೂರ್ತಿ ತುಂಬುವ ಮಾತುಗಳು, ಚಲನಚಿತ್ರ ಪ್ರದರ್ಶನ, ಪುಸ್ತಕ ಬಿಡುಗಡೆ, ಪುಸ್ತಕ ಪ್ರದರ್ಶನ, ಶುಭಾಶಯ ಪತ್ರಗಳ ಬಿಡುಗಡೆ, ಪೋಸ್ಟರ್ ಪ್ರದರ್ಶನ, ಹಿರಿಯರು ಕಿರಿಯರು, ಮಹಿಳೆಯರು ಮಕ್ಕಳ ಮಾತಿನ ಕಲರವ.

ಮಾನವಕುಲದ ಇತಿಹಾಸದ ಒಂದು ಮಹಾನ್ ಅಧ್ಯಾಯವಾದ ಕ್ಯೂಬಾದ ಈ ಹೋರಾಟಕ್ಕೆ ಮಾತಿನ ಬಾಷ್ಯ ಬರೆದವರು ಹಲವರು. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ: ಪ್ರಕಾಶ್‌ಕಾರಟ್, ಕ್ಯೂಬಾ ರಾಯಭಾರ ಕಛೇರಿಯ ಪ್ರಮುಖ ಅಧಿಕಾರಿ



ಎಡ್ವರ್ಡೋರ್ ಗ್ಲೆಸಿಯಾಸ್ ಕ್ವಿನ್ತಾನಾ, 'ಕ್ಯೂಬಾ ಹ ಖ್ಯಾತಿಯ ಜಿ.ಎನ್. ಮೋಹನ್, ಕವಿ ಮಮತ ಜಿ.ಸಾಗರ, ಚಿಂತಕ ಡಾ: ಜಿ. ರಾಮ ಇನ್ನೂ ಹಲವರು.

'ಸೆಣಸಿದಾಗ ಸೋಲು ಇಲ್ಲ'

-ಡಾ: ಜಿ.ರಾಮ
ಚಿಂತ

ಅಮೇರಿಕಾ ಎಂದರೆ ಮಾನವ ಹಕ್ಕು ಪ್ರತಿಪಾದಕ ಎಂಬ ಪ್ರಚಾರವಿದೆ. ಆದರೆ ಕ್ಯೂ ದೇಶವು ಬೀಳುವುದನ್ನೇ ಕಾಯುತ್ತ ಅದ ಷಡ್ಯಂತ್ರ, ದಿಗ್ಬಂಧನ, ನೀಚ ತಂತ್ರವನ್ನು ಅಮೇ ನಡೆಸಿದೆ. ಅಮೇರಿಕಾದ ದುಷ್ಕೃತ್ಯಗಳಿಗೆ ಲೆಕ್ಕವೇ ದಕ್ಷಿಣ ಅಮೇರಿಕಾದ ಯಾವುದೇ ದೇಶದಲ್ಲಿ ಅಮೇರಿಕಾ ಹಸ್ತಕ್ಷೇಪ ಮಾಡದೇ ಬಿಟ್ಟಿ ಕ್ಯೂಬಾವನ್ನು ಒಂಟಿತನಕ್ಕೆ ದೂಡಿ ಹೊಸಕಿ ಹಾ ಪ್ರಯತ್ನ ಅಮೇರಿಕಾದ್ದು. ಆದರೆ ಸೆಣಸಿದಾಗ ಸೋ ಇಲ್ಲ ಎಂದು ಕ್ಯೂಬಾ ತೋರಿಸಿಕೊಟ್ಟಿದೆ.

ಅಮೇರಿಕಾದಿಂದ ಕೊಳ್ಳುವ ಶಸ್ತ್ರಾಸ್ತ್ರಗಳನ್ನು ನ ಹೇಗೆ ಬಳಸುತ್ತೇವೆ ಎಂಬ ತನಿಖೆ ನಡೆಸ ಅಮೇರಿಕಾ ಕೇಳುತ್ತಿದೆ. ಇಂತಹ ಹಸ್ತಕ್ಷೇಪಕ್ಕೆ ಅವಕ ಕಲ್ಪಿಸಲು ನಮ್ಮ ಮುದ್ದು ಮೋಹನ(ಎಸ್.ಎಂ.) ಹೊರಟಿದ್ದಾರೆ. ಹಿಲರಿ ಕ್ಲಿಂಟನ್ ಭಾರತಕ್ಕೆ ಬ ವಿದ್ಯಾರ್ಥಿಗಳನ್ನು ಮಾತನಾಡಿ, ಇ ಗುಡಿಸಲುಗಳಿಗೆ ಭೇಟಿ ನೀಡಿ ಫೋಟೋ ತೆಗೆಸಿಕೊಳ್ಳಬಹುದು, ಆದರೆ ಆಕೆ ಬಂದಿರು ಭಾರತದಲ್ಲಿ ಅಮೇರಿಕಾದ ಪರಮಾಣು ವಿದ್ಯು ಸ್ಥಾವರ ಕೇಂದ್ರವನ್ನು ಸ್ಥಾಪಿಸಬೇಕು. ಆ ಭೋಪಾಲ್ ದುರಂತದಂತಹ ದುರ

'ಆತ್ಮಗೌರವ - ಸ್ವಾಭಿಮಾನಕ್ಕಾಗಿ ಹೋರಾಟ'


ಕ್ವಿಸ್ತಾನಾ ಎಡ್ವರ್ಡ್ ಗ್ಲೆಸಿಯಾಸ್
ಕ್ಯೂಬಾ ರಾಯಭಾರ ಕಛೇರಿಯ ಅಧಿಕಾರಿ

ಕ್ಯೂಬಾ ಅಮೇರಿಕಾದ ದಿಗ್‌ಬಂಧನಕ್ಕೆ ಗುರಿಯಾಗಿ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದ್ದ ಸಂದರ್ಭಕ್ಕೆ ಕ್ಯೂಬಾ ಜನತೆಗೆ ಬ್ರೆಡ್ ತಯಾರಿಕೆಗೆ ಅಗತ್ಯವಾದ ಗೋಧಿ ಪೂರೈಸಿದ ಸ್ನೇಹಿತರು ನೀವು. ನಮ್ಮ ಗುರಿ ಒಂದೇ ಆಗಿದೆ. ಸನ್ನಿವೇಶಗಳು ಮಾತ್ರ ಬೇರೆ ಬೇರೆಯಾಗಿವೆ. ಕ್ಯೂಬಾ ತನ್ನ ಇತಿಹಾಸದಲ್ಲಿ ಶತಮಾನಗಳ ಕಾಲ ಅಮೇರಿಕಾದ ಸಾಮ್ರಾಜ್ಯಶಾಹಿ ಎಂಬ ಶತ್ರುವಿನ ವಿರುದ್ಧ ಹೋರಾಡಿದೆ.

ಅಮೇರಿಕಾದ ಕೈಗೊಂಬೆ ಸರ್ಕಾರವನ್ನು ಕಿತ್ತೆಸೆದು ನಡೆಸಲಾದ ಕ್ರಾಂತಿ 1959 ರ ಕ್ರಾಂತಿ. ಹೋರಾಟ ಮತ್ತು ಒಗ್ಗಟ್ಟಿನಿಂದ ಸಮಾಜವಾದದ ತಳಹದಿಯ ಮೇಲೆ ದೇಶ ಕಟ್ಟಲು ಸಾಧ್ಯವಾಗಿದೆ.

1991ರಲ್ಲಿ ಸಮಾಜವಾದಿ ಸೋವಿಯತ್ ಒಕ್ಕೂಟವು ಕುಸಿದ ಮೇಲೆ ಅದರೊಂದಿಗೆ ವ್ಯಾಪಾರ ವಹಿವಾಟು, ಸಹಕಾರ ಹೊಂದಿದ್ದ ಕ್ಯೂಬಾತುಂಬಾ ಸಂಕಷ್ಟಕ್ಕೆ ಸಿಲುಕಿತ್ತು. ಪೆಟ್ರೋಲ್ ಇರಲಿಲ್ಲ. ಇಂತಹ ಸನ್ನಿವೇಶದಲ್ಲಿ ಕ್ಯೂಬಾ ನಡೆಸಿದ ದಿಟ್ಟ ಹೋರಾಟದಲ್ಲಿ ಭಾರತದ ಎಡಪಂಥೀಯರೂ ನೆರವಿಗೆ ಬಂದರು. ಕ್ಯೂಬಾ ತನ್ನ ಆತ್ಮಗೌರವ, ಸ್ವಾಭಿಮಾನವನ್ನು ಕಾಪಾಡಿಕೊಳ್ಳಲು ಕ್ಯೂಬಾದ ಕ್ರಾಂತಿಕಾರಿ ಜನತೆ 50 ವರ್ಷಗಳಿಂದ ಹೋರಾಡುತ್ತಿದ್ದಾರೆ.


ಐವರು ಕ್ಯೂಬನ್ ನಿರಪರಾಧಿ ನಾಗರೀಕರು ಕಳೆದ 11 ವರ್ಷಗಳಿಂದ ಅಮೇರಿಕಾದ ಜೈಲುಗಳಲ್ಲಿ ಬಂಧಿಗಳಾಗಿದ್ದಾರೆ. ಆದರೆ ನಿಜವಾದ ಭಯೋತ್ಪಾದಕರು ಫ್ಲೋರಿಡಾ, ಮಿಯಾಮಿಗಳಲ್ಲಿ ಆರಾಮವಾಗಿ ಓಡಾಡಿಕೊಂಡಿದ್ದಾರೆ. ಇವರ



ಬಿಡುಗಡೆಗಾಗಿ ಹೋರಾಟ ನಡೆದಿದೆ.

ಕ್ಯೂಬಾ ಜಗತ್ತಿನಲ್ಲಿ ಎಲ್ಲೇ ನೈಸರ್ಗಿಕ ವಿಕೋಪಗಳಾಗಲಿ ಅಲ್ಲಿಗೆ ನೆರವಿಗಾಗಿ ಧಾವಿಸುತ್ತಿದೆ. ಕ್ಯೂಬಾ ದೇಶದ 42 ಸಾವಿರ ವೈದ್ಯರು ಜಗತ್ತಿನ ವಿವಿಧ ಭಾಗಗಳಲ್ಲಿ ಜನರ ಸೇವೆಯಲ್ಲಿದ್ದಾರೆ. ಅಮೇರಿಕಾ ಇತ್ತೀಚೆಗೆ ಅಧ್ಯಕ್ಷರನ್ನು ಪದಚ್ಯುತಿಗೊಳಿಸಿ ಮೂಗ ತೂರಿಸಿರುವ ಹೊಂಡುರಾಸ್‌ನಲ್ಲಿ ಸಹ 485 ವೈದ್ಯರು ದುಡಿಯುತ್ತಿದ್ದಾರೆ.

ಶರಣೆನ್ನೆ ಎನ್ನುವ ಕೆಚ್ಚೆದೆ -ದಿಟ್ಟತನ



- ಪ್ರಕಾಶ್‌ಕಾರಟ್
ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ

ಶತಮಾನಗಳ ಕಾಲ ವಸಾಹತು ಶಾಹಿ ಶೋಷಣೆ, ಗುಲಾಮಗಿರಿಗೆ ತುತ್ತಾಗಿದ್ದ ಕ್ಯೂಬಾ ಇಂದು ಜಗತ್ತಿನಲ್ಲಿ ಪ್ರತಿರೋಧದ ಸಂಕೇತವಾಗಿದೆ. ಅಮೇರಿಕಾದ ಭಯೋತ್ಪಾದನೆ ದಿಗ್ಬಂಧನದ ವಿರುದ್ಧ ದಿಟ್ಟ ಸಮರ ಸಾರಿರುವ ಕ್ಯೂಬಾದ ಒಂದು ಹೊಸ ಸಾಮಾಜಿಕ ವ್ಯವಸ್ಥೆಯನ್ನು ನಾಶ ಮಾಡುವ ಅಮೇರಿಕಾದ ಪ್ರಯತ್ನದ ವಿರುದ್ಧ ಹೋರಾಟ ಮಾಡುತ್ತಾ ಬಂದಿದೆ. ಕ್ಯೂಬಾ ಕ್ರಾಂತಿಯ ನಾಯಕ ಫಿಡೆಲ್‌ರನ್ನು ಹತ್ಯೆ ಮಾಡಲು ಅಮೇರಿಕಾ 645 ಬಾರಿ ಪ್ರಯತ್ನಿಸಿದೆ. ಕ್ಯೂಬಾ ಜನರದ್ದು ಶರಣಾಗತಿಯನ್ನೊಪ್ಪದ ಕೆಚ್ಚೆದೆಯ ದಿಟ್ಟ ಹೋರಾಟ, ಧೀಮಂತ ಸಾಹಸ.

ಕ್ಯೂಬಾ ಕ್ರಾಂತಿಯ ನಂತರ ಹಲವಾರು ರಂಗಗಳಲ್ಲಿ ಗಮನಾರ್ಹ ಸಾಧನೆ ಮಾಡಿದೆ. ವಿಶೇಷವಾಗಿ ಆರೋಗ್ಯ ಮತ್ತು ಶಿಕ್ಷಣ ರಂಗದಲ್ಲಿ. ಕ್ಯೂಬಾ ದೇಶ ಒಂದೇ ವರ್ಷದಲ್ಲಿ ದೇಶದ ಅನಕ್ಷರತೆಯನ್ನು ಅಳಿಸಿಹಾಕಿತು. ತಲಾ ಲಕ್ಷ ಜನತೆಗೆ ಅಮೇರಿಕದಲ್ಲಿರುವುದಕ್ಕಿಂತ ಹೆಚ್ಚು ವೈದ್ಯರು ಕ್ಯೂಬಾದಲ್ಲಿದ್ದಾರೆ. ಭಾರತದಲ್ಲಿ ಕ್ಯೂಬಾದಂತಹ ಶಿಕ್ಷಣ ವ್ಯವಸ್ಥೆಯನ್ನು ಕಲ್ಪನೆ ಕೂಡ ಮಾಡಿಕೊಳ್ಳಲು ಸಾಧ್ಯವಿಲ್ಲ. ಭಾರತವು ಆರೋಗ್ಯಕ್ಕಾಗಿ ಒಟ್ಟು ರಾಷ್ಟ್ರೀಯ ಉತ್ಪನ್ನ (ಜಿಡಿಪಿ)ದ ಶೇ.1 ರಷ್ಟನ್ನು ಮಾತ್ರ ವೆಚ್ಚ ಮಾಡಿದರೆ, ಕ್ಯೂಬಾ ತನ್ನ ಜಿ.ಡಿ.ಪಿ ಯ ಶೇ.6.5 ರಷ್ಟು ವೆಚ್ಚ ಮಾಡುತ್ತದೆ. ಕ್ಯೂಬಾ ದೇಶದ ಕ್ಲಿನಿಕ್, ಚಿಕಿತ್ಸಾಲಯಗಳು, ಆಸ್ಪತ್ರೆಗಳನ್ನು ನೋಡಿದರೆ ನಮಗೆ ಕ್ಯೂಬಾದ ಕ್ರಾಂತಿಯ ನಿಜವಾದ ಸ್ವರೂಪ ಅರ್ಥವಾಗುತ್ತದೆ.

ಇತಿಹಾಸದಲ್ಲಿ ಆಫ್ರಿಕಾದಿಂದ ಆಮದು ಮಾಡಿಕೊಳ್ಳಲಾದ ಗುಲಾಮರು ಕ್ಯೂಬಾದ ಜನರಲ್ಲಿ ಬೆರೆತಿದ್ದಾರೆ. ವರ್ಣಭೇದ ನೀತಿಯನ್ನು ಕ್ಯೂಬಾದಲ್ಲಿ ಸಂಪೂರ್ಣ ನಿಷೇಧಿಸಲಾಗಿದೆ, ನಿವಾರಿಸಲಾಗಿದೆ. ಕ್ಯೂಬಾ ದೇಶ ಅದು 'ಕ್ಯೂಬಾ' ಆಗಿರುವುದು ತನ್ನ ಅಂತರ್ ರಾಷ್ಟ್ರೀಯತೆಯಿಂದ.

ವಿಮೋಚನಾ ಹೋರಾಟಗಳಿಗೆ ಇಂಬು

ಕ್ಯೂಬಾ ದೇಶವು ಹಲವಾರು ರಾಷ್ಟ್ರೀಯ ವಿಮೋಚನಾ ಹೋರಾಟಗಳಿಗೆ ನಮೀಬಿಯಾ, ಅಂಗೋಲಾ, ಜಿಂಬಾಬ್ವೆ, ಮುಂತಾದ ಚಳುವಳಿಗಳಿಗೆ ಬೆಂಬಲ ನೀಡಿದೆ. ದಕ್ಷಿಣ ಆಫ್ರಿಕಾದಲ್ಲಿ ಜಿಯೋನಿಸ್ಟ್ ಸೈನ್ಯವನ್ನು ಸೋಲಿಸುವುದರಲ್ಲಿ ಕ್ಯೂಬಾ ಪಾತ್ರವಿದೆ. ನಮೀಬಿಯಾ ಸೇರಿದಂತೆ ಆಫ್ರಿಕಾದ ದಕ್ಷಿಣ ಭಾಗದಲ್ಲಿನ ದೇಶಗಳಲ್ಲಿ ಹೋರಾಟಗಳಿಗೆ ಕ್ಯೂಬಾ ನೆರವು ನೀಡಿದೆ

ಕ್ಯೂಬಾಜಗತ್ತಿನ ವಿವಿಧ ಸೌಹಾರ್ದ ದೇಶಗಳಿಗೆ ವೈದ್ಯರುಗಳನ್ನು ಕಳಿಸುತ್ತದೆ, ಸೈನಿಕರನ್ನಲ್ಲ, ವೆನುಜುವೆಲಾ ದೇಶದಲ್ಲಿ ಕ್ಯಾರಕಸ್‌ನಲ್ಲಿ ಕ್ಯೂಬಾದ ವೈದ್ಯರು ಅಲ್ಲಿನ ಬಡವರಿಗೆ ಸೇವೆ ಸಲ್ಲಿಸುತ್ತಿದ್ದಾರೆ. ಹಾಗೂ ಅಲ್ಲಿ ಕ್ಯೂಬಾ ವೈದ್ಯರಿಂದ ವಿದ್ಯಾರ್ಥಿಗಳಿಗೆ ವೈದ್ಯಕೀಯ ತರಬೇತಿ ನೀಡಲಾಗುತ್ತಿದೆ. ಅನಾರೋಗ್ಯದ ಚಿಕಿತ್ಸೆಗಾಗಿ ಲ್ಯಾಟಿನ್ ಅಮೇರಿಕಾದ ವಿವಿಧ ದೇಶಗಳ ಸಹಸ್ರಾರು ಜನ ಕ್ಯೂಬಾಕ್ಕೆ ಭೇಟಿ ನೀಡುತ್ತಾರೆ.

ಸ್ಫೂರ್ತಿ ಬಿಂದು

ಲ್ಯಾಟಿನ್ ಅಮೇರಿಕಾದಲ್ಲಿ ವೆನಜುವೆಲಾ, ಬೊಲಿಯಾ, ನಿಕರಗುವ ಮುಂತಾದ ದೇಶಗಳು ಇಂದೂ ಸ್ಫೂರ್ತಿಗಾಗಿ ಕ್ಯೂಬಾದ ಕಡೆ ನೋಡುತ್ತಿವೆ. ಕ್ಯೂಬಾ ವಹಿಸುತ್ತಿರುವ ಈ ಪಾತ್ರಕ್ಕಾಗಿ ಕ್ಯೂಬಾದ ಜನತೆ ಬಾರಿ ಬೆಲೆ ತೆತ್ತಿದ್ದಾರೆ. ಅಮೇರಿಕಾದ ಆಳುವ ವರ್ಗಗಳ ದ್ವೇಷಪೂರಿತ ಕ್ರಮಗಳಿಗೆ ಕ್ಯೂಬಾ ತುತ್ತಾಗಿದೆ. ಇದರಿಂದಾಗಿ ಕ್ಯೂಬಾಕ್ಕೆ ಅಗತ್ಯವಾದ ಔಷಧಿಗಳು ಆಮದಾಗಲಾರದ ಸ್ಥಿತಿ ಇದೆ. ಅಮೇರಿಕಾದ ಸಂಸ್ಥೆಗಳು ಕ್ಯೂಬಾದೊಂದಿಗೆ ವ್ಯಾಪಾರ ಮಾಡುವಂತಿಲ್ಲ. ಇಷ್ಟು ಮಾತ್ರವಲ್ಲ. ಯಾವುದೇ 3ನೇ ದೇಶವು ಕ್ಯೂಬಾದೊಂದಿಗೆ ವ್ಯಾಪಾರ ವಹಿವಾಟು ನಡೆಸಬಾರದು ಎಂದು ಅಮೇರಿಕಾ ದಿಗ್ಬಂಧನ ವಿಧಿಸುತ್ತದೆ. ವಿಶ್ವ ಸಂಸ್ಥೆಯ ಜನರಲ್ ಕೌನ್ಸಿಲ್ ಕ್ಯೂಬಾದ ಮೇಲಿನ ಅಕ್ರಮ ದಿಗ್ಬಂಧನವನ್ನು ಹಲವು ಬಾರಿ ಖಂಡಿಸಿದೆ. ಇಂದು ಕ್ಯೂಬಾದಲ್ಲಿ ಮೂತ್ರ ಪಿಂಡದ ತೊಂದರೆ ಇರುವ ಮಕ್ಕಳ ಚಿಕಿತ್ಸೆಗೆ (ಡಯಾಲಿಸಿಸ್‌ಗೆ) ಬೇಕಾದ ಸಿವಿಪಿಡಿ ಔಷಧಿ ಕೂಡ ದೊರೆಯದೆ ತೊಂದರೆಯಾಗಿದೆ. ಕ್ಯೂಬಾ ತನ್ನ ಅತ್ಯಂತ ಕಷ್ಟಕರ ದಿನಗಳಲ್ಲಿಯೂ ಆರೋಗ್ಯ ವೆಚ್ಚವನ್ನು ಕಡಿತ ಮಾಡಲಿಲ್ಲ. 6-7 ವರ್ಷಗಳ ಕಾಲ ತೀವ್ರ ಸಂಕಷ್ಟವನ್ನೆದುರಿಸಿತು. ಅಂತಹ ಸನ್ನಿವೇಶದಲ್ಲಿ ಕ್ಯೂಬಾದ ಜನತೆಗೆ ಸೌಹಾರ್ದತೆ ತೋರಿಸಲು ಸಿಪಿಐ(ಎಂ) ಮತ್ತಿತರ ಪಕ್ಷಗಳು ಪ್ರಗತಿಪರ ಸಂಘಟನೆಗಳು 10,000 ಟನ್ ಅಂದರೆ ಒಂದು ಹಡಗು ಗೋಧಿಯನ್ನು ಸಂಗ್ರಹಿಸಿ ನೀಡಿದವು. ಆಘಟ್ಟಹೋಯ್ತು. ಈಗ ದೇಶದ ಆರ್ಥಿಕತೆ, ಕೃಷಿ, ಕೈಗಾರಿಕಾ ಉತ್ಪಾದನೆ ಎಲ್ಲ ಬೆಳೆಯುತ್ತಿದೆ.

ಬೇಕಿರುವುದು ರಿಯಾಯಿತಿಯಲ್ಲ, ಸಾರ್ವಭೌಮತೆ ಒಪ್ಪಬೇಕು

ದುರದೃಷ್ಟವಶಾತ್ ಅಮೇರಿಕಾವು ಕ್ಯೂಬಾದ ಕುರಿತ ದ್ವೇಷವನ್ನು ಬಿಡಲು ತಯಾರಿಲ್ಲ, ಬುಷ್ ಹೋಗಿ ಒಬಾಮ ಬಂದಿದ್ದಾರೆ. ಒಬಾಮ ಕ್ಯೂಬಾದಲ್ಲಿ ವಿಚಾರದಲ್ಲಿ ಅಲ್ಲಿನ ವ್ಯವಸ್ಥೆಯನ್ನು ಒಪ್ಪದಿದ್ದರೂ ಕೂತು ಮಾತನಾಡುವ ಭರವಸೆ ನೀಡಿದ್ದರು. ಅಮೇರಿಕಾದಲ್ಲಿರುವ ಕ್ಯೂಬನ್ನರು ತಮ್ಮಬಂಧು, ಬಾಂಧವರನ್ನು ಭೇಟಿಯಾಗಲು 3 ವರ್ಷಗಳಿಗೊಮ್ಮೆ ಮಾತ್ರ ಕ್ಯೂಬಾಕ್ಕೆ ಹೋಗಿಬರಲು ಅವಕಾಶ ಎಂಬ ನೀತಿಯನ್ನು ಒಬಾಮ ಸಡಲಿಸಿದ್ದಾರೆ. ಆದರೆ ಅದಕ್ಕಿಂತ ಮುಖ್ಯವಾಗಿ ಅಮೇರಿಕವು ಕ್ಯೂಬಾ ದೇಶದ ಸಾರ್ವಭೌಮತೆಯನ್ನು ಸ್ವಾತಂತ್ರ್ಯವನ್ನು ಒಪ್ಪಬೇಕು. ಜನರ ಆಯ್ಕೆ ಅದು.

ನಾವು ಹೊಸ ಜಾಗತಿಕ ವ್ಯವಸ್ಥೆಗಾಗಿ ಹೋರಾಟ ಮುಂದುವರಿಸಬೇಕಿದೆ. ನವ ಉದಾರವಾದಿ ನೀತಿಗಳು ಜಗತ್ತಿನಲ್ಲಿ ಸಾಮ್ರಾಜ್ಯಶಾಹಿ ಒಳನುಸುಳುವಿಕೆಯನ್ನು ಹೆಚ್ಚಿಸುತ್ತಿದೆ. ಜನರನ್ನು ಬಡತನಕ್ಕೆ ನೂಕುವ ನೀತಿಗಳ ವಿರುದ್ಧ ಹೋರಾಟ ವಿಫಲವಾಗಿದೆ ಎಂದು... ಕನಿಷ್ಟ ತೊಂದರೆಯ ದಿನಗಳೆಂದು ಶರಣಾಗಬಾರದು. ಕ್ಯೂಬಾದಿಂದ ಕಲಿಯಬೇಕು.

ಲೋಕಸಭಾಚುನಾವಣೆಯಲ್ಲಿ ಎಡಪಕ್ಷಗಳು ಹಿನ್ನಡೆ ಅನುಭವಿಸಿದ ನಂತರ ಹಲವಾರು ಸ್ನೇಹಿತರು ಮತ್ತು ಟೀಕಾಕಾರರು 'ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟವು 21ನೇ ಶತಮಾನದಲ್ಲಿ ಅಪ್ರಸ್ತುತ - ಆ ನೀತಿಗೆ ಹೊಂದಿಕೊಳ್ಳಿ' ಎನ್ನುತ್ತಿದ್ದಾರೆ. ಹಾಗೇನಾದರೂ ಮಾಡಿದ್ದಲ್ಲಿ ಪ್ರಗತಿಪರ ಬದಲಾವಣೆಗಾಗಿ ನಡೆಸುತ್ತಿರುವ ನಮ್ಮ ಹೋರಾಟವನ್ನು ಕೈಬಿಟ್ಟಂತಾಗುತ್ತದೆ. ಭಾರತದ ಎಡಪಕ್ಷಗಳು ಮತ್ತು ಪ್ರಗತಿಪರ ಶಕ್ತಿಗಳು ಕ್ಯೂಬಾದಿಂದ ಕಲಿಯಬೇಕಾಗಿದೆ.

ಸಂಸ್ಥಾನದಲ್ಲಿ ಯೂನಿಯನ್ ಕಾರ್ಬೈಡ್ ಸಂಸ್ಥೆಯನ್ನು ವಿಚಾರಣೆಗೆ ಗುರಿ ಮಾಡಿದಂತೆ ಮಾಡಬಾರದು, ಪರಿಹಾರದ ಹಣ ಕೇಳಬಾರದು. ಅದಕ್ಕೆ ತಕ್ಕಂತೆ ಪಾರ್ಲಿಮೆಂಟಿನಲ್ಲಿ ಶಾಸನ ಮಾಡಿ ಎಂದು ಕೇಳಲು.

ಅರ್ಥಪೂರ್ಣ ಸಹೋದರತ್ವ

-ಬಿ.ಸುರೇಶ್
ಖ್ಯಾತ ಕಿರುತೆರೆ ನಿರ್ದೇಶಕರು

ಭಾರತದಲ್ಲಿ ಸಹೋದರತ್ವದ ದಿನ ಕ್ಯೂಬಾ ಉತ್ಸವ ನಡೆದಿರುವುದು ಅರ್ಥಪೂರ್ಣ. ಸಾಂಸ್ಕೃತಿಕವಾಗಿ ಜಗತ್ತನ್ನು ಕಟ್ಟಬೇಕು. ಈ ಸಾಂಸ್ಕೃತಿಕ ಉತ್ಸವ ಅರ್ಥಪೂರ್ಣ. ನಮ್ಮರಾಜ್ಯದ ಜೋಯಿಡಾ ತಾಲ್ಲೂಕಿನ ಶಾಲೆಗಳು ಮಳೆ ಬಂದರೆ ಬಿದ್ದು ಹೋಗುವಂತಿವೆ. ವೈದ್ಯಕೀಯವನ್ನು ಕಲಿಸುವುದು ಇಲ್ಲಿ ಉದ್ಯಮವಾಗಿದೆ. ನಮ್ಮಲ್ಲಿ ವಿದ್ಯಾಭ್ಯಾಸದಿಂದ ವಂಚಿತವಾದ ದೊಡ್ಡ ವಿಭಾಗವಿದೆ. ಕ್ಯೂಬಾದ ಉದಾಹರಣೆ ಭಿನ್ನವಾಗಿದೆ.

'ಅಕ್ಕಿಯನ್ನು ವಿಯೆಟ್ನಾಂ ಗೆ ಕಳಿಸಿ'


-ಮೆನನ್

50-60ರ ದಶಕದಲ್ಲಿ ಅಮೇರಿಕಾದ ಸೈನ್ಯ ವಿಯೆಟ್ನಾಂ ದೇಶಕ್ಕೆ ನುಗ್ಗಿ ಘೋರವಾದ ಯುದ್ಧ ದಾಳಿ ನಡೆಸಿತ್ತು. ಅಂತಹ ಸಂದರ್ಭವೊಂದರಲ್ಲಿ ಚೀನಾ ದೇಶದಿಂದ 15 ಸಾವಿರ ಟನ್ ಅಕ್ಕಿಯು ಕ್ಯೂಬಾಕ್ಕೆ ಬರುವುದಿತ್ತು. ಅಮೇರಿಕನ್ ಸೈನ್ಯದೊಂದಿಗೆ ದಿಟ್ಟತನದಿಂದ ಸೆಣಸುತ್ತಿರುವ ವಿಯೆಟ್ನಾಂಗೆ ಆಹಾರದ ಅಗತ್ಯವಿದೆ ಎಂದು ಗೊತ್ತಾದಾಗ ಕ್ಯೂಬಾದ ಅಧ್ಯಕ್ಷ ಫಿಡಲ್ ಕ್ಯಾಸ್ಟ್ರೋ ತಡಮಾಡದೆ ಚೀನಾದ ಅಕ್ಕಿಯನ್ನು ವಿಯೆಟ್ನಾಂಗೆ ಕಳಿಸಿ ಎಂದರು. ದೇಶವನ್ನು ಸಾಕ್ಷರರನ್ನಾಗಿ ಮಾಡಲು ಕ್ಯೂಬಾ ಕ್ರಾಂತಿಯ ನಂತರ ಒಂದು ವರ್ಷ ಎಲ್ಲಾ ಶಾಲಾ ಕಾಲೇಜುಗಳನ್ನು ಬಂದ್ ಮಾಡಿ ವಿದ್ಯಾರ್ಥಿಗಳನ್ನು ಹಳ್ಳಿಗಳಿಗೆ ಅಕ್ಷರ ಕಲಿಸಲು ಕಳಿಸಲಾಯಿತು.



ಭಯೋತ್ಪಾದಕ ದೇಶಗಳ ಪಟ್ಟಿಯಿಂದ ಕ್ಯೂಬಾದ ಹೆಸರು ಹೊಡೆದೆ

-ಜಿ.ಎನ್.ಮೋಹನ್
ಕವಿ ಹಾಗೂ ಪತ್ರಕರ್ತರು



ಕ್ಯೂಬಾ ನಂತರ ನಾನು ಅಮೇರಿಕಾಕ್ಕೆ ಸಿಬಿಎನ್-ಐಬಿಎನ್ ಸುದ್ದಿಸಂಸ್ಥೆಯ ಮೂಲಕ ಹೋಗಿದ್ದೆ. ಅಮೇರಿಕಾದ ವೀಸಾಕ್ಕಾಗಿ ತುಂಬಬೇಕಾದ ಅರ್ಜಿಯಲ್ಲಿ ಹಲವು ದೇಶಗಳನ್ನು ಭಯೋತ್ಪಾದಕ ದೇಶಗಳೆಂದು ಕೊಟ್ಟು ಆ ಪಟ್ಟಿಯಲ್ಲಿ ಕ್ಯೂಬಾ ಹೆಸರನ್ನು ಸೇರಿಸಿದ್ದಾರೆ. ನೀವು ಈ ದೇಶಗಳಿಗೆ ಭೇಟಿ ನೀಡಿದ್ದೀರಾ ಎಂಬ ಪ್ರಶ್ನೆ ಸಹ ಅದರಲ್ಲಿದೆ. ನಾನು ಆ ಪಟ್ಟಿಯಲ್ಲಿ ಕ್ಯೂಬಾದ ಹೆಸರನ್ನು ಹೊಡೆದು ಹಾಕಿದೆ. 10 ವರ್ಷಕ್ಕೆ ಬದಲಿಗೆ ನನಗೆ 5 ವರ್ಷಕ್ಕೆ ಮಾತ್ರ ವೀಸಾ ಸಿಕ್ಕಿದೆ. ಈ ಹೋರಾಟದಲ್ಲಿ 5 ವರ್ಷ ನಾನು ಗೆದ್ದೆ, 5 ವರ್ಷ ಅಮೇರಿಕಾ ಗೆದ್ದಿದೆ.

ನಾನು ಅಮೇರಿಕಾ ನಗರಗಳಲ್ಲಿ ನೋಡಿದಾಗ ಅಟ್ಲಾಂಟಾ, ವಾಷಿಂಗ್‌ಟನ್, ನ್ಯೂಯಾರ್ಕ್ ಎಲ್ಲೆಲ್ಲಿಯೂ ಕೂಡಾ ಕ್ಯೂಬಾದ ಬಾವುಟಗಳು ಹಾರಾಡುತ್ತಿದ್ದವು. 'ಹೆಲ್ಮ ಬರ್ಟನ್ ಕಾಯ್ದೆ'ಯ ಮೂಲಕ ಅಮೇರಿಕಾ ತನ್ನ ನಾಗರೀಕರನ್ನು ಎಷ್ಟೇ ನಿರ್ಬಂಧಿಸಿದರೂ ಸ್ವತಃ ಅಮೇರಿಕಾದ ಜನರಲ್ಲಿ ಕ್ಯೂಬಾ ಕುರಿತ ಪ್ರೀತಿಯನ್ನು ಹತ್ತಿಕ್ಕಲು ಆಗಿಲ್ಲ. ಕ್ಯೂಬಾಕ್ಕೆ ಹೋಗಲು ಅಮೇರಿಕಾ ತನ್ನ ನಾಗರೀಕರಿಗೆ ಅವಕಾಶ ಕೊಡುವುದಿಲ್ಲ. ಹೋಗಿ ಬಂದರೆ ಜೈಲಿಗೆ ಅಟ್ಟಲಾಗುತ್ತದೆ. ಆದರೂ ಅಲ್ಲಿ ಕ್ಯೂಬಾಕ್ಕೆ ಹೋಗಿಬರುವ ಚಳುವಳಿಯೇ ನಡೆಯುತ್ತಿದೆ. ಹೀಗೆ ಹೋಗಿ ಬರುವ ಜನರಿಗೆ ಜಾಮೀನು ನೀಡಿ ಬಿಡಿಸಿಕೊಳ್ಳಲು ವಕೀಲರ ದೊಡ್ಡ ದಂಡೆ ಸಮುದ್ರ ತೀರದಲ್ಲಿ ನೆರೆದಿರುತ್ತದೆ. ಕ್ಯೂಬಾ ಸೌಹಾರ್ದ ಚಳುವಳಿ ಇಡೀ ಜಗತ್ತಿನಲ್ಲಿ ನಾನಾ ರೀತಿಯಲ್ಲಿ ನಡೆಯುತ್ತಿದೆ.

□

ಜಗದಗಲ


ಶರತ್‌ಚಂದ್ರ

'ಇರಾಕ್ ಸಾರ್ವಭೌಮತೆಯ ದಿನ'ದಂದೇ ರಾಷ್ಟ್ರೀಯ ತೈಲ ಸಂಪತ್ತು ಹರಾಜು

ಇರಾಕ್ ಸರ್ಕಾರ 'ಸಾರ್ವಭೌಮತೆಯ ದಿನ' ಅಮೆರಿಕದ ಮಿಲಿಟರಿ ಪಡೆಗಳ ಬಗೆಗ ಮಾತ್ರ 'ಕಪಟ ನಾಟಕ' ಆಡಿದ್ದಲ್ಲ. ಅಂದೇ ಇರಾಕಿನ ಇನ್ನೂ ಹೊಂಚದ ಅಗಾಧ ತೈಲ ಮತ್ತು ಗ್ಯಾಸ್ ಸಂಪತ್ತನ್ನು ಸಹ ಅಂದೇ ಅಮೆರಿಕನ್ ಕಂಪನಿಗಳಿಗೆ ಮೂರು ಕಾಸಿಗೆ ಹರಾಜು ಹಾಕಿದರು. ಇರಾಕ್ ನ ಇನ್ನೂ ಹೊಂಚದ ಸುಮಾರು 115 ಶತಕೋಟಿ ಬ್ಯಾರೆಲ್ ತೈಲದಲ್ಲಿ ಸರ್ಕಾರ ಆಗಲೇ 43 ಶತಕೋಟಿ ಬ್ಯಾರೆಲ್ ತೈಲ ನಿಕ್ಷೇಪಗಳನ್ನು ವಿದೇಶೀ (ಮುಖ್ಯವಾಗಿ ಅಮೆರಿಕನ್) ಕಂಪನಿಗಳಿಗೆ ಹರಾಜು ಹಾಕಿದೆ. ಇರಾಕಿನ ಜನತೆ ದೇಶದ ತೈಲ ಮತ್ತು ಗ್ಯಾಸ್ ಸಂಪತ್ತನ್ನು ವಿದೇಶೀ ಕಂಪನಿಗಳಿಗೆ ಕೊಡುವುದನ್ನು ಬಲವಾಗಿ ವಿರೋಧಿಸುತ್ತಾರೆ. ಅದು ದೇಶದ ಸಾರ್ವಭೌಮತೆಗೆ ಧಕ್ಕೆ ತರುತ್ತದೆ ಎಂದು ಭಾವಿಸುತ್ತಾರೆ. ಇರಾಕ್ 1953 ರಲ್ಲಿ ದೇಶದ ತೈಲ ಸಂಪತ್ತನ್ನು ರಾಷ್ಟ್ರೀಕರಿಸಿದ ಮೊದಲ ದೇಶವಾಗಿತ್ತು. ಆದ್ದರಿಂದಲೇ ಅಮೆರಿಕ ಮತ್ತು ಯುರೋಪಿಯನ್ ಸಾಮ್ರಾಜ್ಯಶಾಹಿ ದೇಶಗಳ ಸರ್ಕಾರಗಳಿಗೆ ಇರಾಕ್ ಅಂದರೆ ಕಿರಿಕಿರಿ.

ತೈಲ ಕಂಪನಿಗಳ ಕಾರ್ಮಿಕರ ಯೂನಿಯನ್‌ಗಳು ತೈಲ ಮತ್ತು ಗ್ಯಾಸ್ ಸಂಪತ್ತನ್ನು ವಿದೇಶೀ ಕಂಪನಿಗಳಿಗೆ ಕೊಡುವುದನ್ನು ಬಲವಾಗಿ ವಿರೋಧಿಸಿ ಮುಷ್ಕರ ಸಹ ಹೂಡಿದ್ದಾರೆ. ಆದ್ದರಿಂದ ಸರ್ಕಾರ ಸಾರಾಸಗಟು ಹರಾಜು ತಡೆಯುವುದು ಸಾಧ್ಯವಾಗಿದೆ. ಆದರೆ ಸರ್ಕಾರದ ತೈಲ ನೀತಿಯ ಪ್ರಕಾರ ತೈಲ ನಿಕ್ಷೇಪಗಳ ಒಡೆತನದಲ್ಲಿ 20 ವರ್ಷಗಳ ಕಾಲ ಮುಕ್ಕಾಲು ಬಾಗ ಪಾಲು ವಿದೇಶೀ ಕಂಪನಿಗಳಿಗೆ ಕೊಟ್ಟಿದೆ. ಇರಾಕ್ ಬಳಿ ತೈಲ ಸಂಸ್ಕರಣಕ್ಕೆ ಬೇಕಾದ ತಂತ್ರಜ್ಞಾನ ಮತ್ತು ತಾಂತ್ರಿಕ ಸಿಬ್ಬಂದಿ ಇರುವುದರಿಂದ ವಿದೇಶೀ ಕಂಪನಿಗಳ ಯಾವುದೇ ರೀತಿಯ ಬೆಂಬಲದ ಅಗತ್ಯ ಇಲ್ಲ. ಹಾಗಿರುವಾಗ 'ಸಾರ್ವಭೌಮತೆ'ಯ ಬಗ್ಗೆ ಮಾತನಾಡುವ ಸರ್ಕಾರ ಇಂತಹ ನೀತಿ ಏಕೆ ಹೊಂದಿದೆ ಎಂದು ಜನ ಪ್ರಶ್ನಿಸುತ್ತಿದ್ದಾರೆ. ಅಲ್ಲದೆ ಕುರ್ದಿಶ್ ಪ್ರಾದೇಶಿಕ ಸರ್ಕಾರ ನೇರವಾಗಿ ವಿದೇಶೀ ಕಂಪನಿಗಳಿಗೆ ತೈಲ ನಿಕ್ಷೇಪಗಳ ಒಡೆತನ ಹರಾಜು ಹಾಕುವುದನ್ನು ತಡೆಯುವುದರಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ ಎನ್ನುತ್ತಾರೆ ಜನ.

ಇರಾಕಿ ಸರ್ಕಾರ ಅಮೆರಿಕನ್ ಸರ್ಕಾರ ಮತ್ತು ಮಿಲಿಟ್ಟರಿಯ ಕೈಗೊಂಬೆ ಎಂದು ಎಲ್ಲರಿಗೂ ಗೊತ್ತು. ಇರಾಕಿ ಜನತೆಗೆ ಪ್ರಜಾಪ್ರಭುತ್ವ, ಭದ್ರತೆ, ಸ್ವಾತಂತ್ರ್ಯ ಕೊಡಿಸುವ ಹೆಸರಲ್ಲಿ ಅದನ್ನು ನಾಶ ಮಾಡಿದೆ. ಅವರ



ನಿಜವಾದ ಉದ್ದೇಶ ಇದ್ದಿದ್ದು ತೈಲ ಸಂಪತ್ತಿನ ವಶ ಮತ್ತು ಲೂಟಿ ಎಂಬುದು ಇದರಿಂದ ಸ್ಪಷ್ಟವಾಗಿದೆ. ಅಮೆರಿಕದ ಮಿಲಿಟರಿ ದಾಳಿ ಮತ್ತು ಆಂತರಿಕ ಕಲಹದಿಂದ ಆದ ವ್ಯಾಪಕ ವಿನಾಶದಿಂದ, ಇರಾಕ್ ಇಂದು ಭೀಕರ ಆಂತರಿಕ ನಿರಾಶ್ರಿತರ ಬಿ... ಎದುರಿಸುತ್ತಿದೆ. ಮಾರ್ಚ್ 2003 ರ ಅಮೆರಿ... ದಾಳಿ ನಂತರ 47 ಲಕ್ಷಕ್ಕೂ ಹೆಚ್ಚು ಇರಾಕಿ... ನಿರಾಶ್ರಿತರಾಗಿದ್ದಾರೆ. 1948 ರ ನಂತರ ... ಪ್ರದೇಶದಲ್ಲಿ ಇದು ಅತಿ ದ... ನಿರಾಶ್ರಿತರ ಬಿಕ್ಕಟ್ಟು ... ಲಾಗಿದೆ. ಅವರ ಪುನರ್ವ... ಬಗ್ಗೆ ಇರಾಕಿ ಅಥವಾ ಅಮೆ... ಮಿಲಿಟರಿ ಸರ್ಕಾರ ... ಬೆರಳನ್ನು ಎತ್ತಿಲ್ಲ. ದೊ... ಪ್ರಮಾಣದಲ್ಲಿ ಇರಾ... ವಿದೇಶಗಳಿಗೆ ವ... ಹೋಗುತ್ತಿದ್ದಾರೆ. ಅಮೆ... ಪಡೆಗಳು ಇದ್ದಾಗ ಆಗ... ಅವರ 'ನಿರ್ಗಮನ'ದ ನ... ವಾಗಲಿ ಭದ್ರತೆ ಶಾ... ನೆಲೆಸೀತು ಅಂತ ಯಾರಿಗೂ ಭರವಸೆ ... ಒಬಾಮಾರ ಎಲ್ಲಾ ಜಾಣ ಮಾತುಗಳು ... ಇರಾಕಿ ಸರ್ಕಾರದ 'ಕಪಟ ನಾಟಕ' ಈ ಭ... ವಾಸ್ತವವನ್ನು ಬದಲಾಯಿಸಲು ಸಾಧ್ಯವಿಲ್ಲ.

....ಕರಾವಳಿ ಈಗ ಕೈಗಾರಿಕಾ ಮರುಭೂಮಿ

ಪುಟ 6 ರಿಂದ

ಕರಾವಳಿಯಲ್ಲಿ ಇಲ್ಲವೇ ಇಲ್ಲ. ಎಂ.ಸಿ.ಎಫ್. ಕೂಡ ಈಗ ರೋಗಗ್ರಸ್ಥ ಘಟಕವಾಗಿದೆ.

ಇನ್ನೊಂದೆಡೆ ಇತ್ತೀಚೆಗೆ ಕೊಜೆಂಟ್ರಿಕ್ಸ್ ಮತ್ತು ನಾಗಾರ್ಜುನ ವಿದ್ಯುತ್ ಯೋಜನೆಗಳು ಬಂದಿದ್ದರೂ ಅದಕ್ಕೆ ಒಂದೆಡೆ ಸರ್ಕಾರಗಳ ಪಾರದರ್ಶಕತೆಯ ಕೊರತೆ ಇದೆ. ಮತ್ತೊಂದೆಡೆ ಪರಿಸರವಾದಿಗಳ ವಿರೋಧ ವ್ಯಕ್ತವಾಗುತ್ತಿವೆ. ಜೊತೆಗೆ ಮಂಗಳೂರು ತೈಲಾಗಾರ ಮತ್ತು ಇನ್ಫೋಸಿಸ್ ಜಿಲ್ಲೆಯಲ್ಲಿ ಬಂದಿದ್ದರೂ ಅವುಗಳಿಂದ ಹೇರಳವಾದ ಉದ್ಯೋಗಾವಕಾಶಗಳು ಲಭ್ಯವಾಗುವುದಿಲ್ಲ. ಕೇಂದ್ರ ಸರ್ಕಾರ ವಿಶೇಷ ಆರ್ಥಿಕ ವಲಯವನ್ನು (ಎಸ್‌ಸಿರುಝಡ್) ಮಂಗಳೂರಿನಲ್ಲಿ ಸ್ಥಾಪಿಸಲು ಮುಂದಾಗಿದೆ. ಆದರೆ ಅದು ಸಂಪೂರ್ಣ ರಫ್ತು ಆಧಾರಿತ ವಲಯ. ಅಲ್ಲದೆ ಇದು ರೈತರ ಭೂಮಿ ಕಬಳಿಸುತ್ತಿದೆ ಎನ್ನುವ ಕಾರಣದಿಂದ ಪ್ರತಿಭಟನೆಗಳು ನಡೆದಿವೆ. ಅಲ್ಲದೆ ಎಸ್‌ಸಿರುಝಡ್‌ನಲ್ಲಿ ಯಾವುದೇ ಕಾರ್ಮಿಕ ಕಾನೂನುಗಳು ಅನ್ವಯವಾಗುವುದಿಲ್ಲ. ಇದು ಸಂಪೂರ್ಣ ರಫ್ತು ಆಧಾರಿತವಾದ್ದರಿಂದ ಇಲ್ಲಿ ಸ್ಥಳೀಯ ಆರ್ಥಿಕ ಚಟುವಟಿಕೆಗೇನೂ ಪ್ರೋತ್ಸಾಹವಿಲ್ಲ. ಇದೇ ಸಮಯದಲ್ಲಿ ಸಂಸತ್ತಿನಲ್ಲಿ ದಕ್ಷಿಣ ಕನ್ನಡದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಪಿಸಿಪಿಐಆರ್ (ಪೆಟ್ರೋ ಕೆಮಿಕಲ್ಸ್ ಸಂಬಂಧಿಸಿದ) ಬೃಹತ್ ಯೋಜನೆ ಮಂಜೂರಾತಿಗಾಗಿ ಕಾದಿದೆ ಎಂದು ಗೊತ್ತಾಗಿದೆ. ನಮಗೆ ದೊರೆತಿರುವ ಮಾಹಿತಿ ಪ್ರಕಾರ ಇದು ಜಿಲ್ಲೆಯಲ್ಲಿ ಸ್ಥಾಪನೆಯಾದರೆ ಅದಕ್ಕೆ ಸುಮಾರು 300 ಚದರ ಮೈಲಿ ಭೂಪ್ರದೇಶ ಬೇಕಾಗುತ್ತದೆ (ಅಂದರೆ ದಕ್ಷಿಣ ಕನ್ನಡ ಜಿಲ್ಲೆಯ ಅರ್ಧದಷ್ಟು ಭೂಮಿ) ಅಲ್ಲದೆ ಈ ಯೋಜನೆಯ ಒಂದು ಸಕಾರಾತ್ಮಕ ಅಂಶವೆಂದರೆ ಈ ಯೋಜನೆಯು ಎಸ್‌ಸಿರುಝಡ್ ವಲಯದ ರೀತಿ ನಿರ್ಬಂಧಿತವಾಗಿರುವುದಿಲ್ಲ (ಗೋಡೆಯಿರುವುದಿಲ್ಲ) ಈ ಯೋಜನೆಯ ನಡುವೆಯೇ ಕೃಷಿ, ವಾಣಿಜ್ಯ, ವಿವಿಧ ಉದ್ಯೋಗಗಳನ್ನು ನಡೆಸಲು ಅವಕಾಶವಿದೆ ಎಂದು ತಿಳಿದು ಬಂದಿದೆ. ಇದು ಜಿಲ್ಲೆಯಲ್ಲಿ ಆರ್ಥಿಕ ಚಟುವಟಿಕೆಗೆ ಸಹಾಯವಾಗಬಹುದೆಂಬ ಅಂದಾಜಿದೆ. ಆದರೆ ಇಷ್ಟರಿಂದಲೇ ಎಲ್ಲವನ್ನೂ ನಿರ್ಧರಿಸಲು ಸಾಧ್ಯವಿಲ್ಲ. ಇದರ ವೈಜ್ಞಾನಿಕ ಅಂಶಗಳ ಅಧ್ಯಯನ ಕೂಡ ಆಗಬೇಕು.

ಜನಶಕ್ತಿ : ಕರಾವಳಿಯಲ್ಲಿ ಒಟ್ಟಾರೆ ಉಂಟಾಗುತ್ತಿರುವ ಈ ಬಿಕ್ಕಟ್ಟು ನಿರುದ್ಯೋಗವನ್ನುಂಟುಮಾಡುತ್ತಿದೆ. ಅದರ ಪರಿಣಾಮವಾಗಿ ಇಡೀ ಕರಾವಳಿ ಪ್ರದೇಶ, ಭೂಗತ ಚಟುವಟಿಕೆ, ಛಿದ್ರಕಾರಿ ಮತ್ತು ಕೋಮುವಾದಿಗಳ ತಾಣವಾಗಿದೆ. ಇದನ್ನು ತಡೆಯಲು ಕಾರ್ಮಿಕ ಚಳುವಳಿ ಮುಂದಿನ ಕಾರ್ಯಕ್ರಮಗಳೇನು?

ಮಾಧವ : ಹೌದು ಕರಾವಳಿಯ ಕಾರ್ಮಿಕ ಚಳುವಳಿ ಮಾತ್ರವಲ್ಲ ಎಲ್ಲಾ ಪ್ರಗತಿಪರ ಚಳುವಳಿಯ ಮುಂದೆ ಇಂತಹದೊಂದು ಸಮಸ್ಯೆ ಎದುರಾಗಿದೆ. ಮುಖ್ಯವಾಗಿ ಕರಾವಳಿ ಜನರ ಬದುಕನ್ನು ರಕ್ಷಿಸುವಂತಹ ಚಳುವಳಿಯನ್ನು ನಾವು ಹಮ್ಮಿಕೊಳ್ಳಬೇಕಿದೆ. ವಿಶೇಷವಾಗಿ ನಿರುದ್ಯೋಗಿ ಯುವಜನರನ್ನು ಬಳಸಿ ಈ ಎಲ್ಲಾ ಛಿದ್ರಕಾರಿ ಮತೀಯವಾದಿ ಚಟುವಟಿಕೆಗಳು ನಡೆಯುತ್ತಿದೆ. ಪರ್ಯಾಯವಾದ ಉದ್ಯೋಗಾವಕಾಶಗಳಿಗಾಗಿ ಮತ್ತು ಜನಪರವಾದ ಅಭಿವೃದ್ಧಿಗಾಗಿ ನಾವು ಚಳುವಳಿಗಳನ್ನು ಮ... ಸರ್ಕಾರಗಳು ಈ ದಿಶೆಯ... ಕಾರ್ಯೋನ್ಮುಖರಾಗುವಂತೆ ಮಾಡಬೇ... ಜಿಲ್ಲೆಯಲ್ಲಿ ಸಾಕಷ್ಟು ಸಣ್ಣ, ಸಣ್ಣ ಹೈಡ್ರೋ ಎಲ... ಯೋಜನೆಗಳಿಗೆ ಅವಕಾಶಗಳಿವೆ. ಆ ದಿಸೆಯಲ್ಲಿ ... ಚಳುವಳಿಗಳನ್ನು ನಡೆಸುತ್ತ ಜನರನ್ನು ಅದ... ಪಾಲ್ಗೊಳಿಸುತ್ತಾ ಆ ಮೂಲಕ ಮೇಲ್ಕಂಡ ... ಛಿದ್ರಕಾರಿ, ಕೋಮುವಾದಿ, ಭ... ಚಟುವಟಿಕೆಗಳಿಂದ ಜನರನ್ನು ವಿಶೇಷ... ಯುವಜನರನ್ನು ದೂರ ಮಾಡಬೇಕಿದೆ.

ಸಂಗಾತಿಗಳ ಸಾಂಗತ್ಯ



ವಿದ್ಯಾರ್ಥಿ ಚಳುವಳಿಯ ಮಾಜಿ ಮುಖಂಡರು ಹಾಗೂ ಹಾಲಿ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಒಕ್ಕೂಟದ ಮುಖಂಡರು ಆದ ಕಾಂ: ಮಾಲಿನಿ ಮೇಸ್ತಾ, ಸಿಐಟಿಯು ರಾಜ್ಯ ಸಮಿತಿ ಸದಸ್ಯರಾದ ಕಾಂ:ಶರಣ ಬಸವ ಮರದ್ ಅವರ ಮದುವೆಯ... ಜುಲೈ 20, 2009 ರಂದು ಗದಗ ಜಿಲ್ಲೆಯ ರೋಣದಲ್ಲಿ ನಡೆಯಿತು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ... ಮಂಡಳಿ ಸದಸ್ಯ ನಿತ್ಯಾನಂದಸ್ವಾಮಿ, ಸಿಐಟಿಯು ರಾಜ್ಯ ಕಾರ್ಯದರ್ಶಿ ಎಸ್.ವರಲಕ್ಷ್ಮಿ, ಶಿರೂರು ಮಹಾಂತ ತೀರ್ಥ ಸ್ವಾಮೀಜಿ, ಸ್ವಾತಂತ್ರ್ಯ ಹೋರಾಟಗಾರರಾದ ವಿರೂಪಾಕ್ಷಪ್ಪ ಅಬ್ಬಿಗೇರಿ ರವರುಗಳ... ಸರಳ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಯುವ ಜೋಡಿಗೆ ಜನಶಕ್ತಿಯ ಶುಭಾಶಯಗಳು

ಬೆಲೆ ಏರಿಕೆಯ ಶಾಕ್ ಥೆರಪಿ.....

ಪುಟ 9 ರಿಂದ

...ಡಿದ್ದ ಹಣಕಾಸು ನೆರವಿನ ಋಣ ತೀರಿಸುತ್ತಿದೆ. ಬಿಕ್ಕಟ್ಟು ಆರಂಭವಾದಾಗಿನಿಂದ ಖಾಸಗಿ ಕಂಪನಿಗಳಿಗೆ ಯುಪಿಎ ಸರ್ಕಾರ ನೀಡುತ್ತಾ ಬಂದಿರುವ ಪ್ರಮುಖ ತೆರಿಗೆ ವಿನಾಯಿತಿಗಳೆಂದರೆ: ಎಸ್‌ಇಜೆಡ್ ಮತ್ತು ಎಸ್‌ಟಿಪಿಐ ಗಳಲ್ಲಿ ಸ್ಥಾಪಿಸುವ ಕೈಗಾರಿಕೆಗಳಿಗೆ ನೀಡಿರುವ ತೆರಿಗೆ ರಜೆಯಿಂದ ಸುಮಾರು ರೂ. 68,000ಕೋಟಿ, 2008-09ರಲ್ಲಿ ನೀಡಿರುವ ಅಬಕಾರಿ ಸುಂಕ ವಿನಾಯಿತಿಯಿಂದ ರೂ. 1,28,000 ಕೋಟಿ. ಇವು ನೇರ ವಿನಾಯಿತಿಗಳಾದರೆ, ಇದಕ್ಕೂ ಮೀರಿದ ಪರೋಕ್ಷ ತೆರಿಗೆ ವಿನಾಯಿತಿಗಳೂ ಇವೆ.

ಸರ್ಕಾರ ನೀಡಿದ ತೆರಿಗೆ ಬಳುವಳಿಯನ್ನು ತಮ್ಮ ಬಗಲಿಗೆ ಹಾಕಿಕೊಂಡ ಖಾಸಗಿ ಕಂಪನಿಗಳು ಆ ವಿನಾಯಿತಿಯ ಪಾಲನ್ನು ತಮ್ಮ ಗ್ರಾಹಕರಿಗೆ ವರ್ಗಾಯಿಸುವುದಿಲ್ಲ. ಆದ್ದರಿಂದ ಇಂತಹ ತೆರಿಗೆ ವಿನಾಯಿತಿ ನೀಡಿ ಖಾಸಗಿ ಕಂಪನಿಗಳ ಲಾಭವನ್ನು ಹೆಚ್ಚಿಸುವುದರ ಬದಲು ಸರ್ಕಾರ ನೇರವಾಗಿ ಜನರಿಗೆ ತಲುಪಬಲ್ಲ ಯೋಜನೆಗಳಾದ ಸಾರ್ವತ್ರಿಕ ಪಡಿತರ ವ್ಯವಸ್ಥೆಯ ಬಲವರ್ಧನೆ, ಬಿಸಿಯೂಟ, ಅಸಂಘಟಿತ ಕಾರ್ಮಿಕರ ಕಲ್ಯಾಣ ಅಭಿವೃದ್ಧಿ, ಉದ್ಯೋಗವಕಾಶಗಳನ್ನು ಹೆಚ್ಚಿಸಬಲ್ಲ ಉದ್ಯೋಗ ಖಾತರಿಯಂತಹ ಯೋಜನೆಯನ್ನು ನಗರ ಪ್ರದೇಶಕ್ಕೆ ವಿಸ್ತರಿಸುವುದು, ಇತ್ಯಾದಿಗಳ ಮೂಲಕ ಹಮ್ಮಿಕೊಳ್ಳಬೇಕೆಂಬುದು ಸಿಪಿಐ(ಎಂ) ಪಕ್ಷದ ಒತ್ತಾಯವಾಗಿತ್ತು. ಆದರೆ ಯುಪಿಎ ಸರ್ಕಾರ ಇಂತಹ ಜನ-ಪರ ಯೋಜನೆಗಳಿಗೆ ಮೂರು ಕಾಸಿನ ಅನುದಾನವನ್ನು ಮಾತ್ರವೇ ನಿಗದಿಪಡಿಸಿ ದುಡಿಯುವ ಜನತೆಯ ಮೂಗಿಗೆ ತುಪ್ಪ ಸವರುವ ಯತ್ನ ಮಾಡಿತು. ಬೆಲೆಯೇರಿಕೆ ಕುರಿತಂತೆ ಸಂಪೂರ್ಣ ನಿರ್ಲಕ್ಷ್ಯ ತೋರಿರುವ ಸರ್ಕಾರ ಯುದ್ಧ ವಿಮಾನಗಳನ್ನು ಸಾಗಿಸುವ ಹಡಗನ್ನು ರಷ್ಯಾದಿಂದ ಖರೀದಿಸಲು ಅಸಲಿ ಬೆಲೆಗಿಂತ ಇಪ್ಪತ್ತು ಪಟ್ಟು ವೆಚ್ಚ ಭರಿಸಿದೆ. ಹೀಗೆ ಆರ್ಥಿಕ ಬಿಕ್ಕಟ್ಟಿನ ಸುನಾಮಿಯ ಜೊತೆಗೆ ಸರ್ಕಾರದ ಖಾಸಗಿ ಕಂಪನಿ-ಪರ ನೀತಿಗಳು ಸಹ ಸೇರಿಕೊಂಡು ಉದ್ಯೋಗಗಳನ್ನು ಕಳಕೊಂಡವರು ಬೆಲೆಯೇರಿಕೆಯ ಬಿಸಿಯಿಂದ ನರಳುವಂತಾಗಿದೆ.

ಸರಕುಗಳ ಮುಂಗಡ ವ್ಯಾಪಾರ (ಫಾರ್ವರ್ಡ್ ಟ್ರೇಡಿಂಗ್) ಎಂಬ ಜೂಜಾಟ:

ಮುಂಗಡ ವ್ಯಾಪಾರ ಕಾಯಿದೆ, 1952ರ ಪ್ರಕಾರ ಬಹುತೇಕ ಎಲ್ಲ ಸರಕುಗಳ ಮುಂಗಡ ವ್ಯಾಪಾರವನ್ನು ನಮ್ಮ ದೇಶದಲ್ಲಿ ಮುಂಚಿನಿಂದಲೂ ನಿಷೇಧಿಸಲಾಗಿತ್ತು. ಆದರೆ ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ 2003ರಲ್ಲಿ ಸುಮಾರು 54 ಸರಕುಗಳನ್ನು ಮುಂಗಡ ವ್ಯಾಪಾರಕ್ಕೆ ಅವಕಾಶ ಕಲ್ಪಿಸಿತ್ತು. ನಂತರ ಗಗನಕ್ಕೇರಿದ ಬೆಲೆ ತಗ್ಗಿಸಲು ಎಡಪಕ್ಷಗಳು ನಿರಂತರ ಒತ್ತಡ ಹೇರಿದ್ದವು. ಆದರೆ ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದ ಮೇಲಷ್ಟೆ ಎಡಪಕ್ಷಗಳ ಒತ್ತಾಯದಿಂದ ಕೇವಲ 4 ವಸ್ತುಗಳನ್ನು (ಅಕ್ಕಿ, ಗೋಧಿ, ತೊಗರಿ ಬೇಳೆ, ಮತ್ತು ತೊಗರಿ ಬೇಳೆ) ಮುಂಗಡ ವ್ಯಾಪಾರದ ಪರಿಧಿಯಿಂದ ಆಚೆ ಇರಿಸಿತು. ವಿಶೇಷ ಪರಿಣಿತರ ಸಮಿತಿಯೂ ಕೂಡ ಸರಕುಗಳ ಮುಂಗಡ ವ್ಯಾಪಾರವು ಅಗತ್ಯ ವಸ್ತುಗಳ ಬೆಲೆಯೇರಿಕೆಗೆ ಕಾರಣವೆಂದು ಅಭಿಪ್ರಾಯ ವ್ಯಕ್ತಪಡಿಸಿತ್ತು. 2003-04ರಲ್ಲಿ ಸುಮಾರು ರೂ. 1,60,000 ಕೋಟಿ ವಹಿವಾಟು ಮುಂಗಡ ವ್ಯಾಪಾರ ಮಾರುಕಟ್ಟೆಯಲ್ಲಿ ನಡೆದಿತ್ತು. ಕಳೆದ ವರ್ಷದ ಜೂನ್ ತಿಂಗಳೊಂದರಲ್ಲೇ ಈ ವಹಿವಾಟು ರೂ. 2,21,000 ಕೋಟಿಯಿದ್ದದ್ದು, ಮೊನ್ನೆಯ ಜೂನ್ ತಿಂಗಳೊಂದರಲ್ಲೇ ರೂ. 15,64,000 ಕೋಟಿ ವಹಿವಾಟು ನಡೆದಿದೆ. ಇಷ್ಟೊಂದು ಬೃಹತ್ ಪ್ರಮಾಣದ ಮುಂಗಡ ವ್ಯಾಪಾರ ವಹಿವಾಟು ವಾಸ್ತವ ಉತ್ಪನ್ನದ ಮಟ್ಟವನ್ನೇ ಹಲವು ಪಟ್ಟು ಮೀರುತ್ತದೆ. ಇಂತಹ ಲಾಭ ಅರಸುವ ಬಂಡವಾಳಕ್ಕೆ ಲಾಭ ಸಿಗಬೇಕಾದರೆ ಸಾಮಾನ್ಯ ಸರಕುಗಳ ಬೆಲೆಯೇರಿಕೆಯಿಂದ ಮಾತ್ರವೇ ಸಾಧ್ಯ.

ಇದು ಷೇರು ಮಾರುಕಟ್ಟೆ ರೀತಿಯ ಜೂಜಾಟವಾಗಿದ್ದು, ಷೇರು ಮಾರುಕಟ್ಟೆಯಲ್ಲಿ ಕಂಪನಿಗಳ ಷೇರುಗಳ ಮೇಲೆ ಜೂಜು ನಡೆದರೆ, ಮುಂಗಡ ವ್ಯಾಪಾರ ಮಾರುಕಟ್ಟೆಯಲ್ಲಿ ಅಕ್ಕಿ, ಕಬ್ಬಿಣ, ಇತ್ಯಾದಿಯಂತಹ ವಸ್ತುಗಳ ಜೂಜು ನಡೆಯುತ್ತದೆ. ಮಾಮೂಲಿಯಾಗಿ ಜನರು ಆಡುವ ಇಸ್ಪೀಟು, ಕುದುರೆ ರೇಸು, ಇತ್ಯಾದಿಯಂಥಹ ಜೂಜಾಟಗಳಲ್ಲಿ ಜೂಜಿನಲ್ಲಿ ಪಾಲ್ಗೊಳ್ಳುವವ ಮಾತ್ರ ನಷ್ಟಗೊಂಡರೆ, ಇಂತಹ ವಸ್ತು ವಿನಿಮಯ ಮಾರುಕಟ್ಟೆಯಲ್ಲಿ ನಡೆಯುವ ಜೂಜಿನಿಂದ ಜೂಜುಕೋರರಲ್ಲದೆ ಸಾಮಾನ್ಯ ಬೆಳೆಗಾರರು ಮತ್ತು ಗ್ರಾಹಕರು ತೀವ್ರತರದಲ್ಲಿ ಸಂಕಷ್ಟಕ್ಕೀಡಾಗುತ್ತಾರೆ. ಏಕೆಂದರೆ, ಇಂತಹ ಜೂಜಿನಲ್ಲಿ ತೊಡಗಿರುವವರು ಸಾಮಾನ್ಯ ವ್ಯಕ್ತಿಗಳಾಗಿರದೆ ಹಲವು ದೇಶಗಳ ಬಜೆಟ್‌ಗಿಂತ ಹೆಚ್ಚಿನ ಲಾಭ ಹೊಂದಿರುವ ದೈತ್ಯ ಬಹುರಾಷ್ಟ್ರೀಯ ಕಂಪನಿಗಳು. ಇಂತಹ ಕಂಪನಿಗಳು ಅಗಾಧ ಪ್ರಮಾಣದಲ್ಲಿ ಸರಕುಗಳನ್ನು ಕೊಂಡು ಸಂಗ್ರಹಿಸಿಟ್ಟುಕೊಳ್ಳುವುದರಿಂದ ಸಾಮಾನ್ಯ ಜನತೆ ಹಲವು ಸಲ ಅತ್ಯವಶ್ಯ ವಸ್ತುಗಳು ಸುಲಭ ದರದಲ್ಲಿ ದೊರೆಯದೆ ಸಂಕಷ್ಟಕ್ಕೀಡಾಗುತ್ತಾರೆ. ಸಟ್ಟಾಕೋರರು ಲಾಭಗಳಿಸುವ ಸಲುವಾಗಿಯೇ ಅತ್ಯವಶ್ಯ ವಸ್ತುಗಳನ್ನು ಸರ್ಕಾರ ಮುಂಗಡ ವ್ಯಾಪಾರ ಮಾರುಕಟ್ಟೆಯಲ್ಲಿ ವ್ಯಾಪಾರ ನಡೆಸಲು ಅವಕಾಶ ಕಲ್ಪಿಸಿದೆ.

ಆಹಾರ ಕಸಿಯಲು ಬರುತ್ತಿದೆ, ಆಹಾರ ಭದ್ರತೆ ಕಾಯಿದೆ :

ಸರ್ಕಾರದ ಅಧಿಕೃತ ಸಮೀಕ್ಷೆಯಂತೆ ದೇಶದಲ್ಲಿ ಶೇ. 77ರಷ್ಟು ಜನತೆ ದಿನವೊಂದಕ್ಕೆ ರೂ. 20ಕ್ಕಿಂತಲೂ ಕಡಿಮೆ ಆದಾಯ ಗಳಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಬಹುಸಂಖ್ಯಾತ ಜನತೆ ಹಸಿವಿನಿಂದ ಬಳಲುತ್ತಿರುವುದರಿಂದ ಎಲ್ಲರಿಗೂ ಲಭ್ಯವಾಗುವ ಹಾಗೆ ಆಹಾರ ಭದ್ರತೆ ಒದಗಿಸಲು ಸಾರ್ವತ್ರಿಕ ಪಡಿತರ ಪದ್ಧತಿ ಜಾರಿಗೆ ತರಲು ಒತ್ತಾಯವಿದೆ. ಆದರೆ, ಸರ್ಕಾರ ಇದರ ಬದಲು ಹಸಿದ ಹೊಟ್ಟೆಗಳಿಂದ ಆಹಾರ ಕಸಿಯಲು ಹೊಸ ಆಹಾರ ಭದ್ರತೆ ಕಾಯಿದೆಯನ್ನು ಜಾರಿಗೆ ತರಲು ಹೊರಟಿದೆ. ಉದಾಹರಣೆಗೆ ಬಿಪಿಎಲ್ ಮತ್ತು ಅಂತ್ಯೋದಯ ಕಾರ್ಡುದಾರರಿಗೆ ಈಗ ಲಭ್ಯವಿರುವ ತಿಂಗಳಿಗೆ ಕುಟುಂಬವೊಂದಕ್ಕೆ 35ಕೆಜಿ ಧಾನ್ಯಕ್ಕೆ ಬದಲಾಗಿ ಕೇವಲ 25ಕೆಜಿ ಧಾನ್ಯ ನೀಡಲಾಗುತ್ತದೆ, ಅದೂ ಹೆಚ್ಚಿನ ಬೆಲೆ ವಿಧಿಸುತ್ತದೆ. ಇದರಿಂದ ವಾಸ್ತವವಾಗಿ ಹಸಿದ ಹೊಟ್ಟೆಗಳಿಂದ ಅನ್ನ ಕಸಿಯುವ ಮೂಲಕ ಸರ್ಕಾರ ಸುಮಾರು ರೂ. 4,000 ಕೋಟಿ ಉಳಿತಾಯ ಮಾಡುತ್ತದೆ. ಹೀಗೆ ಉಳಿತಾಯ ಮಾಡಿದ ಹಣವನ್ನು ಖಾಸಗಿ ಕಂಪನಿಗಳಿಗೆ ತೆರಿಗೆ ವಿನಾಯಿತಿ ನೀಡಲು ಉಪಯೋಗಿಸಲಾಗುತ್ತದೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಜಾಗತಿಕ ಬೆಲೆಯೇರಿಕೆ ಬಿಸಿ :

ಅತ್ಯವಶ್ಯ ವಸ್ತುಗಳ ಬೆಲೆಯೇರಿಕೆಯ ಬಿಸಿ ನಮ್ಮ ದೇಶವನ್ನು ಮಾತ್ರವೇ ತಟ್ಟುತ್ತಿಲ್ಲವಾದರೂ, ಜಾಗತಿಕ ಮಟ್ಟದಲ್ಲಿ ಬೆಲೆಯೇರಿಕೆಗೆ ಪ್ರಧಾನ ಕಾರಣಗಳೆಂದರೆ : ಕೆಲವು ಪ್ರಧಾನ ಕೃಷಿ ಉತ್ಪಾದನಾ ಕ್ಷೇತ್ರದಲ್ಲಿ ಬರ, ಕ್ಷಾಮಗಳು ಭಾರತವೂ ಒಳಗೊಂಡಂತೆ ಎಲ್ಲೆಡೆ ತಾಂಡವವಾಡುತ್ತಿದೆ. ಅಮೇರಿಕಾ ಮತ್ತು ಯೂರೋಪಿನಂಥ ದೇಶಗಳಲ್ಲಿ ಆಹಾರ ಧಾನ್ಯಗಳನ್ನು (ಮುಖ್ಯವಾಗಿ ತೈಲ ಬೆಳೆಗಳನ್ನು) ಜೈವಿಕ ಇಂಧನವನ್ನಾಗಿ ಪರಿವರ್ತಿಸಿ ಕಾರು ಮೋಟಾರುಗಳನ್ನು ನಡೆಸಲು ಪೆಟ್ರೋಲ್‌ಗೆ ಬದಲಿಯಾಗಿ ದುರ್ಬಳಕೆ ಮಾಡಲಾಗುತ್ತಿದೆ. ಹೆಚ್ಚುತ್ತಿರುವ ಮುಂಗಡ ವ್ಯಾಪಾರದಿಂದಾಗಿ ಸಟ್ಟಾಕೋರರು ಕೃತಕವಾಗಿ ಬೆಲೆ ಏರಿಸುತ್ತಿರುವುದು ಮತ್ತೊಂದು ಪ್ರಮುಖ ಕಾರಣ. ಭಾರತದಂಥ ದೇಶಗಳಲ್ಲಿ ಅವಶ್ಯವಾದ ಸೂಕ್ತ ಬೆಂಬಲ ಬೆಲೆ ಸಿಗದಿರುವುದು ಕೂಡ ರೈತರಲ್ಲಿ ಉತ್ಪಾದನೆ ಕುಂಠಿತಗೊಳ್ಳುವುದಕ್ಕೆ ಕಾರಣವಾಗಿದೆ. ಚೀನಾ ಮತ್ತು ಭಾರತದಲ್ಲಿ ಹೆಚ್ಚಿನ ಆಹಾರದ ಬೇಡಿಕೆ ಉಂಟಾಗಿರುವುದು ಕೂಡ ಒಂದು ಕಾರಣವೇ. ಎಡಪಕ್ಷಗಳ ಒತ್ತಾಯದ ಮೇರೆಗೆ ಕಳೆದ ಯುಪಿಎ ಸರ್ಕಾರ ಜಾರಿಗೆ ತಂದಿರುವ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಿಂದಾಗಿ ಕೋಟ್ಯಾಂತರ ಕೃಷಿ ಕೂಲಿಕಾರರು ಮತ್ತು ಗ್ರಾಮೀಣ ಜನತೆಗೆ ವರ್ಷವೊಂದಕ್ಕೆ ಕನಿಷ್ಟ 100 ದಿನ ಕೂಲಿ ದೊರೆತು ಆಹಾರ ಬೇಡಿಕೆ ಉಂಟಾಗಿದೆಯೆಂದು ವಿಶ್ವಬ್ಯಾಂಕ್ ವರದಿಯೊಂದು ತಿಳಿಸಿದೆ.

ಬೆಲೆಯೇರಿಕೆ ಇಳಿಸಲು ಸಿಪಿಐ(ಎಂ) ಮತ್ತು ಇತರೆ ಎಡಪಕ್ಷಗಳ ಒತ್ತಾಯ :


ಸಿಪಿಐ(ಎಂ) ಮತ್ತು ಇತರೆ ಎಡಪಕ್ಷಗಳು ಇನ್ನಿತರ ಸಮಾನ ಮನಸ್ಕ ಪಕ್ಷಗಳೊಂದಿಗೆ ಬೆಲೆಯೇರಿಕೆ ವಿರುದ್ಧ ದೇಶವ್ಯಾಪಿ ಹೋರಾಟಗಳನ್ನು ಕೈಗೆತ್ತಿಕೊಂಡಿವೆ. ಈ ಹೋರಾಟದ ಪ್ರಮುಖ ಬೇಡಿಕೆಗಳೆಂದರೆ : 1. ಸರ್ಕಾರ ಬೇಳೆ ಮತ್ತು ಅಡುಗೆ ಎಣ್ಣೆಗಳನ್ನು ನ್ಯಾಯಬೆಲೆ ಅಂಗಡಿ ಮೂಲಕ ಸಬ್ಸಿಡಿ ದರದಲ್ಲಿ ವಿತರಿಸಬೇಕು. 2. ಪಡಿತರ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸುವ ಸಲುವಾಗಿ ಮೊದಲಿಗೆ ಬಿಪಿಎಲ್ ಕಾರ್ಡುದಾರರ ಸಂಖ್ಯೆಯನ್ನು ವಿಸ್ತರಿಸಬೇಕು ಮತ್ತು ಎಪಿಎಲ್ ಕಾರ್ಡುದಾರರಿಗೂ ನ್ಯಾಯಬೆಲೆ ಅಂಗಡಿಯಲ್ಲಿ ಅತ್ಯವಶ್ಯ ವಸ್ತುಗಳನ್ನು ವಿತರಿಸಬೇಕು. 3. ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯೇರಿಕೆಯನ್ನು ತತ್‌ಕ್ಷಣ ಸರ್ಕಾರ ಹಿಂಪಡೆಯಬೇಕು. 4. ಎಲ್ಲ ಆಹಾರ ಧಾನ್ಯಗಳನ್ನು ಮುಂಗಡ ವ್ಯಾಪಾರ ಮಾರುಕಟ್ಟೆಯ ಪರಿಧಿಯಿಂದ ಆಚೆ ತರಬೇಕು.

ಈ ಹಿನ್ನೆಲೆಯಲ್ಲಿ ಬೆಲೆಯೇರಿಕೆಯಿಂದ ಸುಟ್ಟು ಸುಣ್ಣವಾಗುತ್ತಿರುವ ದುಡಿಯುವ ಜನತೆಯನ್ನು ರಕ್ಷಿಸಲು ಕೇಂದ್ರ ಸರ್ಕಾರ ತಕ್ಷಣದಿಂದ ಜಾರಿಗೆ ಬರುವಂತೆ ಎಲ್ಲ ಆಹಾರ ಧಾನ್ಯಗಳನ್ನು ನ್ಯಾಯಬೆಲೆ ಅಂಗಡಿ ಮೂಲಕ ವಿತರಿಸಲು ಕ್ರಮ ವಹಿಸಬೇಕು. ❑

ಬೆಲೆಯೇರಿಕೆ ಸೂಚ್ಯಂಕಗಳ ರಾಜಕೀಯ

ಹಲವು ವೇಳೆ ನಾವು ನೋಡುತ್ತಿರುವಂತೆ, ನಮ್ಮ ದೇಶದ ಬೆಲೆಯೇರಿಕೆ ಸೂಚ್ಯಂಕಗಳು ಇಳಿಮುಖವಾಗಿದ್ದರೂ, ಕೆಲವೊಮ್ಮೆ ಋಣಾತ್ಮಕ ಮಾಪನದಲ್ಲಿ ಪಾತಾಳ ದಿಕ್ಕಿನಲ್ಲಿ ಚಲಿಸುತ್ತಿದ್ದರೂ, ಹಲವು ಅತ್ಯವಶ್ಯ ವಸ್ತುಗಳ ಬೆಲೆಗಳು ಮಾತ್ರ ಗಗನ ಚುಂಬಿ ಕಟ್ಟಡಗಳಂತೆ ಏರುತ್ತಲೇ ಇರುತ್ತವೆ. ಪಾಪ ಅವೇನೂ ತಾನೆ ಮಾಡ್ಯಾವು, 'ಬಡವ ನೀ ಮಡಗ್ದಂಗಿರು' ಎಂಬ ಉಳ್ಳವರ ನಾಣ್ಣುಡಿಯಂತೆ ಅವುಗಳನ್ನು ಹೇಗೆ ರೂಪಿಸಲಾಗುತ್ತದೋ ಹಾಗೆ ಅವು ತಮ್ಮ ಪಾತ್ರ ವಹಿಸುತ್ತವೆ. ಬೆಲೆಯೇರಿಕೆ ಮಾಪನವಾಗಿ ನಮ್ಮ ದೇಶದಲ್ಲಿ ಪ್ರಮುಖವಾಗಿ ಸಗಟು ಬೆಲೆ ಸೂಚ್ಯಂಕ (wholesale price index) ವನ್ನು ಬಳಸಲಾಗುತ್ತದೆ. ಇದಲ್ಲದೆ ಗ್ರಾಹಕ ಬೆಲೆ ಸೂಚ್ಯಂಕವೂ (consumer price index) ಬೆಲೆಯೇರಿಕೆಯನ್ನು ಸೂಚಿಸಲು ಕೆಲವೊಮ್ಮೆ ಬಳಸಲ್ಪಡುತ್ತದೆ. ಗ್ರಾಹಕ ಬೆಲೆ ಸೂಚ್ಯಂಕದಲ್ಲಿ ಮತ್ತೆ ನಾಲ್ಕು ವಿಧಗಳಿವೆ : 1) ಸಿಪಿಐ - ಕೈಗಾರಿಕಾ ಕಾರ್ಮಿಕರು, 2) ಸಿಪಿಐ - ನಗರ ದೈಹಿಕೇತರ ಕಾರ್ಮಿಕರು 3) ಸಿಪಿಐ- ಕೃಷಿ ಕಾರ್ಮಿಕರು 4) ಸಿಪಿಐ - ಗ್ರಾಮೀಣ ಕೆಲಸಗಾರರು.

ದೊಡ್ಡ ದೇಶಗಳ ಪೈಕಿ ಭಾರತ ಮಾತ್ರವೇ ಸಗಟು ಬೆಲೆ ಸೂಚ್ಯಂಕವನ್ನು ಬೆಲೆಯೇರಿಕೆಗೆ ಮಾಪನವಾಗಿ ಬಳಸುತ್ತಿರುವ ದೇಶ. ಗ್ರಾಹಕನು ಎಷ್ಟು ಬೆಲೆ ತೆತ್ತು ಮಾರುಕಟ್ಟೆಯಲ್ಲಿ ವಸ್ತುಗಳನ್ನು ಕೊಳ್ಳುತ್ತಾನೆ ಎಂಬುದರ ಮೇಲೆ ಆಧರಿಸಿರುವ ಗ್ರಾಹಕ ಸೂಚ್ಯಂಕದಿಂದ ಮಾತ್ರವೇ ಬೆಲೆಯೇರಿಕೆಯ ನೈಜ ಪ್ರಮಾಣ ತಿಳಿಯುತ್ತದೆ. ಹೆಸರೇ ತಿಳಿಸುವಂತೆ ಸಗಟು ಬೆಲೆ ಸೂಚ್ಯಂಕವು ವಸ್ತುಗಳ ಬೆಲೆಯನ್ನು ಸಗಟು ರೂಪದಲ್ಲಿ ತಿಳಿಸುತ್ತದೆಯೇ ಹೊರತು ಗ್ರಾಹಕನೊಬ್ಬ ಎಷ್ಟು ಬೆಲೆ ತೆತ್ತು ವಸ್ತುವೊಂದನ್ನು ಕೊಂಡುಕೊಂಡ ಎಂಬುದರ ಕುರುಹು ನೀಡುವುದಿಲ್ಲ. ಅಲ್ಲದೆ ದುಬಾರಿ ಸೇವೆಗಳ ಪಟ್ಟಿಯಲ್ಲಿ ಸೇರಿಸಬಹುದಾದ ಕರೆಂಟ್ ಬಿಲ್ಲು, ನೀರಿನ ಬಿಲ್ಲು, ಮನೆ ಬಾಡಿಗೆ, ವೈದ್ಯಕೀಯ ವೆಚ್ಚ, ಬಸ್ ಛಾರ್ಜು, ಇತ್ಯಾದಿಗಳನ್ನು ಸಗಟು ಬೆಲೆ ಸೂಚ್ಯಂಕವು ಒಳಗೊಳ್ಳುವುದಿಲ್ಲ. ವಾಸ್ತವದಲ್ಲಿ ಇಂತಹ ದುಬಾರಿ ವೆಚ್ಚಗಳೇ ನಮ್ಮನ್ನು ಸಂಕಷ್ಟಕ್ಕೆ ನೂಕುತ್ತವೆ. ಗ್ರಾಹಕ ಬೆಲೆ ಸೂಚ್ಯಂಕವನ್ನು ಸರಿಯಾದ ಸಮಯಕ್ಕೆ ಪರಿಷ್ಕರಿಸಿ, ಅದರ ಆಧಾರದ ಮೇಲೆ ಬೆಲೆಗಳ ನಿಯಂತ್ರಣಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕಾಗಿದೆ. ಸಗಟು ಬೆಲೆ ಸೂಚ್ಯಂಕವನ್ನು ಪ್ರತಿ ವಾರ ಪ್ರಕಟಿಸಿದರೆ, ಗ್ರಾಹಕ ಸೂಚ್ಯಂಕವನ್ನು ಪ್ರತಿ ತಿಂಗಳು ಪ್ರಕಟಿಸಲಾಗುತ್ತದೆ.





ಸಾಂಸ್ಕೃತಿಕ ಕಲರವ







ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಜೆ.ಎ.ಎಂ. ಸೆಲ್ವಂ ನೇತೃತ್ವದ 'ಜನೋತ್ಸವ' ಹಾಡುಗಾರರಿಂದ ಹಾಡುಗಳು, 'ಎಲ್ ಪಾಪ್ಲೋ' ಎಂಬ ಸ್ಪಾನಿಷ್ ಹಾಡು, 'ಅಬೈಡ್‌ವಿದ್‌ಮಿ' 'ದ ವರ್ಕರ್ಸ್ ಅಂಡ್ ಪೆಸೆಂಟ್ಸ್, ಯುನೈಟೆಡ್ ಇನ್‌ದ ಸ್ಟ್ರಗಲ್' ಮುಂತಾದ ಇಂಗ್ಲೀಷ್ ಹಾಡುಗಳು ಕೇಳುವವರ ಮನಸ್ಸಿನಲ್ಲಿ ಕ್ಯೂಬಾ ಕ್ರಾಂತಿಯ ಸಂಭ್ರಮ ಹೆಚ್ಚಿಸಿದವು. ನಡು ನಡುವೆ ಕವನ ವಾಚನ.

'ಚೇ ಯಾಕೆ... ಎಂದು ಶುರುವಾಗುವ ಕೆ.ನೀಲಾ ಕವನ ಓದಿದವರು ದೂರದರ್ಶನ ಕೇಂದ್ರದ ಹಿರಿಯ ನಿರ್ಮಾಪಕಿ ಎಚ್.ಎನ್. ಆರತಿ. 'ಗೊಂತನ ಮೇರಾ' ಓದಿದವರು ಬರಹಗಾರ್ತಿ ಎನ್.ಗಾಯತ್ರಿ ಜಿ.ಎನ್.ಮೋಹನ್‌ರವರ ಕೆ.ನೀಲಾಅವರ 'ಸಾವಿಲ್ಲದ ಸಂಗಾತಿ' ಕಲಾವಿದ ಪ.ಸ. ಕುಮಾರ್ ಓದಿದರೆ, 'ಏನೆಂದು ನೆನೆಯಾಲಿ ನಿನ್ನ' ಎಂಬ ತಮ್ಮದೇ ಕವನ ಓದಿದ್ದು ಕೆ.ಮಹಾಂತೇಶ್. ಕ್ಯೂಬಾ ಕುರಿತು 'ಮೇ ಫ್ಲವರ್ ಮೀಡಿಯಾ ಹೌಸ್' ಹೊರ ತಂದಿರುವ 5 ಬಗೆಯ ಶುಭಾಶಯ ಪತ್ರ. ಕ್ರಿಯಾ ಪ್ರಕಾಶನ ಮತ್ತು ಚಿಂತನ ಪುಸ್ತಕ ಹೊರ ತಂದ 3 ಪುಸ್ತಕಗಳು ಕ್ಯೂಬಾ ಕುರಿತ ವೆಬ್‌ಸೈಟ್‌ಗಳ ಅನಾವರಣವೂ ನಡೆಯಿತು. ಸೆನೆಟ್ ಹಾಲ್ ವರ್ಣರಂಜಿತವಾಗಿ ಸಿಂಗಾರ ಗೊಂಡಿದ್ದು, 'ಚೆ' 'ಕ್ಯಾಸ್ಟ್ರೋ' ಪೋಸ್ಟರ್‌ಗಳು ಹೊಸ ಹುರುಪು ನೀಡಿದ್ದವು. ಹೊರಗಿನ ಗೋಡೆಯ ತುಂಬ ಕ್ಯೂಬಾದ ಸಾಧನೆಗಳ ಷೋಕೇಸ್ ನಿಂತಿತ್ತು.



ಕೊನೆಯಲ್ಲಿ ಕ್ರಾಂತಿಕಾರಿ ಚೇ ಕುರಿತ ಸಿನಿಮಾ ಪ್ರದರ್ಶನ. ಕೆ.ಎಸ್.ವಿಮಲಾ, ರತ್ನಾಕರ ಶೆಣೈ ಕಾರ್ಯಕ್ರಮ ನಿರೂಪಿಸಿದರು. ನಡು ನಡುವೆ ಕ್ಯೂಬಾ ದೇಶದ ಹೋರಾಟ. ಸಾಧನೆಗಳ ಕುರಿತ ಅಮೂಲ್ಯ ಮಾಹಿತಿ. ಸಮಾರಂಭದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿಜೆಕೆ. ನಾಯರ್ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್, ಆಟೋ ಚಾಲಕರಿಂದ ಹಿಡಿದು ಪತ್ರಕರ್ತರು ವಿಜ್ಞಾನಿಗಳವರೆಗೆ ವಿವಿಧ ವಿಭಾಗಗಳ ಜನರು ಸಭಾಂಗಣ ತುಂಬಿ ಹೊರಗೂ ನಿಂತು ಉತ್ಸವದಲ್ಲಿ ಪಾಲ್ಗೊಂಡು ಸಂಭ್ರಮಿಸಿದರು. ಈ ಎಲ್ಲಾ ಸಂಭ್ರಮ ಎಲ್ಲಿ ಗೊತ್ತೇ? ಜುಲೈ 26, 2009ರಂದು ಕ್ಯೂಬಾ ಸೌಹಾರ್ದ ಸಮಿತಿ, ಬೆಂಗಳೂರು ನಗರಧ ಸೆನೆಟ್ ಹಾಲ್‌ನಲ್ಲಿ ಕ್ಯೂಬಾ ಕ್ರಾಂತಿಯ 50ನೇ ವರ್ಷದ ನೆನಪಿನಲ್ಲಿ ಕ್ಯೂಬಾ ಉತ್ಸವ ಏರ್ಪಡಿಸಿತ್ತು. ○





ಕವಿತೆ



ಒಂದು ಬೆಳಕ ದೀಪ ಬೇಕು ಎಂದೆ
ಅವರು ಕ್ಯೂಬಾದ ಭೂಪಟ ನೀಡಿದರು

ವಸಂತ ಮೆಲ್ಲನೆ ಕಾಲಿಡುತ್ತಿದೆ ಎಂದೆ
'ಗ್ವಂತನಮೇರಾ' ಹಾಡು ಗಿಟಾರ್ ನ ಮೂಲಕ
ಹೊರಚೆಲ್ಲುತ್ತಿತ್ತು

ನಿನ್ನ ಕಂಗಳ ಹೊಳಪಿನ ಗುಟ್ಟೇನು ಎಂದು ಕೇಳಿದೆ
'ವಿ ಶಲ್ ಓವರ್ ಕಮ್' ಹಾಡು ಗುನುಗಿದಳು

'ಕಗ್ಗತ್ತಲ ಕಾಲದಲ್ಲೂ ಕವಿತೆ ಬರೆಯುವುದುಂಟೆ ?'ಎಂದು
ಕೇಳಿದೆ
ಕ್ಯೂಬಾದ ಹಡಗುಕಟ್ಟೆಯಲ್ಲಿ ಗೋದಿ ಇಳಿಯುತ್ತಿತ್ತು

'ಮಮ್ಮಿ ಮಮ್ಮಿ ಮಾಡ್ರ್ನ್ ಬ್ರೆಡ್' ಎನ್ನುವ ಜಾಹೀರಾತು
ಕೇಳಿದಾಗಲೆಲ್ಲಾ
ಯಾಕೋ ಕ್ಯೂಬಾದ ನೆನಪು

'ಸರಿ ಹೊಂದದ ಪದ ಆರಿಸಿ ತೆಗೆದು ಬಿಡಿ' ಎಂದರು
ಕ್ಯೂಬಾ, ವಿಯೇಟ್ನಾಂ, ಅಮೆರಿಕಾ, ವೆನೆಜುವೆಲಾ

'ಬಿಟ್ಟ ಸ್ಥಳ ತುಂಬಿ' ಎನ್ನುತ್ತಾರೆ ಶಾಲೆಯಲ್ಲಿ
ಬಿಟ್ಟು ಹೋಗಿರುವ ಜಗತ್ತಿನ ಕೊಂಡಿ ಎನ್ನುತ್ತದೆ ಕ್ಯೂಬಾ

ಹಾಡು ಎಂದರೇನು ? ಎಂದರು
ಕ್ಯೂಬಾ ಎಂದೆ

C for ಎಂದರು
ತಡಮಾಡದೆ ಹೇಳಿದೆ – ಕ್ಯೂಬಾ, ಕ್ಯಾಸ್ಟ್ರೋ, ಚೆ

'ಎಲ್ಲಾದರೂ ಇರು, ಎಂತಾದರು ಇರು' ಹಾಡು
ರೇಡಿಯೋದಲ್ಲಿ
ಕ್ಯೂಬಾ ಮರೆಯದಿರು ಎಂಬ ಸೊಲ್ಲು ನನ್ನ ಹೃದಯದಲ್ಲಿ

■ ಜಿ. ಎನ್. ಮೊಹನ್

JANASHAKTHI KANNADA VARA PATRIKE: Printed by **G.N.NAGARAJ**, No 12. 18th Cross, S.R.Nagar, BANGALORE-560027 Published by: **G.N.NAGARAJ**, No 12. 18th Cross, S.R.Nagar, BANGALORE-560027, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana**,12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor **S.Y.GURURSHANTH**, No12. 18th Cross, S.R.Nagar, BANGALORE - 560027 Editor **S.Y.GURUSHANTH**